ವಿತ್ತೀಯ ಕಾರ್ಯಕಲಾಪಗಳು

೧೯೮೫-೮೬ರ ಬೇಡಿಕೆಗಳ ಮೇಲೆ ಚರ್ಚೆ

(Sri H.D. Devegowda Minister for Public Works Command Area Development and Irrigation).—

DEMAND No. 34—MINOR IRRIGATION

Sir, on the recommendation of the Governor, I beg to move:

"That a sum not exceeding Rs. 19,62,90,000 on Revenue Account and Rs. 22,97,95,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Minor Irrigation".

DEMAND No. 35—IRRIGATION NAVIGATION DRAINAGE AND FLOOD CONTROL PROJECTS

"That a sum not exceeding Rs. 1,29,15,98,000 on Revenue Account and Rs. 1,95,83,93,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Irrigation, Navigation, Drainage and Flood Control Projects."

DEMAND No. 44—PUBLIC WORKS (EXCLUDING CONSTRUCTION)

"That a sum not exceeding Rs. 57,59, 76,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Public Works (Excluding Construction)".

DEMAND No. 45—BUILDINGS

"That a sum not exceeding Rs. 6,87,96,000 on Revenue Account and Rs. 30,11,35,000 on Capital Account inclusive of the sum granted 'on account' be granted to the Government to defray the charges will come in course of payment during the financial year ending 31st day of March 1986 in respect of "Buildings".

DEMAND No. 46 —ROADS AND BRIDGES

"That a sum not exceeding Rs. 49,96,56,000 on Revenue Account and Rs. 24,34,93,000 on Capital Account inclusive of the sum granted 'on account' be granted to the Government to

defray the charges which will come in course of payment during the financial year ending 31st day of March 1986 in respect of "Roads and Bridges".

The question was proposed.

ಅಧ್ಯಕ್ಷರು.—ಪ್ರಸ್ತಾಪವನ್ನು ಸಭೆಯ ಮುಂದೆ ಮಂಡಿಸಲಾಯಿತು. ಎಲ್ಲಾ ಬೇಡಿಕೆಗಳು ಸಭೆಯ ಮುಂದೆ ಇವೆ. ಈ ಬೇಡಿಕೆಗಳಿಗೆ ೨ ದಿವಸ ನಿಗದಿ ಮಾಡಲಾಗಿದೆ. ಚರ್ಚೆ ಹಾಗೂ ಮಂತ್ರಿಯವರ ಉತ್ತರಕ್ಕೆ ಸುಮಾರು ೧೦ ಗಂಟೆಗಳ ಅವಕಾಶ ಸಿಗಬಹುದೆಂದು ಭಾವಿಸಿ ಸಮಯವನ್ನು ಆಯಾ ಪಕ್ಷಗಳಿಗೆ ಈ ಕೆಳಕಂಡಂತೆ ವಿಂಗಡಿಸಲಾಗಿದೆ.

ಕಾಂಗ್ರೆಸ್ ಪಕ್ಷ	...	೧೮೦	ಮಿನಿಟ್‌ಗಳು
ಸಿ.ಪಿ.ಐ.	...	೩೦	
ಸಿ.ಪಿ.ಐ. (ಎಂ)	...	೩೦	
ಬಿ.ಜೆ.ಪಿ.	...	೨೦	
ಪಕ್ಷೇತರರು	...	೩೦	
ಜನತಾ ಪಕ್ಷ	...	೩೨೦	
(ಮಂತ್ರಿಯವರ ಉತ್ತರ ಸೇರಿ)			

ಆದ್ದರಿಂದ ದಯವಿಟ್ಟು ಆಯಾ ಪಕ್ಷದ ನಾಯಕರು ಹಾಗೂ ಸದಸ್ಯರು ಇದಕ್ಕೆ ಸಹಕರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಸಮಯ ನಿಗದಿ ಮಾಡುವಾಗ ಒಂದು ಸಲಹೆಯನ್ನು ಮಾಡುತ್ತೇನೆ. ವಿರೋಧ ಪಕ್ಷ ಮತ್ತು ಆಳುವ ಪಕ್ಷದ ಸದಸ್ಯರುಗಳ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಬೇಕು. ಆಳುವ ಪಕ್ಷದ ಒಟ್ಟು ಸದಸ್ಯರಲ್ಲಿ ಮಂತ್ರಿಗಳನ್ನು ಬಿಟ್ಟು ಉಳಿದ ಸದಸ್ಯರುಗಳ ಮೊತ್ತವನ್ನು ತೆಗೆದುಕೊಳ್ಳಬೇಕು. ಮತ್ತು ಅದರ ಮೇಲೆ ತಾವು ಸಮಯವನ್ನು ನಿಗದಿ ಮಾಡಬೇಕು.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಬೇಡಿಕೆಗಳನ್ನು ಮತ್ತೆ ಈ ಆಯವ್ಯಯ ಪಟ್ಟಿಯಲ್ಲಿ, ನಿಗದಿಯಾಗಿರತಕ್ಕಂತಹ ಕಾರ್ಯಕ್ರಮ. ಒದಗಿಸತಕ್ಕಂತಹ ಹಣ, ಅವರು ಇದುವರೆಗೂ ಈ ಗುರಿಯನ್ನು ತಲುಪಿದ ಬಗ್ಗೆ ಏನು ವಿವರಣೆ ಇಟ್ಟಿದ್ದಾರೆ ಅದು ಬಹಳ ಅಸಮಂಜಸವಾಗಿರತಕ್ಕಂತದ್ದು ಮತ್ತು ಈ ಸದನದ ಮೆಚ್ಚುಗೆಯನ್ನು ಪಡೆಯತಕ್ಕಂತದ್ದು ಅಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನೂ ಒಂದು ವಿಷಯ ಹೇಳಬೇಕು. ಏನೆಂದರೆ, ಏನು ಒಂದು ಈ ಬೇಡಿಕೆ ಬಗ್ಗೆ, ಕಾಮಗಾರಿಗಳ ಬಗ್ಗೆ ಹೇಳಿದ್ದಾರೆ, ಈ ಕಾಮಗಾರಿಗಳನ್ನು ವರ್ಷದ ಅವಧಿಯಲ್ಲಿ ಹಣ ಪೂರೈಸಿ ಈ ಒಂದು ಉದ್ದೇಶಗಳನ್ನು ಈಡೇರಿಸುವುದಕ್ಕೆ ಇವರಿಗೆ ಶಕ್ತಿಯಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಮಾರ್ಚ್ ತಿಂಗಳಿನಲ್ಲಿ ತಾವು ಬಜೆಟ್‌ನ್ನು ಇಟ್ಟಿರಿ. ಬಜೆಟ್ ಇಡುವಾಗ ೬೨೩ ಕೋಟಿ ರೂಪಾಯಿಗಳ ಖೋತಾ ಬಜೆಟ್‌ನ್ನು ಮಂಡಿಸಿದ್ದೀರಿ. ಆದರೆ ಮೂರು ತಿಂಗಳಿಗೆ ನಿಮ್ಮ ಉತ್ಪತ್ತಿ ಏನು ಇದೆ. ಅದನ್ನು ೬೦೦ ಕೋಟಿ ರೂಪಾಯಿಗಳೆಂದು ತೋರಿಸಿದ್ದೀರಿ. ಯಾವ ರೀತಿಯಾಗಿ ಇದನ್ನು ತೋರಿಸಿದ್ದರೆ ಎನ್ನತಕ್ಕ ಬಗ್ಗೆ ಒಂದೆರಡು ವಿವರಗಳನ್ನು ಹೇಳಬೇಕೆಂದಿದ್ದೇನೆ. ಓವರ್‌ಡ್ರಾಫ್ಟ್ ಫೆಸಿಲಿಟಿಯಿಂದ ಇಂದು ೨೫೨ ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದೀರಿ. ಅದು ಸಾಲ ಎಂದು ಹೇಳಬೇಕು, ಆದರೆ ಅದನ್ನು ತಾವು ಆದಾಯ ಎಂದು ತೋರಿಸಿದ್ದೀರಿ, ಇದು ಹೇಗಾಗುತ್ತದೆ ? ಅದು ನಮ್ಮ ತಲೆಯ ಮೇಲೆ ಹೊರಿಸಿರತಕ್ಕಂತಹ ಸಾಲ, ನೀವು ವರ್ಷೇ ವರ್ಷೇ ಮಾಡಿದ ಸಾಲ ಜೊತೆಗೆ ಸೇರಿದ ಹಾಗೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಯಿತು. ಇದು ಆದಾಯ ಏನಲ್ಲ. ಹೇಗೆ ನಮ್ಮ ಸರ್ಕಾರಕ್ಕೆ ಆದಾಯ ಬರುತ್ತದೆ ಎಂದರೆ, ಮುಖ್ಯವಾಗಿ ಎಕ್ಸೈಸ್ ಡಿಪಾರ್ಟ್‌ಮೆಂಟಿನಿಂದ ಆಮೇಲೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಹಾಗೂ ಉಳಿದ ಬೇರೆ ಬೇರೆ ಬಾಬುಗಳಿಂದಲೂ ಆದಾಯ ಬರುತ್ತದೆ. ಇವುಗಳಿಂದ ಬಹಳ ಕಡಿಮೆ ಆದಾಯ ಬರುತ್ತದೆ. ಈ ಆದಾಯದಿಂದ ಸರ್ಕಾರವು ೬ ತಿಂಗಳೂ ಸಹ ತನ್ನ ಖರ್ಚನ್ನು ಪೂರೈಸಲಿಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತೆ ಈ ನೀರಿನ ವ್ಯವಸ್ಥೆ ಏನಿದೆ, ಇದುವರೆಗೆ ಕೂಡ ಇವರ ಪ್ರಕಾರ ೧೨.೧೭ ಅಂದರೆ ೧೨ ಲಕ್ಷದ ೧೭ ಸಾವಿರ ಹೆಕ್ಟೇರಿಗೆ ನೀರನ್ನು ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ. ಈ ಕರ್ನಾಟಕ ರಾಜ್ಯದಲ್ಲಿ ಮೂರು ಕೋಟಿ ಐದು ಲಕ್ಷ ಎಕರೆ ಜಮೀನು ಇದೆ. ಮೂರು ಕೋಟಿ ಐದು ಲಕ್ಷ ಎಕರೆ ಭೂಮಿ ಇರತಕ್ಕಂತಹ ಕರ್ನಾಟಕ ರಾಜ್ಯದಲ್ಲಿ ನೀವು ನೀರು ಒದಗಿಸಲಿಕ್ಕೆ ಪ್ರಯತ್ನ ಮಾಡಿರುವುದು ೧೨ ಲಕ್ಷದ ೧೭ ಸಾವಿರ ಹೆಕ್ಟೇರ್ ಭೂಮಿಗೆ ಮಾತ್ರ. ಇದು ಆದಿಯಿಂದಲೂ ಆಗಿರುವ ಪ್ರಗತಿ. ಅಂದರೆ ೨೫ ಲಕ್ಷ ಎಕರೆಗೆ ಮಾತ್ರ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇನ್ನು ೨ ಕೋಟಿ ೮೦ ಲಕ್ಷದಷ್ಟು ಎಕರೆ ಜಮೀನಿಗೆ ನೀರು ಒದಗಿಸಲಿಕ್ಕೆ ಆಗಲಿಲ್ಲ. ಇದು ನಿಮ್ಮ ಸಣ್ಣ ನೀರಾವರಿಗೆ ಮತ್ತು ಸರ್‌ಫೇಸ್ ನೀರಾವರಿಗೆ ಬರುತ್ತದೆ. ಈ ೨ ಕೋಟಿ ೮೦ ಲಕ್ಷ ಎಕರೆ ಜಮೀನಿಗೆ ನೀರು ಒದಗಿಸಲು ಏನು ವ್ಯವಸ್ಥೆ ಮಾಡುತ್ತೀರಿ ? ಇದರ ಬಗ್ಗೆ ಏನಾದರು ಯೋಚನೆ ಮಾಡಿದ್ದೀರಾ ? ಏಕೆಂದರೆ ಸಾರ್ವಜನಿಕರಿಗೆ ನೂರಕ್ಕೆ ನೂರರಷ್ಟು ಸೌಲಭ್ಯವನ್ನು ಒದಗಸಲಿಕ್ಕೆ ತಾವು ಹೊರಟಿದ್ದೀರಿ. ಈ ಜನಗಳಿಗೆ ಏನು ಮಾಡಿದ್ದೀರಿ ಎನ್ನುವುದು ಒಂದು ಪ್ರಶ್ನೆ. ನಾನು ಹೇಳುತ್ತಿದ್ದೇನೆ, ಈ ಜನಗಳ ಕಷ್ಟ ಸುಖಗಳನ್ನು ನೋಡುವುದಕ್ಕೆ ನೀವು ಪ್ರಯತ್ನ ಮಾಡಲಿಲ್ಲ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನ್ನೂ ಮಾಡಿದ್ದಾರೆ. ಈ ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್‌ಗೆ ಹಣವನ್ನು ಒದಗಿಸಿದ್ದೀರಾ ? ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್, ಮೀಡಿಯಮ್ ಇರಿಗೇಷನ್‌ಗೆ ವರ್ಷೇ ವರ್ಷೇ ಹಣ ಒದಗಿಸುತ್ತಾರೆ. ಅದರ ಅರ್ಧದಷ್ಟಾದರೂ ಅಥವಾ ಕಾಲು ಭಾಗವಾದರೂ ಈ ಡ್ರೈಲ್ಯಾಂಡ್ ಅಭಿವೃದ್ಧಿಗೆ ಖರ್ಚು ಮಾಡಬೇಕು. ೨೫ ಲಕ್ಷ ಎಕರೆಯಷ್ಟು ಭೂಮಿಯನ್ನು ಹೊಂದಿರುವ ಮಾಲೀಕರಿಗೆ ಮಾತ್ರ ನೀವು ಹಣವನ್ನು ಖರ್ಚು ಮಾಡುತ್ತಿದ್ದೀರೇ ವಿನಹ ಬಡ ಜನಗಳು ಏನು ಇದ್ದಾರೆ, ಬೇರೆ ಬೇರೆ ಕಸುಬು ಮಾಡತಕ್ಕಂತಹ ಜನರು ಏನು ಇದ್ದಾರೆ, ಅಂತಹ ಜನಗಳಿಗೆ ನೀವು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಕೆಲವು ಸಾಹುಕಾರರಿಗೆ ಮಾತ್ರ ಅನುಕೂಲ ಮಾಡಿ ·ಕೊಡುತ್ತಿದ್ದೀರೇ ಹೊರತು ಬಡವರಿಗೆ ಅನುಕೂಲ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ತಾವು ಕೇಳಬಹುದು ನೀವು ಏನು ಮಾಡಿದ್ದೀರಾ ಎಂದು. ನಾವು ಏನು ಮಾಡಲಿಲ್ಲವೆಂದು ಉತ್ತರ ಹೇಳಲಿಕ್ಕೆ ಸಿದ್ಧನಿದ್ದೇನೆ. ಆದರೆ ನೀವು ಏನು ಮಾಡಿದ್ದೀರಾ ಎಂದು ನಾವು ಕೇಳುತ್ತಿದ್ದೇವೆ. ನಿಮ್ಮ ಬಜೆಟ್‌ನಲ್ಲಿ ೧೬ನೇ ಪೇಜ್‌ನಲ್ಲಿ ಹೇಳಿರುವ ಪ್ರಕಾರ ೬ ಯೋಜನೆಯಲ್ಲಿ ೫೮೩ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೀರಿ. ೨೩೭ ಕೋಟಿ ರೂಪಾಯಿಗಳನ್ನು ಮಾತ್ರ ೩೧_೩–೮೫ ರವರೆಗೆ ನೀವು ಖರ್ಚು ಮಾಡಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಪ್ರಾಜೆಕ್ಟ್‌ಗಳ ಕೆಲಸ ಮುಗಿಸಲು ಇವತ್ತು ಹಣ ಎಷ್ಟು ಬೇಕಾಗುತ್ತದೆ ?

೧–೦೦ ಪಿ.ಎಂ.

ಈಗ ನಿಮ್ಮ ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳಿಗೆ ನಿಮ್ಮ ಇರಿಗೇಶನ್ ಪ್ರಾಜೆಕ್ಟ್ ಪ್ರಕಾರ ಒಟ್ಟು ೨,೪೮೩.೨೧ ಕೋಟಿ ರೂಪಾಯಿಗಳು ಬೇಕು. ಇದರಲ್ಲಿ ನೀವು ಮಾರ್ಚ್ ೧೯೮೦ರ ವರೆಗೆ ಖರ್ಚು ಮಾಡಿರತಕ್ಕಂತಾದ್ದು –೫೩೭ ಕೋಟಿ ರೂಪಾಯಿಗಳು. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ೫೮೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅಂದರೆ ಒಟ್ಟು ೧,೧೧೯ ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದ್ದೀರಿ. ಈಗ ಸ್ಪಿಲ್ ಓವರ್ ಏನಿದೆ, ಅಂದರೆ ಒಟ್ಟು ೨,೪೯೩ ಕೋಟಿ ರೂಪಾಯಿಗಳಲ್ಲಿ ನೀವು ಖರ್ಚು ಮಾಡತಕ್ಕಂತಾದ್ದು ಏನು ಬಾಕಿ ಇದೆ ಅದು ೧೧,೩೭೪ ಕೋಟಿ ರೂಪಾಯಿಗಳು. ನೀವು ನೇರವಾಗಿ ನಿಗದಿ ಮಾಡಿದ ಅವಧಿಗೆ ಸರಿಯಾಗಿ ಕೆಲಸ ಪೂರೈಸಿದ್ದರೆ ಇಷ್ಟು ಎಕ್ಸಲೇಷನ್ ಬರುತ್ತಿರಲಿಲ್ಲ. ವರ್ಷವರ್ಷೇ ನೀವು ಏನು ಖರ್ಚು ಮಾಡುತ್ತಿದ್ದೀರಿ, ಅದನ್ನು ತಡ ಮಾಡುತ್ತಿರುವುದರಿಂದ ಯಾವುದೋ ಕಾರಣಗಳಿಂದ, ಏನೋ ಕಾರಣಗಳಿಂದ ನೀವು ತಡ ಮಾಡುತ್ತಿದ್ದೀರಿ. ಇದರಿಂದ ಹೆಚ್ಚಿನ ಖರ್ಚು ಎಷ್ಟು ಆಗುತ್ತಿದೆ ? ನಿಮ್ಮ ಎಲ್ಲಾ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳೂ ಮೊದಲು ಅಂದಾಜು ಆಗಿದ್ದು ಬೇರೆ. ಮತ್ತೆ ಪೂರ್ಣ ಆಗುವಾಗ ಎಷ್ಟು ಆಯಿತು ಎಂದರೆ ೧ರಿಂದ ೫ ಪಟ್ಟು ಜಾಸ್ತಿ ಖರ್ಚು ಮಾಡುವುದಕ್ಕೆ ಹೋಗಿದ್ದೀರಿ ಅಂದರೆ, ೧,೩೭೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿದ ಅಂದಾಜು ಜೊತೆಗೆ ಎಸ್ಕಲೇಶನ್ ಪ್ರೈಸಸ್ ಎಷ್ಟು ಆಗಬಹುದೆಂದು ನೀವೇನಾದರೂ ನಿಗದಿ ಮಾಡಿಕೊಂಡಿ

ದ್ದೀರಾ ? ಅಥವಾ ಏನು ಒಂದು ಇಷ್ಟೇ ಅವಧಿಯಲ್ಲಿ ಇವೆಲ್ಲವನ್ನೂ ಪೂರೈಸಬೇಕೆಂದು ನೀವೇನಾದರೂ ಕಟ್ಟುನಿಟ್ಟಾಗಿ ನಿಮ್ಮ ಅಧಿಕಾರಿಗಳಿಗೆ ಸರಕಾರದಿಂದ ನಿರ್ದೇಶನ ಕೊಟ್ಟಿದೆಯೆ ? ಅವರು ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿದ್ದೀರಾ ? ನನ್ನ ಅನುಭವದಿಂದ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಾನು ಪಿ.ಎ.ಸಿ. ಛೇರ್ಮನ್ ಆಗಿದ್ದೆ, ಆಗ ಗಮನಕ್ಕೆ ಬಂದಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಾದರೆ, ಈ ಸರಕಾರದಿಂದಾಗಲೀ ಅಥವಾ ಇನ್ನಾವುದೇ ಸರಕಾರದಿಂದಾಗಲೀ, ನೀವು ಅನುಸರಿಸತಕ್ಕಂತಹ ನೀತಿನಿಯಮಗಳಿಂದ ನನ್ನ ಅಂದಾಜಿನ ಪ್ರಕಾರ ನಿಮ್ಮ ಅಧಿಕಾರಿ ವರ್ಗಗಳವರಿಂದ ಯಾವುದನ್ನೂ ಸಕಾಲದಲ್ಲಿ ಪೂರೈಸುವುದಕ್ಕೆ ಆಗುವುದಿಲ್ಲ. ಮಾನ್ಯ ದೇವೇಗೌಡರವರು ನನ್ನ ಸ್ನೇಹಿತರು. ಅವರು ಈ ಹಿಂದೆ ವಿರೋಧಪಕ್ಷದಲ್ಲಿದ್ದಾಗ ಇರಿಗೇಶನ್ ಪ್ರಾಜೆಕ್ಟ್‌ನ ಮೇಲೆ ಮತ್ತು ಲೋಕೋಪಯೋಗಿ ಇಲಾಖೆ ಮೇಲೆ ಏನೇನು ಮಾತನಾಡುತ್ತಿದ್ದರು ಎನ್ನುವುದೆಲ್ಲಾ ನನಗೆ ಗೊತ್ತು. ಆದರೆ ಅವರೇ ಇವೊತ್ತಿನ ದಿವಸ ಮಂತ್ರಿಗಳಾಗಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ, ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಮಾತನಾಡುವುದು ಒಂದಾದರೆ, ಮಂತ್ರಿಯಾಗಿ ಅದೇ ಕೆಲಸ ಮಾಡುವಾಗ ಕಷ್ಟನಷ್ಟಗಳು ಏನು ಬರುತ್ತದೆ ಎನ್ನುವುದು ಮತ್ತೊಂದು. •ತಾವು ಒಂದು ಮಾತನಾಡಿದ್ದೀರಿ. ಅದು ನನ್ನ ಕಿವಿಯಲ್ಲಿ ಇನ್ನೂ ಕೇಳಿದ ಹಾಗೆ ಇದೆ. ಏನೆಂದರೆ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಾಗ. ಲೋಕೋಪಯೋಗಿ ಇಲಾಖೆಯಲ್ಲಿಯೂ ಕೂಡಾ ಹಿಂದುಳಿದವರನ್ನು, ಎಸ್.ಸಿ. ಎಸ್.ಟಿ. ಜಾತಿಯವರನ್ನು ಪೋಸ್ಟ್ ಮಾಡುತ್ತಿದ್ದೀರಿ ಎಂದು ತಾವು ಹೇಳಿದ್ದೀರಿ. ಅದರ ಮೇಲೆ ದೊಡ್ಡ ದಾಂಧಲೆ ಆಯಿತು. ಬದಲಾವಣೆ ಮಾಡತಕ್ಕಂತಹ ಒಂದು ಪ್ರಸಂಗ ಬಂತು. ಆದರೆ ತಮಗೆ ಒಂದು ಕಿವಿ ಮಾತು ಹೇಳುತ್ತಾ ಇದ್ದೇನೆ. ನೀವು ನಿಜವಾಗಿಯೂ ಕೂಡಾ, ಶಕ್ತಿಯುತವಾಗಿ, ಪ್ರಾಮಾಣಿಕವಾಗಿ ಕೆಲವೊಂದು ಧ್ಯೇಯಧೋರಣೆಗಳನ್ನು, ಉದ್ದೇಶಗಳನ್ನು, ಸಾಧನೆ ಮಾಡತಕ್ಕಂತಹ ಸಂಕಲ್ಪವನ್ನು ತಾವು ಮಾಡಿದ್ದರೆ, ನಾನು ತಮಗೆ ಹೇಳುವುದು ಇಷ್ಟೇ. ಏನೆಂದರೆ ಯಾರು ತಮ್ಮ ಜಾತಿಯವರು ಎಂದು ಹೇಳಿ ಬರುತ್ತಾರೆ ಅಂಥಹವರನ್ನು ಮನೆಯಲ್ಲಾಗಲೀ, ಆಫೀಸಿನಲ್ಲಾಗಲೀ, ಬರಲು ಬಿಡಕೂಡದು. ಒಂದು ವೇಳೆ ಬಂದರೂ ಅಂತ ಇಟ್ಟುಕೊಳ್ಳೋಣ ಬಂದರೆ ಸೆಕ್ರೆಟರಿಯೇಟ್ ರೂಲ್ಸ್ ಪ್ರಕಾರ ಹಾಗೆ ಬರಲಿಕ್ಕೆ ಆಗುವುದಿಲ್ಲ ಎಂದು ಹೇಳಬೇಕು. ಪರ್ಮಿಶನ್ ತೆಗೆದುಕೊಳ್ಳದೇ ಯಾರೂ ಸಹ ಯಾವ ಮಂತ್ರಿಯವರನ್ನೂ ನೋಡುವುದಕ್ಕೆ ಆಗುವುದಿಲ್ಲ. ಯಾವ ಆತಂಕವಿಲ್ಲದೇ ನಮ್ಮ ಜಾತಿಯ ಮಂತ್ರಿಗಳು ಇದ್ದಾರೆ ಎಂದು ತಿಳಿದುಕೊಂಡು ಯಾರಾದರು ತಮ್ಮ ಮನೆಗಾಗಲೀ, ಆಫೀಸಿಗಾಗಲೀ, ಬಂದಾಗ ಅವರಿಗೆ ಏನಾದರೂ ಉತ್ತೇಜನ ಸಿಕ್ಕಿದರೆ, ನಿಮ್ಮ ಕೆಲಸ ಕಾರ್ಯಗಳು ಒಂದೂ ಆಗುವುದಿಲ್ಲ. ಇದನ್ನು ನನ್ನ ಒಂದು ಅನುಭವದ ಮೇಲೆ ಹೇಳಿದೆ. ಶ್ರೀಮಾನ್ ದೇವೇಗೌಡರವರು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎಂಬುದನ್ನು ನಾನು ಅವರ ಆಫೀಸಿಗೆ ಹೋಗಿಯಾಗಲೀ, ಮನೆಗೆ ಹೋಗಿಯಾಗಲೀ ನೋಡಿಲ್ಲ. ಆದರೆ ಒಂದು ವಿಚಾರವನ್ನು ನಾನು ಹೇಳುತ್ತೇನೆ, ಏನು ಬೀದಿಯಲ್ಲಿ ಮಾತುಗಳು ಇದ್ದಾವೆ, ಅವುಗಳ ಪ್ರಕಾರ ಅಂತಹವರಿಗೆ ಮಾನ್ಯ ದೇವೇಗೌಡರವರಿಂದ ಉತ್ತೇಜನ ಸಿಕ್ಕುತ್ತದೆಂದು ಕೇಳಿದ್ದೇನೆ. ಅದು ಸುಳ್ಳೂ ಇರಬಹುದು. ಅಥವಾ ನಿಜವೂ ಇರಬಹುದು.

ತಾವು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೀರೆಂದು ಹೇಳಬಹುದು. ಇದಕ್ಕೆ ನಿಶ್ಚಯವಾದ ಮನಸಿದ್ದರೆ ಯಾರ್ಯಾರು ಆಯಾಯಾ ಪ್ರದೇಶಗಳಲ್ಲಿರತಕ್ಕಂತಹ ಜನಗಳು ಇದ್ದಾರೋ, ಆ ಜಾಗದಲ್ಲಿಯೇ ಹುಟ್ಟಿರುತ್ತಾರೋ ಅಲ್ಲಿಗೆ ಅವರನ್ನು ಪೋಸ್ಟ್ ಮಾಡಬೇಡಿ. ಅದನ್ನು ಮೊದಲು ಕೈಬಿಡಿ. ಹೈದ್ರಾಬಾದ್ ಕರ್ನಾಟಕದಲ್ಲಿರತಕ್ಕಂತಹವರಿಗೆ ಅಲ್ಲಿಗೆ ವರ್ಗ ಮಾಡಿದರೆ ಅವರು ಅಲ್ಲಿರತಕ್ಕಂತಹ ಜನಗಳ ಜೊತೆಗೆ ಸೇರಿಕೊಂಡು ಮತ್ತೆ ಅವ್ಯವಹಾರ ಮಾಡಲಿಕ್ಕೆ ದಾರಿಯಾಗುತ್ತದೆ. ಇದು ನನಗೆ ತಿಳಿದ ಮಾತು, ನನ್ನ ಅನುಭವಕ್ಕೆ ಬಂದ ಮಾತು. ಇದನ್ನು ನೀವೂ ಒಪ್ಪುತ್ತೀರೆಂದು ನನಗನ್ನಿಸುತ್ತದೆ. ಇಂತಹ ಆಫೀಸರ್‌ಗಳನ್ನು ಇಂತಲ್ಲಿಯೇ ಹಾಕಿ ಎಂದು ತಮ್ಮ ಮೇಲೆ ಒತ್ತಡ ತರಬಹುದು. ನಾನೂ ರಾಜಕೀಯದಲ್ಲಿ ಇದ್ದೇನೆ. ಆದರೆ ರಾಜಕೀಯ ಒತ್ತಡಕ್ಕೋಸ್ಕರ ಮಣಿದು ಎಷ್ಟೋ ಜನರನ್ನು ವರ್ಗಾವಣೆ ಮಾಡತಕ್ಕಂತಾದ್ದರ ಬಗ್ಗೆ ಒಂದು ನಿಗದಿಯಾಗಿರತಕ್ಕಂತಹ ತೀರ್ಮಾನವನ್ನು ತಾವುಗಳು ತೆಗೆದುಕೊಳ್ಳಲೇ ಬೇಕು. ನಾನು ಹೇಳುತ್ತೇನೆ, ಒಂದು ೫ ಪರ್ಸೆಂಟ್ ಬಿಟ್ಟರೆ, ರಾಜಕೀಯ ಒತ್ತಡಕ್ಕೆ ಮಣಿಯ ಬಾರದು ಎಂದು ನನ್ನ ಸ್ಪಷ್ಟವಾದ ಪ್ರಾರ್ಥನೆ. ನೀವು ಜಾಸ್ತಿ ಮಾಡಿದರೆ, ಪುನಃ ಸರಕಾರದ ಆಡಳಿತ ವರ್ಗದಲ್ಲಿ ಸಡಿಲ ಉಂಟಾಗಿ ನಿಮ್ಮ ಉದ್ದೇಶ ಸಾಧನೆಯಾಗುವುದಿಲ್ಲ ಎಂದು ಹೇಳುತ್ತೇನೆ. ಈ ಒಂದು ನೀರಾವರಿ ಬಗ್ಗೆ ಎಷ್ಟು ಸಾಧನೆ ಮಾಡಬೇಕೋ ಅಷ್ಟು ಸಾಧನೆ ಮಾಡುವ ಬಗ್ಗೆ ನಿಗದಿ

ಯಾದ ಪುಸ್ತಕಗಳನ್ನು ಒದಗಿಸಿದ್ದೀರಿ. ಅದರ ಪ್ರಕಾರ ನಾನು ಹೇಳುವುದಾದರೆ, ಇದುವರೆಗೂ ನೀವು ಎಷ್ಟು ಸಾಧನೆ ಮಾಡಿದ್ದೀರಿ ಅಂದರೆ, ೧೯೮೦ನೇ ಇಸವಿಯುವರೆಗೆ ೬ನೇ ಯೋಜನೆ ಪ್ರಾರಂಭ ಆಗುವ ಮುಂಚಿತವಾಗಿ ನೀವು ೯.೭೫ ಸಾವಿರ ಹೆಕ್ಟಾರ್‌ಗಳನ್ನು ನೀವು ಸಾಧನೆ ಮಾಡಿದ್ದೀರಿ ಎಂದು ಇಟ್ಟುಕೊಳ್ಳೋಣ. ೬ನೇ ಯೋಜನೆಯಲ್ಲಿ ೨,೪೨,೦೦೦ — ಹೆಕ್ಟಾರ್‌ಗಳನ್ನು ನೀವು ನೀರಾವರಿಗೆ ಕೊಟ್ಟಿದ್ದೀರಿ. ನಾನು ಹೇಳುತ್ತಿರುವುದು ಇರಿಗೇಶನ್ ಪ್ರಾಜೆಕ್ಟ್‌ಗೆ ೧೯೮೩ರ ಪ್ರಕಾರ ಹೇಳುತ್ತಾ ಇದ್ದೇನೆ ಇದರಲ್ಲಿ ಒಟ್ಟಿಗೆ ೧೨,೧೭,೦೦೦ ಹೆಕ್ಟೇರ್‌ಗಳು ಆದುವು ಅಂದರೆ, ನಮ್ಮ ರಾಜ್ಯದಲ್ಲಿ ವಾಟರ್ ಪೊಟೇನ್ಸಿಯಾಲಿಟಿ ಎಷ್ಟಿದೆ, ನೀವು ಎಷ್ಟು ಸಾಧನೆ ಮಾಡಬೇಕೆನ್ನ ತಕ್ಕಂತಾದ್ದರ ಬಗ್ಗೆ ನೀವು ಅಂಕಿ-ಅಂಶಗಳ ಮೂಲಕ ಹೇಳಿದ್ದೀರಿ, ಅದನ್ನು ನಾನು ಹೇಳುತ್ತಿದ್ದೇನೆ. ನೀವು ಎಲ್ಲಾ ಕೆಲಸವನ್ನೂ ಮುಗಿಸಿ ಬಿಟ್ಟರೆ ೧೯,೩೩,೦೦೦ ಹೆಕ್ಟೇರ್‌ಗಳು ನೀರಾವರಿ ಆಗುತ್ತದೆಂದು ಬರೆದುಕೊಂಡಿದ್ದೀರಿ. ಈಗ Ultimate potential of all on going Projectsನ ಬ್ಯಾಲೆನ್ಸ್ ಎಷ್ಟಿದೆ ಎಂದರೆ ೧೧,೩೩,೦೦೦ ಹೆಕ್ಟೇರ್‌ಗಳಷ್ಟು, ಅಂದರೆ ನೀವು ಇನ್ನೂ ಸಾಧನೆ ಮಾಡಬೇಕಾಗಿದೆ. ಈ ಎಕಾನಮಿಕ್ ಸರ್ವೆಯಲ್ಲಿ ಏನು ಹೇಳುತ್ತದೆ ಅಂದರೆ...

"As against the Ultimate irrigation potential of about 55 lakh hectares, the potential expected to be exploited through major, medium and minor irrigation projects by the end of the year 1984-85 is placed at 25.06 lakh hectares". ಈಗ ಒಟ್ಟು ನೀರು ಕರ್ನಾಟಕ ರಾಜ್ಯದಲ್ಲಿ ಎಷ್ಟು ಇದೆ. Whether, You call it dependability or availability I don't know. "Economically utilisable water potential for irrigation may be taken as about 45.300 MCUM (1600TMC) (Irrigation projects in Karnataka-1983) The ultimate irrigation potential of the State, from all sources has been estimated at about 55 lakh hectares". ಈಗ ನೀವು ಕೆಲಸ ಪ್ರಾರಂಭ ಮಾಡಿದ್ದೀರಿ. ಕೆಲಸ ಪ್ರಾರಂಭ ಮಾಡಿ ಎಲ್ಲ ನಿಂತುಕೊಂಡಿದ್ದೀರಿ ? ೧೯ನೇ ಸ್ಥಾನದಲ್ಲಿ ನಿಂತುಕೊಂಡಿದ್ದೀರಿ. ಒಟ್ಟಾರೆ ತಾವು ಸಾಧನೆ ಮಾಡಿರತಕ್ಕಂಥಾದ್ದು ೯ ಲಕ್ಷ ೭೫ ಸಾವಿರ ಮಾತ್ರ. ತಾವು ಸಾಧನೆ ಮಾಡಬೇಕಾದುದು ಇನ್ನೂ ಎಷ್ಟು ಇದೆ ? ೫೫ ಲಕ್ಷ ಎಕರೆಗಳನ್ನು ಯಾವಾಗ ಸಾಧನೆ ಮಾಡುತ್ತೀರಿ ? ಇದು ನಿಮ್ಮ ಕೈಯಲ್ಲಿ ಸಾಧ್ಯವೆ ? ನಮ್ಮಲ್ಲಿ ಒಟ್ಟು ೧೬೦೦ ಟಿ.ಎಂ.ಸಿ. ನೀರು ಇದ್ದು ಸಹ ನೀವು ಏನು ಸಾಧನೆಯನ್ನು ಮಾಡಿದ್ದೀರಿ ? ಈ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರಿಯಾದ ರೀತಿಯಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೀರಾ ? ಕಾಲುವೆಗಳನ್ನು ನಿರ್ಮಾಣ ಮಾಡಿದ್ದೀರಾ ? ಏನು ವ್ಯವಸ್ಥೆ ಮಾಡಿಕೊಂಡಿದ್ದೀರಿ. ನಾನು ತಮ್ಮ ಬಡ್ಜೆಟ್‌ನ್ನು ಗಮನಿಸಿದ್ದೇನೆ. ನೀವು ಏನು ಹೇಳಿದ್ದೀರಿ ? ನಿಮ್ಮ ಬಡ್ಜೆಟ್‌ನಲ್ಲಿ ವಾಸ್ತವಾಂಶದ ಅಂಕಿಅಂಶಗಳ ಪ್ರಕಾರ ಸರ್ಕಾರದವರು ಕೊಟ್ಟಿರುವಂತಹ ಪುಸ್ತಕದ ಅಂಕಿಅಂಶಗಳ ಪ್ರಕಾರ ನಾವು ನೋಡಿದರೆ ವಿಪರೀತವಾದ ವ್ಯತ್ಯಾಸಗಳು ಇವೆ. ಅದಕ್ಕಾಗಿ ನಾನು ಹೇಳುತ್ತೇನೆ, ನೀವು ನಿಮ್ಮ ಅಭಿವೃದ್ಧಿ ಸಾಧನೆ ಮಾಡಲು ನಿಮ್ಮ ಗುರಿಯನ್ನು ಮುಟ್ಟುವುದಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ ? ಈಗ ನೀವು ಸಾಧನೆ ಮಾಡಿರುವುದು ಕೇವಲ ೯ ಲಕ್ಷ ಚಿಲ್ಲರೆ ಮಾತ್ರ. ಇನ್ನು ೫೫ ಲಕ್ಷ ಎಕರೆಗಳಷ್ಟು ಸಾಧನೆ ಮಾಡುವುದು ಯಾವಾಗ ? ನೀವು ೯ ಲಕ್ಷ ಎಕರೆಗಳಿಗೆ ಮಾತ್ರ ಸೀಮಿತ ಮಾಡಿಕೊಂಡಿದ್ದೀರಿ, ಆದ್ದರಿಂದ ಇನ್ನು ಉಳಿದ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಹೇಳಬೇಕು. ನೀವು ಇದಕ್ಕೆ ಬಡ್ಜೆಟ್‌ನಲ್ಲಿ ಹಣವನ್ನು ಏನಾದರೂ ಒದಗಿಸಿದ್ದೀರಾ ? ಯಾವ ರೀತಿಯಲ್ಲಿ ಹಣವನ್ನು ಒದಗಿಸಿ ಕೊಡುತ್ತೀರಿ ? ನೀವು ಏನಾದರೂ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೀರಾ ಅಥವಾ ಇಲ್ಲವೇ ? ತಮ್ಮ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ೧೯೭೯-೮೦ರಲ್ಲಿ ಮತ್ತು ೧೯೮೫-೮೬ರವರೆವಿಗೆ ತಾವು ಎಷ್ಟು ಆದಾಯ ಗಳಿಸಿದ್ದೀರಿ ? ಮತ್ತು ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ?

(A picture of Karnataka Budget 1984-85)

Irrigation Projects

(Commercial)

Revenue from Departmental Undertakings (Net)

(Rs. in Lakhs)

	1979-80	1980-81	1981-82
Revenue	457.00	247.07	755.41
Expenditure	4476.93	5174.89	6014.14
	1982-83	1983-84	1984.85
Revenue	384.93	393.40	422.25
Expenditure	6866.17	7751.71	9004.00

Rs. 493.49 cores is also added on to this annual Expenditure".

ಈ ೩೪ ಕೋಟಿ ರೂಪಾಯಿಗಳು ಸುಮಾರಾಗಿ ನಿಮ್ಮ ೭ ವರ್ಷಗಳ ಆದಾಯ. ಆದರೆ ತಾವು ಖರ್ಚು ಎಷ್ಟು ಮಾಡಿದ್ದೀರಿ ? ೪೯೩.೪೯ ಕೋಟಿ ರೂಪಾಯಿಗಳನ್ನು ಈ ಇರಿಗೇಷನ್ ಪ್ರಾಜೆಕ್ಟ್‌ಗಳ ಮೇಲೆ ತಾವು ಖರ್ಚು ಮಾಡಿದ್ದೀರಿ ? Whether this is a better debt or whether this is a liability or whether this is an incrme ? Are you going to continue this procedure in internity to incur an expenditure to that extent ? Ap rt from the actual expenditure, how long you want to do it. Whether you are going to improve the lot of the people who are residing in the area other than the irrigation project areas ? What is the programme ? The people of Karnataka have paid Rs. 493 crores. What action you are going to take to collect this expenditure ? There are two items, ಆ ಎರಡು ಐಟಂಗಳ ಯಾವುವೆಂದರೆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಕಂದಾಯ ಹಾಕುವುದು. ಎರಡನೆಯದು ಬೆಟರ್‌ಮೆಂಟ್ ಲೆವಿ. ಮಾನ್ಯ ಅಧ್ಯಕ್ಷರೇ, ತಾವು ಹೇಳಬೇಕು. ಬೆಟರ್‌ಮೆಂಟ್ ಲೆವಿ ಆಕ್ಟ್ ಏತಕ್ಕೆ ಇದೆ ? ಬೆಟರ್‌ಮೆಂಟ್ ಲೆವಿ ಆಕ್ಟನ್ನು ಜಾರಿಗೆ ಕೊಟ್ಟಿದ್ದೀರಾ ? ಜಾರಿಗೆ ಕೊಡಬಾರದೆಂದು ಮಾಡಿಕೊಂಡಿದ್ದೀರಾ ? ಒಂದು ವೇಳೆ ಜಾರಿಗೆ ಕೊಡಬಾರದೆಂದು ಮಾಡಿಕೊಂಡಿದ್ದರೆ ಆ ಆಕ್ಟ್ ತಮಗೆ ಏತಕ್ಕೆ ಬೇಕು ? ಇದನ್ನು ತಾವು ಏತಕ್ಕೆ ಜಾರಿ ಮಾಡುವುದಿಲ್ಲ. ದಯಮಾಡಿ ತಾವು ಹೇಳಬೇಕು. ಕಾನೂನು ಇಟ್ಟುಕೊಂಡಿದ್ದರೂ ಕೂಡ ತಾವು ಏತಕ್ಕೆ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವುದಿಲ್ಲ. ರೈತರನ್ನು ತಾವು ಸಂತೃಪ್ತರನ್ನಾಗಿ ಇಟ್ಟುಕೊಳ್ಳುವುದಕ್ಕೆ ಈ ರೀತಿ ಮಾಡಿದ್ದೀರಾ ? ಯಾವ ರೈತನೇ ಆಗಲಿ ಬೆಟರ್‌ಮೆಂಟ್ ಲೆವಿಯನ್ನು ಕೊಡುವುದಿಲ್ಲವೆಂದು ಹೇಳುವುದಿಲ್ಲ. ಯಾವ ರೈತನೇ ಆಗಲಿ ನೀರನ್ನು ಉಪಯೋಗ ಮಾಡಿಕೊಂಡು ಕಂದಾಯ ಕೊಡುವುದಿಲ್ಲವೆಂದು ಹೇಳುವುದಿಲ್ಲ, ಸ್ವಾಮಿ, ನಾನು ಆ ಜನಗಳನ್ನು ಭೇಟಿ ಮಾಡಿದಾಗ ಅವರು ನನಗೆ ಹೇಳಿದರು, ನೀರು ನಮಗೆ ಸರಿಯಾಗಿ ಸರ್ಕಾರದವರು ಒದಗಿಸಿಕೊಡುತ್ತಿಲ್ಲ. ಅಂದಮೇಲೆ ನಾವು ಯಾವ ರೀತಿ ಕಂದಾಯ ಮತ್ತು ಬೆಟರ್‌ಮೆಂಟ್ ಲೆವಿಯನ್ನು ಕೊಡಬೇಕು ಹೇಳಿ ಎಂದು ಪ್ರಶ್ನೆ ಮಾಡಿದರು. ಆದ್ದರಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ಸರಿಯಾಗಿ ನೀರನ್ನು ಒದಗಿಸಿಕೊಟ್ಟು ಬೆಟರ್‌ಮೆಂಟ್ ಲೆವಿಯನ್ನು ಮತ್ತು ಕಂದಾಯವನ್ನು ಸರಿಯಾಗಿ ಅಳತೆ ಮಾಡಿ ನಿಗದಿ ಮಾಡಿ ಕೊಟ್ಟರೆ ನಾವು ಕೊಡುತ್ತೇವೆಂದು ಎಷ್ಟೋ ಜನ ನನ್ನ ಹತ್ತಿರ ಹೇಳಿದ್ದಾರೆ. ಅದನ್ನು ಬಿಟ್ಟು, ಅವರು ಕೊಡುತ್ತೇವೆ ಎಂದರೂ, ನೀವು ಕೊಡಬೇಡಿ ಎಂದರೆ ಹೇಗೆ ? ಏತಕ್ಕೆ ಹೀಗೆ ? ನಿಮಗೆ ಹಣ ವಸೂಲು ಮಾಡುವುದಕ್ಕೆ ಏನಾಗಿದೆ? ನೀವು ಹಣವನ್ನು ವಸೂಲು ಮಾಡಿದರೆ ಈ ಜನಗಳ ಮೇಲೆ ೪೯೩ ಕೋಟಿ ರೂಪಾಯಿಗಳ ಏನು ಹೊರೆ ಇತ್ತು, ಅದನ್ನು ತಪ್ಪಿಸುವುದಕ್ಕೆ ಆಗುತ್ತಿರಲಿಲ್ಲವೇ ? ೪೯೩ ಕೋಟಿ ರೂಪಾಯಿಗಳನ್ನು ನೀವು

ಏನು ಬಡವರು ಬಡವರು ಬಡವರು ಬಡವರು ಎಂದು ಹೇಳಿಬಿಟ್ಟು ಹರಿಕಥೆ ಮಾಡುತ್ತಿದ್ದೀರಿ, ಅವರಿ ಗೋಸ್ಕರ, ಇದನ್ನು ಖರ್ಚು ಮಾಡಿದ್ದರೆ, ಅವರ ಆರ್ಥಿಕ ಸ್ಥಿತಿ ಬದಲಾವಣೆಯಾಗುತ್ತಿರಲಿಲ್ಲವೇ ? ಅವರ ವಿದ್ಯಾಭ್ಯಾಸದ ವ್ಯವಸ್ಥೆ ಬದಲಾವಣೆಯಾಗುತ್ತಿರಲಿಲ್ಲವೇ ? ಈ ಜನರೂ ಸಹ ಈ ದೇಶದಲ್ಲಿ ವಾಸ ಮಾಡಲಿಕ್ಕೆ ಒಳ್ಳೆಯ ವಾತಾವರಣ ಬರುತ್ತಿರಲಿಲ್ಲವೇ ? ನೀವು ಏತಕ್ಕೆ ಗಮನ ಕೊಡಲಿಲ್ಲ ? ಶ್ರೀಮಾನ್ ದೇವೇಗೌಡರು ಬಹಳ ಶಕ್ತರಿದ್ದಾರೆ, ಎಲ್ಲಾ ತಿಳಿದುಕೊಂಡಿದ್ದಾರೆ, ತಿಳಿದುಕೊಂಡೂಗೂ ಈ ಕೆಲಸ ಮಾಡಲಿಕ್ಕೆ ಅವರಿಗೆ ಆತಂಕ ಏನಿದೆ ? ಅದನ್ನು ದಯವಿಟ್ಟು ಅವರ ಉತ್ತರದಲ್ಲಿ ಸರಿಯಾಗಿ ಹೇಳಬೇಕು. ಇದನ್ನು ಪುನಃ ಜೀವಂತ ಇಟ್ಟುಕೊಂಡು ಏತಕ್ಕೆ ವಜಾ ಮಾಡಲಿಕ್ಕೆ ಹೋಗುವುದಿಲ್ಲ? ಕಾರಣ ಏನು ?

ಅಧ್ಯಕ್ಷರೇ, ಏತಕ್ಕೆ ವಜಾ ಮಾಡಲಿಕ್ಕೆ ಹೋಗುವುದಿಲ್ಲ ಎಂದರೆ ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ. ಇದನ್ನು ವಜಾ ಮಾಡಿದರೆ ಕೇಂದ್ರ ಸರಕಾರದವರು ಹಣ ಕೊಡುವುದಿಲ್ಲ. ಬೆಟರ್‌ಮೆಂಟ್ ಲೆವಿ ವಸೂಲು ಮಾಡದೆ, ಹಣವನ್ನು ಕೊಡುತ್ತಾರೆ, ಕೊಡುತ್ತಾರೆ, ಎಂದು ಹೇಳಿ ಕೇಂದ್ರ ಸರಕಾರದವರು ನಿರೀಕ್ಷಣೆ ಮಾಡಿ ಇವರಿಗೆ ಹಣ ಕೊಡುತ್ತಾರೆ. ಇದನ್ನು ಇಟ್ಟುಕೊಂಡು ಇದನ್ನು ಬಾಕಿಯಾಗಿಯೇ ಇಟ್ಟು ಕೊಂಡು ಈ ಹಣ ಎಷ್ಟಿದೆ ಎಂದು ತೋರಿಸಿಕೊಂಡು, ಈ ಆದಾಯ ಬರುತ್ತದೆ ಎಂದು ತೋರಿಸಲಿಕ್ಕೆ ಬಿಟ್ಟು, ಹಣವನ್ನು ಕೇಂದ್ರ ಸರಕಾರದಿಂದ ವಸೂಲು ಮಾಡತಕ್ಕಂಥ ತಂತ್ರ ಇದು.

ಮಾನ್ಯ ಅಧ್ಯಕ್ಷರೇ, ತಮಗೆ ಹೇಳುತ್ತಿದ್ದೇನೆ, ಏನೆಂದರೆ ಇವರು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರದವರು ಹಣ ಕೊಡುವುದಿಲ್ಲ, ಹಣ ಕೊಡುವುದಿಲ್ಲ ಎಂದು ಬಹಳ ಹೇಳುತ್ತಿದ್ದಾರೆ. ಇವರು ಬಹಳ ಬುದ್ಧಿವಂತರಿದ್ದಾರೆ, ಬಹಳ ತಂತ್ರವನ್ನು ಉಪಯೋಗಿಸುತ್ತಿದ್ದಾರೆ, ಬಹಳ ಸಂತೋಷ. ಕೇಂದ್ರ ಸರಕಾರದಿಂದ ಎಷ್ಟು ಹಣ ಬಂದಿದೆ. ಇವರ ಪ್ರಕಾರ, ಮಾಡಿಫಿಕೇಷನ್ ಇನ್ ಡೀಟೈಲ್ಡ್ ಎಸ್ಟಿಮೇಟ್ ಆಫ್ ರೆವಿನ್ಯೂ ರಿಸೀಟ್ಸ್ ಅಂಡ್ ಎಕ್ಸ್‌ಪೆಂಡೀಚರ್, ನನಗೆ ಕೊಟ್ಟಿರುವುದು, ಇದರ ಪ್ರಕಾರ ಯಾವ ಬಾಬಿಗೆ ಕೇಂದ್ರ ಸರಕಾರ ಹಣ ಕೊಟ್ಟಿದೆ ಎಂದು ಹೇಳಿ ಇರ ಪಟ್ಟಿಗಳಲ್ಲಿ ಅಚ್ಚು ಹಾಕಿದ್ದಾರೆ. ಇದರ ಪ್ರಕಾರ ೭೩೨ ಕೋಟಿ ೩೭ ಲಕ್ಷದ ೨೪ ಸಾವಿರ ರೂಪಾಯಿಗಳು ಇವರಿಗೆ ಸಂದಾಯವಾಗತಕ್ಕಂಥದ್ದು. ನಾನು ತಪ್ಪಿದ್ದರೆ ಹೇಳಿ. ಇದರಲ್ಲಿ ಕೆಲವು ಬಾಬುಗಳು ಕೊಡುವಾಗ ತಪ್ಪಾಗಿದೆಯೋ, ಸರಿಯಾಗಿದೆಯೋ ಗೊತ್ತಿಲ್ಲ. ಆದರೆ ಈ ೭೩೨ ಕೋಟಿ ೩೭ ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದಾರೆ, ಇದನ್ನು ನಿಲ್ಲಿಸುತ್ತಾರೆಂದು, ಬೆಟರ್‌ಮೆಂಟ್ ಲೆವಿ ಬಾಕಿ ಯನ್ನು ಹಾಗೇ ಇಟ್ಟುಕೊಂಡು ಬರುತ್ತಿದ್ದಾರೆ. ಬಾಕಿ ತೋರಿಸಿ ಕೇಂದ್ರ ಸರಕಾರದವರನ್ನು ಮರುಳು ಮಾಡತಕ್ಕ ವಿಧಾನವನ್ನು ಈ ಸರಕಾರದವರು ಅನುಸರಿಸುತ್ತಿದ್ದಾರೆ, ಇದಕ್ಕೆ ಒಬ್ಬ ಮಂತ್ರಿ ಯಾಗಿ ಸರಕಾರದ ವತಿಯಿಂದ ಏನು ಉತ್ತರ ಕೊಡಬೇಕು, ಅದನ್ನು ಕೊಡುವುದು ಒಂದು ರೀತಿ ಆಯಿತು. ನಾನು ಆಗಲೇ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಒಂದು ಮಾತನ್ನು ಹೇಳಿದ್ದೆ. ಏನೆಂದರೆ "You must become a Statesman and see the prosperity and the general happiness of the people, not for the present, but for the generations to come. You must plan for the future." ಎಂದು.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಹೇಳಿದ ಮೇಲೆ ಈ ಸ್ಟೇಟ್‌ಮೆಂಟ್‌ನ್ನು ಹೈದರಾಬಾದ್‌ಗೆ ಹೋಗಿ ಕೊಟ್ಟರೊ ?

ಶ್ರೀ ಬಿ. ಬಸವಲಿಂಗಪ್ಪ.—ಅದೇ ರೀತಿಯಾಗಿ ನಾನು ಹೇಳುತ್ತಿದ್ದೇನೆ. ಶ್ರೀಮಾನ್ ದೇವೇ ಗೌಡರು ಇದರ ಬಗ್ಗೆ ತೀವ್ರವಾಗಿ ಗಮನ ಕೊಡಬೇಕು. ತಾವು ಮಂತ್ರಿಗಳಾಗಿದ್ದೀರಿ, ನಾನೂ ಮಂತ್ರಿಯಾಗಿದ್ದೆ. ನಾನು ಇವತ್ತು ಇಲ್ಲಿ ಇದ್ದೇನೆ, ನೀವು ಇವತ್ತು ಅಲ್ಲಿ ಇದ್ದೀರಿ. ಸಮಯ ಸಿಕ್ಕಾಗ ಇಂತಹ ಅವಕಾಶ ಸಿಕ್ಕಾಗ ದೂರದೃಷ್ಟಿಯಿಂದ ಎಲ್ಲರ ಸೌಖ್ಯಕ್ಕೋಸ್ಕರ ತಾವು ಶ್ರಮಿಸಬೇಕು. ಕರ್ನಾಟಕ ರಾಜ್ಯದ ಹಿತವನ್ನು ಸಂರಕ್ಷಣೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಈಗಿನ ಸರಕಾರ ಇದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತಿದ್ದೇನೆ. ನಾನಾಗಲೇ ಹೇಳಿದ ಹಾಗೆ, ಕರ್ನಾಟಕ ರಾಜ್ಯದಲ್ಲಿ ಎಷ್ಟು ನೀರಿದೆ, ಅದರಲ್ಲಿ ಎಷ್ಟು ನೀರನ್ನು ಬಳಸಿಕೊಳ್ಳುತ್ತಿದ್ದೀರಿ ಎಂಬುದರ ಬಗ್ಗೆ ನಾನು ಹೇಳಿದ್ದೇನೆ. ಇದರಲ್ಲಿ ಇವರು ಸರಿಯಾದ ಒಂದು ಜವಾಬ್ದಾರಿಯಿಂದ ನೀರಿನ ವ್ಯವಸ್ಥೆ ಮಾಡುತ್ತಿದ್ದಾರೋ ಅಥವಾ ಇವರು ಬಹಳ ಔದಾರ್ಯದಿಂದ ಬೇರೆಯವರಿಗೆ ಬಿಟ್ಟುಕೊಡುತ್ತಿ ದ್ದಾರೋ ಎಂಬ ಬಗ್ಗೆ ಯೋಚನೆ ಮಾಡಲೇ ಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹೆಗಡೆಯವರ ಹೇಳಿಕೆಯನ್ನು ನೋಡಿದ್ದೇವೆ. ಹೈದರಾಬಾದ್‌ನಲ್ಲಿ ಕೊಟ್ಟಂಥ ಹೇಳಿಕೆಯನ್ನು ನೋಡಿದ್ದೇನೆ. ಮಾನ್ಯ ದೇವೇಗೌಡರ ಹೇಳಿಕೆಯನ್ನು ಕೇಳಿದ್ದೇವೆ, ಓದಿದ್ದೇನೆ. ಆದರೆ ಒಂದು ವಿಷಯ ತಮಗೆ ಹೇಳಬೇಕೆಂದರೆ, ೧೯೭೩ ರಲ್ಲಿ ಕೃಷ್ಣಾ ಅಗ್ರಿಮೆಂಟ್ ಏನು ಆಯಿತು, ಅದರ ಪ್ರಕಾರ ಈ ಒಂದು ಕೃಷ್ಣಾ ಬೇಸಿನ್‌ನಲ್ಲಿ ಅವೈಲೆಬಲ್ ವಾಟರ್ ೨೦೬೦ ಟಿ. ಎಂ. ಸಿ. ಎಫ್. ಟಿ. ಇದೆ ಎಂದು ಹೇಳಿದ್ದಾರೆ. ಅದನ್ನು ತಾವೂ ಒಪ್ಪುತ್ತೀರಿ. ಅದರಲ್ಲಿ ಕರ್ನಾಟಕಕ್ಕೆ ೭೦೦ ಟಿ.ಎಂ.ಸಿ. ಕೊಟ್ಟಿದ್ದಾರೆ. ಆಂಧ್ರಕ್ಕೆ ೮೦೦ ಟಿ.ಎಂ.ಸಿ.ಎಫ್.ಟಿ. ಕೊಟ್ಟಿದ್ದಾರೆ. ಮಹಾರಾಷ್ಟ್ರಕ್ಕೆ ೫೬೦ ಟಿ.ಎಂ.ಸಿ.ಎಫ್.ಟಿ. ಕೊಟ್ಟಿದ್ದಾರೆ. ಮತ್ತೆ ತೆಲುಗು ಗಂಗಾ ಯೋಜನೆ ಮಾಡಲಿಕ್ಕೆ ಎನ್. ಟಿ. ರಾಮರಾಯರು ಹೊರಟಿದ್ದಾರೆ. ನಾವೇನೋ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ತಮಿಳುನಾಡಿನ ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ ೫ ಟಿ.ಎಂ.ಸಿ.ಎಫ್.ಟಿ. ಕೊಡುತ್ತೇವೆಂದು ಒಪ್ಪಿಕೊಂಡಿದ್ದೆವು. ಅದನ್ನು ಇವತ್ತು ಕೊಡಬೇಕಾದು ಇದೆ. ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದರು ಎಂದು ನಾವು ಹಿಂದೆ ಹೋಗುವುದಿಲ್ಲ ಆದರೆ ಮಾನ್ಯ ಎನ್. ಟಿ. ರಾಮರಾಯರು, ರಾಮಕೃಷ್ಣ ಹೆಗಡೆಯವರು, ಎಂ. ಜಿ. ರಾಮಚಂದ್ರನ್‌ರವರೂ ಇವರೆಲ್ಲಾ ಸೇರಿಕೊಂಡು ಒಂದು ಮೀಟಿಂಗ್ ಮಾಡಿದರು. ನಾವು ನಿಮ್ಮನ್ನು ಬಿಡಬಾರದು ನೀವು ನಮ್ಮನ್ನು ಬಿಡಬಾರದು ನನ್ನ ಹಿತ ನೀನು ಕಾಪಾಡಬೇಕು ನಿನ್ನ ಹಿತ ನಾನು ಕಾಪಾಡುತ್ತೇನೆಂದು ಒಪ್ಪಂದ ಮಾಡಿಕೊಂಡ ಹಾಗೆ ಕಾಣುತ್ತದೆ. ಅವರು ಮುಖ್ಯಮಂತ್ರಿಗಳಾಗಿ ಮುಂದುವರಿಯಲಿಕ್ಕೆ ಈ ರೀತಿ ಒಪ್ಪಂದ ಮಾಡಿಕೊಂಡು ಹೋದರೆ ನನ್ನ ಅಭ್ಯಂತರ ಇಲ್ಲ. ಆದರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬಂದಾಗ ನಾವೆಲ್ಲಾ ಎದ್ದು ನಿಂತುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಈ ಬಗ್ಗೆ ಮಾನ್ಯ ಪಿ. ಡಬ್ಲ್ಯೂ. ಡಿ. ಮಿನಿಸ್ಟರ್ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ ಮಾನ್ಯ ಎನ್. ಟಿ. ರಾಮರಾವ್ ಅವರ ಸ್ಟೇಟ್‌ಮೆಂಟ್ ವಿರುದ್ಧವಾಗಿ ಇದ್ದೇವೆ ಎಂದು, ಹಾಗಾದರೆ ಮಾನ್ಯ ದೇವೇಗೌಡರ ಹೇಳಿಕೆಯ ವಿರುದ್ಧ ಮಾನ್ಯ ರಾಮಕೃಷ್ಣ ಹೆಗಡೆಯವರು ಚಳುವಳಿ ಮಾಡಬಹುದೆಂದು ತಿಳಿದಿದ್ದೀರೋ ?

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೋಸ್ಕರ ರಾಜ್ಯದ ಹಿತದೃಷ್ಟಿ ಏನಿದೆ ಅದು ಬಹಳ ಎತ್ತರವಾಗಿರಬೇಕು. ನಾವು ಕೆಳಗೆ ನೋಡಬಾರದು ಎಂದು ಹೇಳಿದ್ದೇನೆ. ಉಳಿದಿದ್ದನ್ನು ಶ್ರೀಮಾನ್ ದೇವೇಗೌಡರಿಗೇ ಬಿಟ್ಟಿದ್ದೇನೆ. ಅವರು ಯಾವ ರೀತಿಯ ನಿಲುವು ತೆಗೆದುಕೊಳ್ಳುತ್ತಾರೋ, ಯಾವ ರೀತಿ ಮಾಡುತ್ತಾರೋ ನೋಡೋಣ. ಶ್ರೀಮಾನ್ ಎನ್. ಟಿ. ರಾಮರಾಯರ ಪ್ರಕಾರ ರಾಯಲಸೀಮಾ ಪ್ರದೇಶ ಏನಿದೆ ಅಲ್ಲಿನ ಎರಡು ಲಕ್ಷದ ಮುನ್ನೂರು ಎಕರೆಗೆ ನೀರನ್ನು ಒದಗಿಸಿದ ಹಾಗೂ ಆಗಬೇಕು ಮತ್ತು ಅದೇ ಒಂದು ನಾಲೆಯಿಂದ ಮದ್ರಾಸ್‌ಗೆ ೫ ಟಿ. ಎಂ. ಸಿ. ನೀರನ್ನು ಕೊಟ್ಟ ಹಾಗೂ ಆಗಿರಬೇಕು ಎಂಬ ಒಂದು ಉದ್ದೇಶದಿಂದ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ಶ್ರೀಮಾನ್ ಹೆಗಡೆಯವರು ಏನು ಹೇಳುತ್ತಿದ್ದಾರೆ ಎಂದರೆ, ಹೆಚ್ಚುವರಿ ನೀರು ಎಷ್ಟಿದೆ ಅದನ್ನು ತೆಗೆದುಕೊಂಡು ಬಿಡಿ, ಯಾರು ಬೇಡ ಎಂದರು ಎಂದು ಹೇಳಿದ್ದಾರೆ. ಸ್ವಾಮಿ, ಒಂದು ಮಾತು ಹೇಳುತ್ತಿದ್ದೇನೆ, ಕರ್ನಾಟಕದ ೭೦೦ ಟಿ. ಎಂ. ಸಿ. ಎಫ್. ಟಿ. ನೀರು ಏನಿದೆ ಅದನ್ನು ಉಪಯೋಗಿಸಲಿಕ್ಕೆ ನೀವು ಪ್ರಯತ್ನ ಮಾಡಿದ್ದೀರಾ ? ಇದುವರೆಗೂ ಕೂಡಾ ಪ್ರಯತ್ನ ಮಾಡಿದ್ದೀರಾ ? ನಾಗಾರ್ಜುನಸಾಗರ ಡ್ಯಾಮ್ ಕಟ್ಟಿದರು, ಅವಸರವಾಗಿ ಕಟ್ಟಿದರು. ಪೂರೈಸಿದರು. ಇವತ್ತು ಅಲ್ಲಿ ನೀರು ನಿಂತುಕೊಂಡಿದೆ, ಉಪಯೋಗಿಸಿಕೊಳ್ಳುತ್ತಿದ್ದಾರೆ. ಅವರದ್ದೇನು ವಾದ ಇದೆ, ಆಂಧ್ರಪ್ರದೇಶದವರದು ಎಂದರೆ, ನೀವು ನಿಮಗೆ ಕೊಟ್ಟಿರತಕ್ಕಂಥ ನೀರನ್ನು ಸಂಪೂರ್ಣವಾಗಿ ಉಪಯೋಗಿಸುತ್ತಿಲ್ಲ. ನಮಗೆ ಕೊಡಿ ಎಂದು ಹೇಳುತ್ತಿದ್ದಾರೆ. ಇದು ನಿಜ. ನೀವು ಉಪಯೋಗಿಸುತ್ತಿಲ್ಲ. ಅಪ್ಪರ್ ಕೃಷ್ಣಾ ಬಲದಂಡೆನೋ ಎಡದಂಡೆನೋ ಯಾವುದೋ ಇದೆ. ಅದು ಯಾವಾಗ ಪೂರೈಸುವುದು ? ನೀವು ಪೂರೈಸುವುದಿಲ್ಲ. ನೀವು ಪೂರೈಸುವುದಿಲ್ಲ ಎಂದು ಅಂಕಿಅಂಶಗಳ ಮುಖಾಂತರ ಹೇಳುತ್ತಿದ್ದೇನೆ. ನೀವು ಪೂರೈಸುವುದಿಲ್ಲ. ಕಾರಣ ಏನೆಂದು ಹೇಳಿದರೆ ಇವರು ಮಲಪ್ರಭಾ ಅಣೆಕಟ್ಟು ಕಟ್ಟಿದರು. ಘಟಪ್ರಭಾ ಅಣೆಕಟ್ಟು ಕಟ್ಟಿದರು ಆದರೆ ನಾಲೆಗಳ ಕೆಲಸ ಆಗಲಿಲ್ಲ, ಇವರು ಏನೇನು ಮಾಡಿದ್ದಾರೆ. ಏನು ಬಿಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ, ಅಲ್ಲಿ ಕಾಲುವೆಗಳನ್ನು ಹೊಡೆಯಲಿಲ್ಲ. ಅಣೆಕಟ್ಟು ಕಟ್ಟಿದರು ನೀರನ್ನು ನಿಲ್ಲಿಸಿಕೊಂಡು ನಿಂತುಕೊಂಡು ಬಿಟ್ಟರು. ಇವತ್ತಿನ ದಿವಸ ಇವರು ಕೃಷ್ಣಾ ಯೋಜನೆಯಿಂದ ನೀರನ್ನು ಯಾವರೀತಿ ಕೊಡುತ್ತಾರೋ, ಯಾವರೀತಿ ಬಿಡುತ್ತಾರೊ ಗೊತ್ತಿಲ್ಲ. ಆದರೆ ಕಾಲುವೆಗಳನ್ನು ಮಾಡಲಿಕ್ಕೆ ಅಲ್ಲಿ ಹೊಸದಾಗಿ ಸಬ್‌ಡಿವಿಜನ್ ಮಾಡುತ್ತಿದ್ದಾರೆ. ಇದಕ್ಕೆ ಜಾಸ್ತಿ ದಿನ ವೇಸ್ಟ್ ಆಗದಹಾಗೆ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

೧-೩೦ ಪಿ. ಎಂ.

ಕಾಲುವೆ ಹೊಡೆಯುವುದು ಒಂದು ಕತೆ. ಇನ್ನೊಂದು ಕಡೆ ಅಭಾವದ್ದು ಒಂದು ಕತೆ. ಎಷ್ಟೋ ಸಾರಿ ಅರ್ಬಿಟ್ರೇಷನ್ ಮಾಡಿ ಕಾಲುವೆಗಳ ಭಾಗವನ್ನು ವರ್ಗಾವಣೆ ಮಾಡುವುದು. ನಡೆಯುತ್ತದೆ. ಇವರು ಇದಕ್ಕಾಗಿ ಯಾವರೀತಿ ನಮ್ಮ ಕರ್ನಾಟಕ ರಾಜ್ಯದ ಹಣವನ್ನು ಪೋಲು ಮಾಡುತ್ತಿದ್ದಾರೆಂದರೆ, ೨೫ ಕೋಟಿ ರೂಪಾಯಿಗಳನ್ನು ಈ ಆರ್ಬಿಟ್ರೇಷನ್‌ಗೆ ಕೊಟ್ಟರೆ ಯಾವ ದೇಶ ಉದ್ಧಾರವಾಗುತ್ತೆ. ಯಾವ ಅಧಿಕಾರಿ ಜವಾಬ್ದಾರಿಯಿಂದ ಕೆಲಸ ಮಾಡಲು ಸಾಧ್ಯ? ಯಾರೋ ಒಬ್ಬ ಕಂಟ್ರಾಕ್ಟರ್ ಕೆಲಸ ಮಾಡುತ್ತೇನೆಂದು ಮುಂದೆ ಬಂದರೆ, ಟೆಂಡರ್ ಪ್ರಕಾರ ಹೋಗಬೇಕಾಗುತ್ತದೆ.ಟೆಂಡರ್‌ನ ನಿಯಮಾವಳಿ ಪ್ರಕಾರ ಕೆಲಸ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ಟೆಂಡರ್ ಪ್ರಕಾರ ಯಾವ ಕೆಲಸ ಮಾಡಿದ್ದೀರಿ ? ಟೆಂಡರ್ ಇಲ್ಲವೇ ಇಲ್ಲ. ಟೆಂಡರ್ ಆಕ್ಟ್ ಪ್ರಕಾರ ಅದು ಒಂದು ದರ ನಿಗದಿ ಮಾಡಿದ್ದಾರೆ. ಆದರೂ "Offer and Acceptance" ಎನ್ನುವ ತತ್ವದ ಮೇಲೆ if you go on planning and replanning, estimate and re-estimate how many times you change it ? How many times you change the reaches ? ನೀವು ಒಂದು ಸಾರಿ ಟೆಂಡರ್ ಒಪ್ಪಿಕೊಂಡಮೇಲೆ, ಮತ್ತೆ ಅದನ್ನು ಚೇಂಜ್ ಮಾಡಿ, ಜಾಸ್ತಿ ಹಣ ಕೊಡತಕ್ಕ ತಂತ್ರಕ್ಕೆ ಕಿವಿಗೊಟ್ಟರೆ, ಇಲ್ಲವೇ ಅವಕಾಶ ಕೊಟ್ಟರೆ, ಯಾವ ರಾಜ್ಯದ ಬೊಕ್ಕಸ ಉಳಿಯುತ್ತದೆ ? ಒಬ್ಬರಿಗೆ ಕೊಟ್ಟರೆ ಮುಂದೆ ಎಲ್ಲಾ ಕಂಟ್ರಾಕ್ಟರುಗಳಿಗೂ ಕೊಡಬೇಕಾಗುವುದು. ಸ್ವಾಮಿ ನಾನು ರಾಜಕೀಯದಲ್ಲಿ ಬಹಳ ದಿವಸಗಳಿಂದ ಇದ್ದೇನೆ. ಈಗ ಚುನಾವಣೆ ಆಗಬೇಕು, ಚುನಾವಣೆಗೆ ಅಲ್ಲಿ: ಇಲ್ಲಿ ಹಣ ವಸೂಲ್ಮಾಡಬೇಕಾಗುತ್ತದೆ, ಖರ್ಚು, ಮಾಡಬೇಕಾಗುತ್ತದೆ, ಆದರೆ ಒಂದು ಸಾರಿ ಟೆಂಡರನ್ನು ಒಪ್ಪಿಕೊಂಡಮೇಲೆ ಇದನ್ನು ಬದಲಾವಣೆ ಮಾಡಿಕೊಂಡು ಬಿಟ್ಟು ಯಾವುದೇ ಕಾರಣಗಳಿಂದ you will say just unforeseen circumstances ಎಂದು ಹೇಳುವುದು ಸರಿಯೇ ? ಇದಕ್ಕೆಲ್ಲಾ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ದರಗಳನ್ನು ಬದಲಾವಣೆ ಮಾಡಬೇಕೆಂದು ಯಾರು ಮನವಿಗಳನ್ನು ಮಾಡಿದ್ದಾರೆ, ಅವರೇ ತಪ್ಪು ಮಾಡಿದ್ದಾರೆ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ನೀವು ಹೀಗೇ ಮಾಡುತ್ತಾ ಹೋದರೆ, ಒಂದು ಕೋಟಿ ಖರ್ಚು ಮಾಡುವ ಜಾಗದಲ್ಲಿ ೧೦ ಕೋಟಿಯಾದರೂ ಸಾಲದು. ಮೇಜರ್ ಇರಿಗೇಷನ್ಸ್ ಎಂಬುದು ಇದು ಒಂದು ದೊಡ್ಡ ಖಾಯಿಲೆ ಇದ್ದಂತೆ ಈ ಖಾಯಿಲೆ ನಿವಾರಣೆ ಮಾಡುವುದಕ್ಕೆ ಯಾರ ಕೈಯಲ್ಲಿ ಆಗುತ್ತದೋ ಗೊತ್ತಿಲ್ಲ. ಮತ್ತೆ claims petition ತೆಗೆದುಕೊಂಡು ತೀರ್ಮಾನ ಮಾಡಿ ಹಣ ಕೊಡುವ ವ್ಯವಸ್ಥೆ ಏನಿದೆ ಇದು, ನಿಲ್ಲಬೇಕು. ಹಣ ಜಾಸ್ತಿ ಕೊಟ್ಟು ಕಂಟ್ರಾಕ್ಟರುಗಳನ್ನು ಒಪ್ಪಿಸಿ, ಕೆಲಸ ಮುಗಿಸುತ್ತೇವೆಂದು ಹೇಳಿದರೆ, ಅದು ಆಗುವುದಿಲ್ಲ. ಅಧಿಕಾರಿಗಳ ಮೇಲೆ ಸರ್ಕಾರದ ಹತೋಟಿ ಮತ್ತು ಕಂಟ್ರಾಕ್ಟರ್‌ಗಳ ಮೇಲೆ ಇರಬೇಕು. ಇವರ ಮೇಲೆ ಎಲ್ಲಿಯವರೆಗೆ ಹತೋಟಿ ಇರುವುದಿಲ್ಲವೋ ಅಲ್ಲಿಯವರೆಗೆ ಕೆಲಸವನ್ನು ಸಕಾಲದಲ್ಲಿ ಪೂರೈಸುವುದಕ್ಕಾಗುವುದಿಲ್ಲ. ಇವೊತ್ತು ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕ್ರಮವೇ ಇಲ್ಲ. ಇವತ್ತಿನವರೆಗೆ ಅಸೆಂಬ್ಲಿಯಲ್ಲಿ ಅನೇಕ ತೀರ್ಮಾನಗಳನ್ನು ಮಾಡಿದ್ದೇವೆ, ಸರ್ಕಾರಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹಲವಾರು ಸೂಚನೆ ಕೊಟ್ಟಿದ್ದಾರೆ. ಹಲವಾರು ನಿದರ್ಶನಗಳಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿಗಳು ಪೋಲಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರು ತಪ್ಪಿತಸ್ಥರು ಎಂದಿದ್ದರೂ, ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೆ, ಮತ್ತು ಬಡ್ತಿ ಕೊಟ್ಟಿದ್ದಾರೆಯೋ ಹೊರತು ಕ್ರಮ ತೆಗೆದುಕೊಳ್ಳಲೇ ಇಲ್ಲ, ಸರ್ಕಾರ ಹೀಗೆ ಹೆದರಿಕೆಗೆ. ಬೆದರಿಕೆಗೆ, ಒಳಗಾಗಿ ಯಾರಮೇಲೂ ಹತೋಟಿಯನ್ನು ಇಟ್ಟುಕೊಳ್ಳದೆ ಹೋದರೆ ಕೆಲಸವನ್ನು ಸಕಾಲದಲ್ಲಿ ಪೂರೈಸುವುದಕ್ಕಾಗುತ್ತದೆಯೇ ? ಆಗುವುದಿಲ್ಲ. ನಾನು ತಮಗೆ ಹೇಳುತ್ತಿದ್ದೇನೆ. ತೆಲುಗು ಗಂಗಾ ಯೋಜನೆಯ ಮೂಲಕ ನಮ್ಮ ಪಾಲಿನ ಎಲ್ಲಾ ನೀರನ್ನು ಉಪಯೋಗಿಸುವುದಕ್ಕೆ ಅವರು ಸಿದ್ಧರಾಗಿದ್ದಾರೆ. ನಾವು ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ನಾವು ನಮ್ಮ ಕೆಲಸ ಪೂರೈಸದ ಕಾರಣ ಅವರು ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಇಂತಹ ಸನ್ನಿವೇಶದಲ್ಲಿ ಆಂಧ್ರಪ್ರದೇಶದವರಿಗೆ ನೀವು ನೀರನ್ನು ಉಪಯೋಗಿಸಬೇಡಿ ಎಂದು ಹೇಳಿದರೆ ಹೇಗೆ ? ಆದ್ದರಿಂದ ನಮ್ಮ ಕರ್ತವ್ಯ ನಾವು ಮಾಡಿಕೊಳ್ಳಬೇಕು, ನಮ್ಮ ಜವಾಬ್ದಾರಿಯನ್ನು ನಾವು ತಿಳಿದುಕೊಳ್ಳಬೇಕು. ಕೃಷ್ಣಾ ಬೇಸಿನ್ ಅವಾರ್ಡ್ ಏನು ಬಂದಿದೆ, ಅದನ್ನು ಉಪಯೋಗಿಸಿಕೊಳ್ಳದೇ ಹೋದರೆ, ನಿಮ್ಮ ಹೇಳಿಕೆ, ಬರೀ ಹೇಳಿಕೆಯಾಗುತ್ತದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಕರ್ನಾಟಕ ರಾಜ್ಯವನ್ನು ಏನಾದರೂ ಒತ್ತೆ ಹಾಕಿದೆಯೇ ? ಅವರು ಏನು ಬೇಕಾದರೂ ಹೇಳಬಹುದೇ ? ಇವತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

''ಹೈದ್ರಾಬಾದಿನಲ್ಲಿ ಹೆಗಡೆಹೇಳಿಕೆ''

''ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಆಂಧ್ರಪ್ರದೇಶ ಬಳಸಿಕೊಳ್ಳುವುದಕ್ಕೆ ಕರ್ನಾಟಕದ ಆಕ್ಷೇಪ ಇಲ್ಲ ಎಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇಂದು ರಾತ್ರಿ ಇಲ್ಲಿ ಹೇಳಿದರು. ದೆಹಲಿಗೆ ಹೊರಟ್ಟಿದ್ದ ಹೆಗಡೆ ಅವರು ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಸ್ವಲ್ಪ ಹೊತ್ತು ತಂಗಿದ್ದರು. ಆಗ ಆಂಧ್ರದ ಮುಖ್ಯ ಮಂತ್ರಿ ಎನ್. ಟಿ. ರಾಮರಾವ್ ಅವರನ್ನು ೩೦ ನಿಮಿಷಗಳ ಕಾಲ ಭೇಟಿ ಮಾಡಿ ನಂತರ ಸುದ್ದಿಗಾರರೊಡನೆ ಮಾತನಾಡಿದರು. ತೆಲುಗು ಗಂಗಾ ಯೋಜನೆ ಬಗ್ಗೆ ವಿವಾದ ವೇನೂ ಇಲ್ಲ. ಆದರೆ ಕೆಲವು ವ್ಯಕ್ತಿಗಳಿಗೆ ವಿವಾದ ಉಂಟಾಗುವುದು ಬೇಕಾಗಿದೆ. ವಾಸ್ತವವಾಗಿ ರಾಮರಾವ್ ಜತೆ ನನಗೆ ಭಿನ್ನಾಭಿಪ್ರಾಯವೇ ಇಲ್ಲ ಎಂದರು ಹೆಗಡೆ. ತೆಲುಗು ಗಂಗಾ ಕುರಿತು ಆಂಧ್ರದ ನಿಲುವು ಸರಿಯಾದದ್ದು ಎಂದು ಹೆಗಡೆ, ಈ ಬಗ್ಗೆ ವಿವಾದ ಸೃಷ್ಟಿಸುವುದು ರಾಜಕೀಯ 'ಉದ್ದೇಶದ್ದು ಎಂದರು.''

ಅಂದರೆ ವಿವಾದ ಇಲ್ಲ ಎಂದು ಇವರ ಹೇಳಿಕೆಯಿಂದ ಅರ್ಥವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಪೇಪರಿನಲ್ಲಿ ಬಂದುದೆಲ್ಲಾ ಸತ್ಯ ಇರುತ್ತದೋ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ರಾಜ್ಯ ವನ್ನು ಏನಾದರು ಒತ್ತೇ ಹಾಕಿದ್ದಾರೋ ? ಎಲ್ಲಾ ಯುಗದಲ್ಲೂ ಅವರೇ ಮುಖ್ಯಮಂತ್ರಿಗಳೋ? ಅವರು ಏನು ಬೇಕಾದರೂ ಹೇಳಿಕೆ ಕೊಡಬಹುದೋ ? ಸ್ವಾಮಿ ನಾನು ಹೇಳುತ್ತಿದ್ದೇನೆ. ಇದು ನಮ್ಮ ರಾಜ್ಯಕ್ಕೆ ಎಸಗತಕ್ಕಂಥ ಅಪಚಾರ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನಮ್ಮ ರಾಜ್ಯಕ್ಕೆ

(ಮಾನ್ಯ ಅಧ್ಯಕ್ಷರು ಸಭಾಪೀಠವನ್ನು ಅಲಂಕರಿಸಿದರು)

ಬಹಳ ಅನ್ಯಾಯ ಮಾಡಿದ್ದಾರೆ. ಅವರ ಈ ಹೇಳಿಕೆ ಸರಿಯಲ್ಲ. ಅವರು ಸರಿಯಾಗಿ ವರ್ತನೆ ಮಾಡದೇ ಹೋದರೆ ಅವರ ನಿಲುವನ್ನು ಬದಲಾವಣೆ ಮಾಡಿಕೊಳ್ಳದೇ ಹೋದರೆ ನಾವು ಹೋರಾಟ ಮಾಡಲೇಬೇಕಾಗುತ್ತದೆ. ನಾವು ಸೂಕ್ತ ನಿಲುವನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ನಾವು ನಮ್ಮ ರಾಜ್ಯ ಹಿತ ರಕ್ಷಣೆ ಮಾಡಲಿಕ್ಕೆ ನಾವು ಸರ್ವ ಪ್ರಯತ್ನ ಮಾಡಲೇಬೇಕಾಗುತ್ತದೆ. ಇದು ಸ್ಪಷ್ಟವಾದ ಮಾತು. ಮಾನ್ಯ ದೇವೇಗೌಡರು ಕೊಟ್ಟ ಹೇಳಿಕೆಯನ್ನು ನಾವು ನಂಬಿದ್ದೇವೆ. ಒಪ್ಪಿದ್ದೇವೆ. ಅವರು ಈ ರಾಜ್ಯದ ಹಿತರಕ್ಷಣೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇವೆ. ಆದರೆ ಮುಖ್ಯ ಮಂತ್ರಿಗಳ ನಿಲುವು ಏನಿದೆ ಅದನ್ನು ಸ್ಪಷ್ಟ ಮಾಡಲೇ ಬೇಕಾಗುತ್ತದೆ. ರಾಜ್ಯದ ಹಿತ ದೊಡ್ಡದೋ, ಒಬ್ಬ ಮುಖ್ಯಮಂತ್ರಿ ಹಿತ ದೊಡ್ಡದೋ, ಒಬ್ಬ ಮಂತ್ರಿ ಹಿತ ದೊಡ್ಡದೋ ? ಇದು ತೀರ್ಮಾನವಾಗಲೇಬೇಕು.

ಒಬ್ಬ ಮಾನ್ಯ ಸದಸ್ಯರು.—ಇದರಲ್ಲಿ ದಯವಿಟ್ಟು ರಾಜಕೀಯ ಉಪಯೋಗ ಮಾಡಬೇಡಿ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ಟೈಂ ಎಷ್ಟು ಆಯಿತು ? ನಿಮ್ಮ ಪಕ್ಷಕ್ಕೆ ೧೮೦ ನಿಮಿಷ ನಿಗದಿಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಹೇಳಲೇ ಬೇಡಿ. ನೀರಿನ ಬಗ್ಗೆ ಮಾತನಾಡುವಾಗ ತಾವು ಮಧ್ಯ ಪ್ರವೇಶ ಮಾಡಬೇಡಿ. ನಾವು ಮೊದಲು ರಾಜ್ಯದ ಹಿತರಕ್ಷಣೆ ಮಾಡಬೇಕು ಆ ಕೆಲಸ ಹೇಗಾಗಬೇಕು ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆ. ದಯವಿಟ್ಟು ತಾವು ಲಾಲಿಸಿ. ನಾನು ಆಗಲೇ ಹೇಳಿದ್ದೇನೆ, ೫೫ ಲಕ್ಷ ಹೆಕ್ಟೇರ್ಸ್ ಜಮೀನು ಏನು ಇದೆ. ಅದನ್ನು ನಿ ರಾವರಿಗೆ ಉಪಯೋಗಿಸಿಕೊಂಡಿದ್ದರೆ ರಾಜ್ಯಕ್ಕೆ ಹಿತವಾಗುತ್ತಿತ್ತೋ ಇಲ್ಲವೇ ? ಎಕನಾಮಿಕ್ ಸರ್ವೆ ಪೇಜ್ ನಂಬರ್ ೬೭ ರಲ್ಲಿ ಇವರ ಬಗ್ಗೆ ಏನು ಹೇಳಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ.—

"The potential and utilisation of irrigation under the mojor projects during 3 years from 1981-82 is presented in APPENDIX 10.3. In several old and completed projects the utilisation has exceeded the potential due to deviation that

took place from the original cropping pattern. The notable exceptions are, Tungabhadra, L. B. C. and RBHC which seem to have some special problems. Out of 2.44 lakh hectares of potential created under TDB(LBC), the utilisation during 1983-84 is reported to be about 1.84 lakh hectares. The same trends are observed during the previous two years also. Obviously, this is not only due to inadequate canal/distributory network and land development etc Two more important factors appear to be responsible for this under-utilisation of irrigation. Firstly, the prescribe cropping pattern is not adhered to and instead, irrigation-intensive crops like paddy and sugar cane are grown disproportionate to the avilability of water. This has restricted the ac al area receiving irrigation. Secondly, vast areas of land have been rendered useless by Water Logging and Salinity. It is estimated that under LBC, about 33,000 hectares of land is so affected. It is also estimated that the water logged area is increasing at a rate of 6,000 hectares per annum. This is something which warrants immediate corrective measures. Similarly, under, TBP (RBHC) also, the utilisation is reported to be only about 78 per cent of the potential".

ಸ್ವಾಮಿ, ಇದನ್ನು ಓದಿದ ಉದ್ದೇಶ ಇಷ್ಟು. ಈ ನೀರು ನಿಲ್ಲತಕ್ಕಂಥ ಪ್ರದೇಶ ಉಪ್ಪು ಭೂಮಿ, ಚೌಳು ಭೂಮಿ ಪ್ರದೇಶ ಏನು ಇದೆ ಆ ಒಂದು ಲಕ್ಷ ಹೆಕ್ಟೇರ್ಸ್‌ನ್ನು ತಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಇದುವರೆಗೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ಈ ಒಂದು ಲಕ್ಷ ಹೇಕ್ಟೇರ್ಸ್ ಭೂಮಿಗೆ ನೀರು ಸರಬರಾಜು ಮಾಡಲಿಕ್ಕೆ ನೀವೇನಾದರೂ ಅಣೆಕಟ್ಟೆ ಕಟ್ಟುವುದಾದರೆ ಅಥವಾ ನೀರಾವರಿ ಯೋಜನೆ ಮಾಡುವುದಾದರೆ ಒಂದೊಂದು ಯೋಜನೆಗೆ ೧೦ ಸಾವಿರ ಎಂದು ಇಟ್ಟುಕೊಂಡರೂ ಕೂಡ ೧೬೦ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಈಗ ಒಂದು ಲಕ್ಷ ಹೆಕ್ಟೇರ್ಸ್ ಇರತಕಂಥ ಚೌಳು ಭೂಮಿ ಏನು ಇದೆ ಅಲ್ಲಿ ನೀರು ನಿಲ್ಲತಕ್ಕಂಥ ಜಮೀನಿಗೆ ಅಬಾದು ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಏನಾದರೂ ಕಾರ್ಯಕ್ರಮ ತೆಗೆದು ಕೊಂಡಿದ್ದಾರೆಯೋ ? ಅಪ್ಪರ್ ಕೃಷ್ಣದಲ್ಲಿ ೧೫೩ ಬ್ರೀಚ್ ಆಗಿದೆ. ಅದಕ್ಕೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ಹೊಸ ಹೊಸ ಕಾಲುವೆ ಮಾಡುವುದಕ್ಕೆ ಹೋಗಿದ್ದೀರಿ. ನೀರು ನಿಂತುಕೊಳ್ಳುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ? ಕಾಲುವೆಯನ್ನು ಸರಿಯಾಗಿ ಕಟ್ಟಿದ್ದರೆ ಏತಕ್ಕೆ ಒಡೆಯುತ್ತದೆ ? ಸರಿಯಾಗಿ ಕಾಲುವೆ ಕಟ್ಟದೇ ಹೋದರೆ ಒಡೆಯುತ್ತದೆ. ಪುನಃ ಕಾಲುವೆ ಕಟ್ಟುವುದಕ್ಕೆ ಅದಕ್ಕೆ ಒಂದು ಎಸ್ಟಿಮೇಟ್, ಅಲ್ಲಿಗೆ ಮೊದಲನೆಯ ಎಸ್ಟಿಮೇಟ್‌ನಲ್ಲಿ ಖರ್ಚು ಮಾಡಿದ ಹಣ ಹೋಯಿತು. ಕಾಲುವೆ ಒಡೆದ ತಕ್ಷಣ ಮತ್ತೆ ರೀಎಸ್ಟಿಮೇಟ್ ಮಾಡುತ್ತಾರೆ. ಅವರು ಹೇಳಿದ ಬೆಲೆಯನ್ನು ಕೊಡಬೇಕಾಗುತ್ತದೆ. ಅದಕ್ಕೆ ಹಣ ಎಲ್ಲಿಂದ ತರುತ್ತೀರಿ ? ಈ ಸಾರ್ವಜನಿಕ ಹಣ ಏನು ಇದೆ ಅದನ್ನು ಉಪಯೋಗ ಮಾಡುವಾಗ ಯಾರು ಇದನ್ನು ಲೋಪ ಮಾಡುವುದಕ್ಕೆ ಅವಕಾಶ ಕೊಡುತ್ತಾರೋ ಅಂಥವರ ಜೊತೆಯಲ್ಲಿ ನೀವು ಮತ್ತೆ ಸಹಕಾರ ನೀಡುವುದಾದರೆ, ಅವರನ್ನು ಅಭಿಮಾನದಿಂದ ನೋಡುವುದಾದರೆ ಈ ರಾಜ್ಯದ ಕೆಲಸ ಆಗುವುದಿಲ್ಲ. ಶ್ರೀ ಮಾನ್ ಹೆಚ್. ಡಿ. ದೇವೇಗೌಡರು ಈ ಬಗ್ಗೆ ವಾಟರ್ ರೆಸ್ಟೋರ್ ಮಾಡುವುದಕ್ಕೆ ತೀವ್ರವಾಗಿ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಹೇಳುವುದಾದರೆ ನಮ್ಮ ಪಿ. ಎ. ಸಿ. ರಿಪೋರ್ಟ್‌ನಲ್ಲಿ ಏನು ಇದೆ ಎನ್ನುವುದನ್ನು ತಮ್ಮ ಟೇಬಲ್ ಮುಂದೆ ಇಡುತ್ತೇವೆ. ಅದನ್ನು ನಾವು ಇಲ್ಲಿ ಡಿಸ್ಕಸ್ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಪಿ. ಎ. ಸಿ. ರಿಪೋರ್ಟ್‌ನಲ್ಲಿ ಮತ್ತು ಇನ್ನು ಇತರೇ ಬೇರೆ ಬೇರೆ ಕಮಿಟಿಗಳ ರಿಪೋರ್ಟ್ ಏನು ಇದೆ ಇದಕ್ಕೆ ಸಂಭಂಧಪಟ್ಟಂತೆ ಚರ್ಚೆ ಬಂದಾಗ ಇದರ ಬಗ್ಗೆ ಏನು ಬರೆದಿದ್ದೇವೆ ಎನ್ನುವುದನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಈ ಸದನದ ಮೂಲಕ ಮತ್ತೊಮ್ಮೆ

ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೂ ಒಂದೆರಡು ವಿಷಯಗಳನ್ನು ಹೇಳಲು ಬಯಸುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಏಳನೇ ರಿಪೋರ್ಟ್‌ನಲ್ಲಿ ಏನು ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

(1) There has been frequest revision of the scope of some of the projects. In addition estimates are revised due to change of design and the dam proper as well as other allied works. The contractors benefit by such changes. When the problems are encountered decisions are not taken quickly. Delay means escalation. More important is that development of irrigation is badly delayeld. This situation exists in every major work, in all the project. ಇದರ ಬಗ್ಗೆ ಏನಾದರೂ ಒಂದು ಬರದಿದ್ದರೆ, ನೀರಾವರಿ ಯೋಜನೆ ಬಗ್ಗೆ ಏನಾದರೂ ಬರೆದಿದ್ದರೆ ಅದನ್ನು ಜಾರಿಗೆ ತರಬೇಕು. ಅದರ ಮೇಲೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ಸರ್ಕಾರಕ್ಕೆ ಇದನ್ನು ಕಳುಹಿಸಿದ ಮೇಲೆ ಅದರ ಬಗ್ಗೆ ಯಾವ ಕ್ರಮವನ್ನೂ ಸಹ ತೆಗೆದುಕೊಂಡಂತೆ ನನ್ನ ಗಮನಕ್ಕೆ ಬಂದ ಹಾಗೆ ಇಲ್ಲ. ಈ ಬಗ್ಗೆ ೨-೩ ವರ್ಷವಾದರೂ ಕೂಡ ಏನೂ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ಎಂದರೆ ಈ ಕಂಟ್ರಾಕ್ಟರಿಗೆ ಮತ್ತಷ್ಟು ಎನ್‌ಕರೇಜ್‌ಮಾಡಿದ ಹಾಗಾಯಿತು. ಅವನು ಏನು ಷೆಡ್ಯೂಲ್ ಕೊಟ್ಟರೂ ಅದಕ್ಕೆ ಒಪ್ಪಿಕೊಳ್ಳಬೇಕು. ಇಂಥಾದ್ದು ಇನ್ನೂ ಹಲವಾರು ಇವೆ. ಈ ಸಂದರ್ಭದಲ್ಲಿ ಇನ್ನೊಂದುವಿ ಚಾರವನ್ನುತಮ್ಮ ಗಮನಕ್ಕೆ ತರುತ್ತೇನೆ.

(2) Bennihalla acquedect which had to be completed in December, 1979 is still to be completed, Though Public Accounts Committee pointed out in 1982 that there were avoidable delays in this case.

(3) Kadabagatti tunnel which was taken up in 1977 was Scheduled to be completed in 1980 is still incomplete. In 1982 Public Accounts Committee was informed that it would be completed by December, 1982.

(3) Rajanakollur Tunnel in UKP was to be completed in September, 1982, but was completed only in July, 1984. This work was given to a contractor in 1979 against the advise of the World Bank. ಇದು ಒಂದು ಕಥೆ. ವರ್ಲ್ಡ್ ಬ್ಯಾಂಕಿನವರು ಹಣ ಕೊಟ್ಟರೆ ನೀವು ಅವರಿಗೆ ಕೊಟ್ಟ ಸಾಲವನ್ನು ತೀರಿಸಬೇಕು. ಅವರು ಕೊಡತಕ್ಕಂಥ ಸಾಲವನ್ನು ಈ ರೀತಿಯಾಗಿ ಅವ್ಯಯ ಮಾಡುವುದಕ್ಕೆ, ಖರ್ಚು ಮಾಡುವುದಕ್ಕೆ ಅವರು ಪ್ರಯತ್ನ ಮಾಡಿದರೆ, ಮನಸ್ಸು ಮಾಡಿದರೆ, ಅದನ್ನು ನಿಲ್ಲಿಸುವಂತೆ ಮಾಡಬೇಡವೇ ? ಈ ಪ್ರಾಜೆಕ್ಟ್ ಅನ್ನು ಪೂರೈಸುವುದು ಯಾವಾಗ ?

Begurnavile Tun'nel in Hemavathi project.—we have gone to the Public Accounts Committee's 4 th Report, July, 1981.

It has observed that the Government gave a huge advance of Rs. 1.15 crores to the contractors in 1979. The amount was paid in lump against the advise of the Finance Department. The work should have been completed in 1984. That means Rs.15 crores work was given to these persons. He should have completed in 1984. But, he has not done even 50%. almost the entire advance is still with him. ಇದರಲ್ಲಿ ೫೦ ಪರ್ಸೆಂಟ್ ದುಡ್ಡು ಏನು ಕೊಟ್ಟಿದ್ದಾರೆ ಇದು ಆಲ್‌ಮೋಸ್ಟ್ ಎಂಟೈರ್ ಅಡ್ವಾನ್ಸ್ ಇದ್ದಹಾಗೆ. ಇಲ್ಲಿ ಏನಾಗುತ್ತದೆ ಎಂದರೆ ೧೫ ಪರ್ಸೆಂಟ್ ಏನಾದರೂ ವರ್ಕ್ ಮಾಡಿದ್ದರೆ. ಸರಿ. ಇದನ್ನು ಕಂಪ್ಲೀಟ್ ಮಾಡುವುದಕ್ಕೆ ಮುಂಚೆ

ಅಡ್ವಾನ್ಸ್ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಈ ಕೆಲಸವನ್ನು ಮುಂದೂಡುವ ಕಾರ್ಯಕ್ರಮ ಮಾಡಿಕೊಂಡಿದ್ದಾರೆ ಎಂದು ಕಾಣುತ್ತದೆ. ೧೫ ಪರ್ಸೆಂಟ್ ಹಣ ಅವರಿಗೆ ಕೊಟ್ಟ ಮೇಲೆ ಮುಂದೆ ಇದುವರೆಗೆ ಏನಾಯಿತು ಎನ್ನುವುದು ಗೊತ್ತಿಲ್ಲ. ೧೫ ಲಕ್ಷ ರೂಪಾಯಿಗಳ ಅಡ್ವಾನ್ಸ್ ತೆಗೆದುಕೊಂಡು ಏನಾದರೂ ಕೆಲಸ ಮಾಡದೇ ಹೋಗಿದ್ದರೆ ಇದರಲ್ಲಿ ರಾಜಕೀಯ ಇರಬೇಕು ಅದಕ್ಕೆ ಅಡ್ವಾನ್ಸ್ ಕೊಟ್ಟಿದ್ದಾರೆ ಅನ್ನಬೇಕಾಗುತ್ತದೆ. ಈ ಮಾತನ್ನು ಹೇಳಿದರೆ ಶ್ರೀ ಹೆಚ್.ಡಿ.ದೇವೇಗೌಡರು ಸಂತೋಷಪಡಬಹುದು. ಹಿಂದೆ ಇದು ನಡೆಯಿತು ಎನ್ನುವ ಪ್ರಶ್ನೆ ಬೇಡಿ. ಯಾರು ಕೊಟ್ಟಿದ್ದಾರೆ ಎನ್ನುವ ಪ್ರಶ್ನೆ ಬೇಡ, ಅವರು ೧೫ ಲಕ್ಷ ಕೊಟ್ಟಿದ್ದಾರೆ. ಇದು ೧೫ ಕೋಟಿ ರೂಪಾಯಿಗಳ ಕೆಲಸ. ೧೫ ಕೋಟಿ ರೂಪಾಯಿ ಎಲ್ಲಿ ? ೧೫ ಲಕ್ಷ ಎಲ್ಲಿ ? ೧೫ ಲಕ್ಷ ಏನು ಕೊಟ್ಟರು ಬಾಕಿದಕ್ಕೆ ಇದು ವರೆಗೂ ಏನೂ ಉತ್ತರ ಇಲ್ಲ. ಈಗಲಾದರೂ ಹೇಳಿ. ಅವರಿಗೆ ಎಷ್ಟು ಅಡ್ವಾನ್ಸ್ ಕೊಟ್ಟಿದ್ದಾರೆ? ಎಷ್ಟು ಕೆಲಸ ಮುಗಿಸಿದ್ದಾರೆ, ಎಷ್ಟು ಹಣ ವಾಪಸ್ಸು ಕೊಟ್ಟಿದ್ದಾರ್ದೆ ?

In the 4th report public Accounts Committee pointed out that the officers delayed in supplying electricity to the contractors after entering in to contract. The land was not handed over. delay of one to two years is there. They have given a good excuse for the contractor and the good case for paying extra money to him. ಇದರಲ್ಲಿ ಆಫೀಸರ್, ಕಂಟ್ರಾಕ್ಟರ್ಸ್ ಶಾಮೀಲಾಗಿದ್ದಾರೆ ಎಂದು ಹೇಳಬೇಕಾಗುತ್ತದೆ. ಅವರು ಶಾಮೀಲ್ ಆಗದೆಹೋದರೆ ಇಂತಹ ನ್ಯೂನತೆಗಳಿಗೆ ಅವಕಾಶ ಬರುವುದಿಲ್ಲ. ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಇವರಲ್ಲಿ ಶಾಮೀಲಾಗದೇ ಹೋದರೆ ಅಧಿಕಾರಿಗಳಿಗೆ ಕಂಟ್ರಾಕ್ಟರ್ಸ್ ಹೆದರಿ ಕೆಲಸ ಮಾಡುತ್ತಾರೆ. ಟೆಂಡರ್ ಪ್ರಕಾರ ಯಾರೂ ಕೆಲಸ ಮಾಡುವುದಿಲ್ಲ, ಇದರ ಬಗ್ಗೆ ನ್ಯೂನತೆ ಏನಾದರೂ ಇದೆಯೇ ಎನ್ನುವುದನ್ನು ಕಂಡುಹಿಡಿದು ಅವರ ಹತ್ತಿರ ಆ ಹಣವನ್ನು ಸರ್ಕಾರ ವಸೂಲ್ಮಾಡಿದೆಯೋ ? ಇದರ ಬಗ್ಗೆ ಯಾವರೀತಿಯಾಗಿ ಅವರು ಪ್ರಯತ್ನ ಮಾಡಿದ್ದಾರೆ ಹೇಳಬೇಕು. ಚುನಾವಣೆ ಬರುತ್ತದೆ, ಚುನಾವಣೆ ಬಂದ ತಕ್ಷಣ ಅವರು ಒಂದು ಅರ್ಜಿಯನ್ನು ಪಿ. ಡಬ್ಲ್ಯೂ.ಡಿ ಮಿನಿಸ್ಟರ್‌ಗೋ ಅಥವಾ ಚೀಫ್ ಮಿನಿಸ್ಟರ್‌ಗೋ ಕೊಟ್ಟು ನನಗೆ ಬಹಳ ಲುಕ್ಸಾನು ಆಗಿದೆ ನನಗೆ ೧೦ ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಡಬೇಕು ಎಂದು ಕೇಳುತ್ತಾರೆ. ಈ ರೀತಿಯಾಗಿ ನಾಮಕಾವಸ್ತೆ ಷಡ್ಯೂಲ್ ಕೊಡುವುದನ್ನು ಬಿಟ್ಟು ಬಿಡಬೇಕು. ಇದು ಒಂದು ನಿದರ್ಶನ ಕೊಟ್ಟೆ. ಇನ್ನೂ ಹಲವಾರು ಇಂಥವುಗಳು ಇವೆ. ಇಂಥ ಕೆಲಸವನ್ನು ಏತಕ್ಕೆ ಮಾಡಬೇಕು? ಇಂಥ ಕೆಲಸಕ್ಕೆ ಏತಕ್ಕೆ ಅವಕಾಶ ಮಾಡಿಕೊಡಬೇಕು ? ಇನ್ನೊಂದು ಅರಕಲಗೂಡಿನ ಟನಲ್ ಬಗ್ಗೆ ಹೇಳುತ್ತೇನೆ. ಅದು ಈ ರೀತಿ ಇದೆ.

The same contractor took up in 1980 Arkalgud Tunnel in the Right Bank. Rs. 35 lakhs were given to him as advance in addition to these Rs. 1.15 crores. He has not completed even this small tunnel by the scheduled date namely, April 1983. Even today it is incomplete though he is given increased rates. The cost of the tunnel was originally Rs. 3 crores and now it has gone upto Rs. 7 crores. There is escalation of price by delaying all this. ಮಾನ್ಯ ಅಧ್ಯಕ್ಷರೇ, ಇಂತಹ ಒಂದು ನೀತಿ ಏನು ಇದೆ ಅದು ಸರಿಯಲ್ಲ. ಇನ್ನು ಮೈನರ್ ಇರಿಗೇಷನ್‌ಗೆ ಎಷ್ಟೆಷ್ಟು ಕೆಲಸಗಳು ಸೇರಿಕೊಂಡಿವೆ ಅದರಲ್ಲಿ ಎಷ್ಟು ಪೂರೈಸಿದೆ ಎನ್ನುವುದು ಬೇಕಾಗಿಲ್ಲ. ಮೈನರ್ ಇರಿಗೇಷನ್‌ಗೆ ಜಾಸ್ತಿ ಹಣ ಇರುವುದಿಲ್ಲ. ಅದರ ಕಡೆ ಯಾರದೂ ಗಮನ ಇಲ್ಲ. In Audit report 1982-83 on page number 200 it is said. During 1980-81, 445 works were taken, but not taken up works during that year was 445. In 1981-82 570 works were taken, but 570 works were not taken up The Hon. Minister must furnish the recent figures. This Government though claims that it cares for the welfare of the people and the ryots, all the more they must give more attention to these minor irrigation projects. ಮೈನರ್ ಇರಿಗೇಷನ್‌ನಲ್ಲಿ ೧೯೮೩ ನೇ ಇಸವಿಯ ನಂತರ ಇದುವರೆಗೆ ಎಷ್ಟು ಕೆಲಸಗಳನ್ನು ತೆಗೆದುಕೊಂಡು

ಎಷ್ಟು ಕಂಪ್ಲೀಟ್ ಮಾಡಿದ್ದಾರೆ? ಎಷ್ಟು ಹೆಕ್ಟೇರಿಗೆ ಅನುಕೂಲವಾಗಿದೆ, ಎಷ್ಟು ಜಮೀನು ನೀರಾವರಿ ಅಬಾದಿಗೆ ಬಂದಿದೆ ಎನ್ನುವುದನ್ನು ಅವರು ಹೇಳಬೇಕು. ಈ ನೀರಾವರಿ ಯೋಜನೆಯ ವ್ಯವಸ್ಥೆ ಏನಿದೆ ಇದರಲ್ಲಿ ಎಷ್ಟು ಜನ ಅಧಿಕಾರಿಗಳನ್ನು ಇಟ್ಟುಕೊಂಡಿದ್ದಾರೆ,? ಎಷ್ಟು ಸಿಬ್ಬಂದಿ ಇಟ್ಟು ಕೊಂಡಿದ್ದಾರೆ ? ಇಟ್ಟುಕೊಳ್ಳಲಿ. ಹಿಂದೆ ಎಷ್ಟು ಇತ್ತು, ಈಗ ಎಷ್ಟು ಜಾಸ್ತಿ ಇಟ್ಟುಕೊಂಡಿದ್ದಾರೆ, ಕೆಲಸ ಜಾಸ್ತಿ ಇರಬಹುದು, ಇಟ್ಟು ಕೊಳ್ಳಲಿ, ಅಭ್ಯಂತರವಿಲ್ಲ. ಆದರೆ ಅವರಿಂದ ನಿರೀಕ್ಷಿಸಿದ ಉದ್ದೇಶ ಸಾಧನೆ ಆಯಿತೋ ಇಲ್ಲವೋ ಎಂದು ನೋಡಿದರೆ ನನಗೆ ಅದು ಕಾಣುತ್ತಿಲ್ಲ. ನಿಮ್ಮ ಅಧಿಕಾರಿಗಳಿಂದ ಕೆಲಸ ಆಗುವುದಿಲ್ಲ ಎಂದು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರದಲ್ಲಿ ಪಿ.ಡಬ್ಲ್ಯು.ಡಿ. ಕೋಡ್ ಇದೆ. ಫೈನಾನ್‌ಷಿಯಲ್ ಕೋಡ್ ಇದೆ. ಅದನ್ನು ಯಾರಾದರೂ ನೋಡಿದ್ದಾರೆಯೇ ? ಫೈನಾನ್‌ಷಿಯಲ್ ಕೋಡ್ ಎಲ್ಲಿದೆ ಎಂದು ನೋಡುವುದಿಲ್ಲ. ಯಾವುದೋ ಕೆಲಸ ಆಗಬೇಕು ಎಂದರೆ ನೋಟ್ ಹಾಕುತ್ತಾರೆ, ನಂತರ ಅದನ್ನು ಸ್ಯಾಂಕ್ಷನ್ ಮಾಡಿಸಿಕೊಂಡು ಹೋಗುತ್ತಾರೆ. ನಾವು ಏನು ನಿಗದಿ ಹಾಕಿಕೊಂಡಿದ್ದೇವೆ, ರೂಲ್ ಆಫ್ ಲಾ, ಆ ನೀತಿ ನಿಯಮಗಳನ್ನು ನೋಡಿಕೊಂಡು ಅದರ ಪ್ರಕಾರ ಹೋಗಬೇಕು ಅದರ ಪ್ರಕಾರ ಹೋಗದೇ ಹೋದರೆ, ರೂಲ್ ಆಫ್ ಲಾ ಇಲ್ಲದೇ ಹೋದರೆ, ನಮ್ಮ ಬುದ್ಧಿಗೆ ಏನು ಬರುತ್ತದೆಯೋ ಆ ರೀತಿ ಮನಸೋ ಇಚ್ಛೆ ಕೆಲಸ ಮಾಡಲಿಕ್ಕೆ. ಇಚ್ಛಾನುಸಾರ ಏನು ಬೇಕಾದರೂ ಮಾಡಲಿಕ್ಕೆ ಅವಕಾಶ ವಾಗುತ್ತದೆ. ಯಾವ ಸರ್ಕಾರಿ ಅಧಿಕಾರಿಯಾಗಲಿ ರೂಲ್ ಆಫ್ ಲಾ ಪ್ರಕಾರ ಹೋಗಿ ಬೇರೆಯ ವರಿಗೆ ಮಾರ್ಗದರ್ಶನವಾಗಬೇಕು. ಇವರು ಪಿ.ಡಬ್ಲ್ಯು. ಡಿ. ಫೈನಾನ್‌ಷಿಯಲ್ ಕೋಡ್‌ಗಳನ್ನು ನೋಡುವುದಿಲ್ಲ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಛೇರ್ಮನಾಗಿ ಅಧಿಕಾರಿಗಳನ್ನು ಇವುಗಳನ್ನು ನೀವು ಓದಿದ್ದೀರಾ ಎಂದು ಕೇಳಿದ್ದೇನೆ. ಅವರು ಓದಿಲ್ಲ ಎಂದು ಹೇಳಿದ್ದಾರೆ. ಅವರು ದೊಡ್ಡ ದೊಡ್ಡ ಅಧಿಕಾರಿಗಳು. ನನಗೆ ಹೆದರಿಕೆ, ಬೆದರಿಕೆ, ಅಂಜಿಕೆ ಏನೂ ಇಲ್ಲ. ಒಟ್ಟಿನಲ್ಲಿ ಇವುಗಳನೆಲ್ಲಾ ತಿಳಿದುಕೊಂಡು ಅದರ ಮೂಲಕ ರಾಜ್ಯಕ್ಕೆ ಉಪಯೋಗವಾಗಬೇಕು ಎನ್ನುವುದು ನನ್ನ ಉದ್ದೇಶ ಈ ಅಧಿಕಾರಿಗಳ ವಿಷಯದಲ್ಲಿ ಒಂದು ಮಾತನ್ನು ಕೇಳುತ್ತೇನೆ. ಈ ಅಧಿಕಾರಿಗಳಿಗೆ ಪರೀಕ್ಷೆ ಏಕೆ ಇಡುವುದಿಲ್ಲ ? ಚೀಫ್ ಇಂಜನಿಯರ್ ಯಾರು ಆಗಿರುತ್ತಾರೆ, ಅವರು ಬಹಳ ಬುದ್ಧಿವಂತ ರಾಗಿತ್ತಾರೆ ಎಂದು ಇಟ್ಟು ಕೊಂಡರೆ ಇದನ್ನು ಅವರು ನೋಡಿರುವುದಿಲ್ಲ, ಅದರಿಂದ ಉಪಯೋಗ ವಾಗುವುದಿಲ್ಲ. ಆದುದರಿಂದ ಇದನ್ನೆಲ್ಲಾ ನೋಡಿ ಅಭ್ಯಾಸ ಮಾಡಿಕೊಂಡು ತಿಳಿದುಕೊಂಡು ಅದರ ಪ್ರಕಾರ ರಾಜ್ಯಭಾರ ಮಾಡಿದರೆ ಉಪಯೋಗವಾಗುತ್ತದೆ. ಕೆಲವರಿಗೆ ಓದಬೇಕೆಂಬ ಇಚ್ಛೆ ಇರ ಬಹುದು, ಕೆಲವರಿಗೆ ಮನವರಿಕೆಯಾಗಿರಬಹುದು. ಆದರೆ ಮುಕ್ಕಾಲು ಭಾಗದ ಜನ ಅದನ್ನು ಓದುವುದಿಲ್ಲ, ಅದರ ಪ್ರಕಾರ ನಡೆದುಕೊಳ್ಳುವುದಿಲ್ಲ. ಸರ್ಕಾರ ನೀರಾವರಿ ಯೋಜನೆಗಳನ್ನು ರಾಜ್ಯಕ್ಕೆ ಅನುಕೂಲವಾಗಲಿ, ಪ್ರಜೆಗಳಿಗೆ ಅನುಕೂಲವಾಗಲಿ ಎಂದು ಮಾಡುತ್ತಿದೆ. ಬೇರೆ ರಾಜ್ಯ ಗಳವರು ಈ ಜಮೀನುಗಳನ್ನೆಲ್ಲಾ ಖರೀದಿ ಮಾಡುವುದಕ್ಕೆ ಶುರು ಮಾಡಿದ್ದಾರೆ, ಮುಕ್ಕಾಲುಭಾಗ ತಮಿಳುನಾಡಿನವರು ಬಂದು ಖರೀದಿ ಮಾಡುತ್ತಿದ್ದಾರೆ. ಕನ್ನಡದವರಿಗೆ ಉಪಯೋಗ ಮಾಡು ವುದಕ್ಕೆ ಪ್ರಯತ್ನ ಮಾಡಿದರೆ ಬೇರೆಯವರಿಗೆ ಅನುಕೂಲವಾಗುತ್ತಿದೆ. ದೇಶದ ಕೆಲಸ ಮಾಡುವಾಗ ರಾಜ್ಯದ ಕೆಲಸ ಮೊದಲು ಆಗಬೇಕು, ಕೊನೆಯದಾಗಿ ದೇಶದ ಕೆಲಸ ಆಗಲಿ. ಆದರೆ ಈ ಜಮೀನು ಗಳಿಗೆ ಅನುಕೂಲವಾಗಲಿ ಎಂದು ಇಷ್ಟೊಂದು ಹಣವನ್ನು ಖರ್ಚುಮಾಡಿಬಿಟ್ಟು ಅಭಿವೃದ್ಧಿ ಮಾಡಿದರೆ ಅದನ್ನು ಬೇರೆಯವರಿಗೆ ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರೆ ಕನ್ನಡದ ಜನಕ್ಕೆ ಏನು ಉಪ ಯೋಗವಾಗದಂತಾಯಿತು. ಕನ್ನಡದ ಜನ ಎಂದು ಅಭಿಮಾನದಿಂದ ಮಾನ್ಯ ಜಿ. ನಾರಾಯಣ ಕುಮಾರ್‌ರವರು ಹೇಳುತ್ತಾ, ಅವರು ಈಗ ಎಲ್ಲೋ ಹೋಗಿದ್ದಾರೆ. ಶ್ರೀಮಾನ್ ಕೆ.ವಿ. ಪುಟ್ಟಪ್ಪನವರು ಎಲ್ಲೇ ಇರು ಹೇಗೆ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂದು ಹೇಳಿದ್ದಾರೆ. ಅಂದರೆ ಔದಾರ್ಯದಿಂದ ನಾವು ಎಲ್ಲರನ್ನೂ ಬಾ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಹಣದಿಂದ ಈ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ ಅದರಲ್ಲಿ ಬೇರೆಯವರಿಗೆ ಅವಕಾಶ ಮಾಡಿಕೊಡು ವುದು ಸರಿಯೇ ? ನಾನು ಮಂತ್ರಿಯಾಗಿದ್ದಾಗ ಇದಕ್ಕೆ ಪ್ರತಿಬಂಧಕ ಹಾಕಬೇಕು ಎಂದು ಮಾಡಿದೆವು. ಆಗ ಸರ್ಕಾರದ ಹುಕುಂ ಮಾಡಿಲಿಕ್ಕೆ ಪ್ರಯತ್ನ ಮಾಡಿದೆವು. ಈಗ ಅದು ಜಾರಿಯಲ್ಲಿದೆಯೋ ಏನೋ ಗೊತ್ತಿಲ್ಲ. ಇಂತಹ ಅವ್ಯವಹಾರಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಆಂಧ್ರದಿಂದ, ತಮಿಳುನಾಡಿನಿಂದ ಹಣ ತಂದು ಇಲ್ಲಿ ಜಮೀನು ಖರೀದಿ ಮಾಡಲಿಕ್ಕೆ ಅವಕಾಶ ಕೊಡಬಾರದು. ಇದಕ್ಕೆ ೧೫ ವರ್ಷಗಳ ನಿರ್ಬಂಧ ಹಾಕಲೇಬೇಕು ಈ ನೀರಾವರಿ ಯೋಜನೆಗಳಿಂದ ಅಭಿವೃದ್ಧಿಯಾಗಿರತಕ್ಕ ಜಮೀನುಗಳ ಮಾರಾಟಕ್ಕೆ ೧೫ ವರ್ಷಗಳ ವರೆಗೆ ಹಕ್ಕು ಇರಬಾರದು ಎಂದು ನಿರ್ಬಂಧ ಹಾಕದೇ ಹೋದರೆ ಕನ್ನಡ ಜನರಿಗೆ ಇದರಿಂದ ಲಾಭ ವಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ತಮಗೆ ಹೇಳುತ್ತಾ ಇದ್ದೇನೆ. ಆಮೇಲೆ ಮೇಜರ್ ಇರಿ

ಗೇಷನ್, ಮೈನರ್ ಇರಿಗೇಷನ್‌ನಲ್ಲಿ ಹಲವಾರು ವರ್ಕ್ಸ್ ಇವೆ. ನಾನು ಹೇಳುತ್ತೇನೆ ಒಂದನ್ನೂ ಸರಿಯಾಗಿ ಪೂರೈಸದೆ, ಬೇರೆ ಯೋಜನೆಗಳನ್ನು ತೆಗೆದುಕೊಂಡಿರುವುದು ಇದೆ. ಯಾವುದಾದರೂ ಒಂದು ತೆಗೆದುಕೊಳ್ಳಿ. ಹಾರಂಗಿ ಯೋಜನೆಯನ್ನು ತೆಗೆದುಕೊಂಡರೆ ಈ ಒಂದು ಯೋಜನೆಯನ್ನು ಪೂರ್ತಿಮಾಡಬೇಕು ಎಂದು ಇಲ್ಲ, ಇದು ಅರ್ಧಂಬರ್ಧ ಆಗಿದೆ. ತಿರುಪತಿಯಲ್ಲಿ ಚೌರ ಮಾಡುತ್ತಾರೆ. ಒಬ್ಬರಿಗೆ ಅರ್ಧ ಚೌರ ಮಾಡಿ, ಇನ್ನೊಬ್ಬರಿಗೆ ಚೌರ ಮಾಡಲಿಕ್ಕೆ ಹೋಗುತ್ತಾರೆ. ಹಾಗೆ ಎಷ್ಟು ಯೋಜನೆಗಳಿವೆ ಅವುಗಳಲ್ಲಿ ಒಂದನ್ನು ತೆಗೆದುಕೊಳ್ಳುವುದು ಕಾಲು ಭಾಗ ಮಾಡುವುದು ಇನ್‌ಕಂಪ್ಲೀಟ್ ಮಾಡುವುದು, ಇನ್ನೊಂದು ತೆಗೆದು ಕೊಳ್ಳುವುದು ಅದಕ್ಕೆ ಯೋಜನೆ ಹಾಕುವುದು, ಎಸ್ಟಿಮೇಟ್ ಮಾಡುವುದು, ಕಾಲು ಭಾಗ ಮಾಡುವುದು ಇನ್‌ಕಂಪ್ಲೀಟ್ ಮಾಡುವುದು. ಹೀಗೆ ಮುಕ್ಕಾಲು ಭಾಗ ಯೋಜನೆಗಳು ಇನ್‌ಕಂಪ್ಲೀಟಾಗಿವೆ. ನಾನು ಕೇಳುತ್ತೇನೆ. ಹೊಸ ಯೋಜನೆಗಳನ್ನು ತೆಗೆದುಕೊಂಡರೆ ಅದಕ್ಕೆ ಎಲ್ಲಿಂದ ಹಣ ತರುತ್ತೀರಿ. ಯೋಜನೆಗೆ ಒಳಪಟ್ಟ ಕೆಲಸಗಳಿಗೆ ಹಣ ಒದಗಿಸ ಬಹು ಯೋಜನೆಗೆ ಒಳಪಡದೆ ಇರತಕ್ಕಂತ ಯೋಜನೆಗಳಿವೆ, ಅದಕ್ಕೆ ಹಣ ಎಲ್ಲಿಂದ ತರುತ್ತೀರಿ? ತಾವು ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಆಗಿದ್ದೀರಿ.

೨ ೦೦ ಪಿ. ಎಂ.

ಹೇಮಾವತಿ ಪ್ರಾಜೆಕ್ಟ್ ಪ್ಲಾನ್ ಬಾಹಿರ ಯೋಜನೆಯಾಗಿರತಕ್ಕಂಥಾದ್ದು ಕರ್ನಾಟಕ ರಾಜ್ಯದಲ್ಲಿ ಪ್ಲಾನ್ ಬಾಹಿರ ಯೋಜನೆಯಾಗಿರತಕ್ಕಂದ್ದು ಇದು ಒಂದು. ಅದಕ್ಕೆ ಜಾಸ್ತಿ ಹಣ ಒದಗಿಸಿರತಕ್ಕಂಥಾದ್ದು. ಅದಕ್ಕೆ ೩೪ ಕೋಟಿ ಚಿಲ್ಲರೆ ಹಣ ಒದಗಿಸಿಕೊಂಡಿದ್ದಾರೆ, ಬಹಳ ಸಂತೋಷ ನಿಮ್ಮ ಕ್ಷೇತ್ರವನ್ನು ಅಭಿವೃದ್ಧಿ ಮಾಡಬೇಕು ಮಾಡಿ ಅದನ್ನು ಮಾಡಲಿಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ಬೇರೆ ಯೋಜನೆಗೆ ಬಾಹಿರವಾಗಿರತಕ್ಕಂಥ ಯೋಜನೆಗಳು ಏನು ಇವೆ, ಅವಕ್ಕೆ ಎಷ್ಟು ಹಣ ಒದಗಿಸಿದ್ದೀರಿ. ? ನೀವು ಅವುಗಳಿಗೆ ಪ್ರಾವಿಜನ್ ಮಾಡಿಲ್ಲ. ಅವು ಹಲವಾರು ಇವೆ. ಅವುಗಳನ್ನು ಓದಲಿಕ್ಕೆ ಹೋದರೆ ಬಹಳ ಸಮಯ ಆಗುತ್ತದೆ. ಯೋಜನೆಗೆ ಬಾಹಿರವಾಗಿರತಕ್ಕ ಯೋಜನೆಗಳು ಏನು ಇವೆ ಅವಕ್ಕೆ ಸರಿದೂಗುವ ಹಾಗೆ ಹಣವನ್ನು ನೀವು ಒದಗಿಸಿಲ್ಲ ಎಂದು ಹೇಳಬೇಕಾಗುತ್ತದೆ. ಮತ್ತೊಂದು ವಿಚಾರ ಎಂದರೆ ಇನ್‌ಕಂಪ್ಲೀಟ್ ಆಗಿರತಕ್ಕ ಹಲವಾರು ಯೋಜನೆಗಳನ್ನು ನೀವು ಕೈಗೆ ತೆಗೆದುಕೊಂಡು ಪೂರೈಸಲಿಕ್ಕೆ ಆಗುತ್ತದೆಯೋ ಇಲ್ಲವೇ ಇದರ ಬಗ್ಗೆ ಯೋಚನೆ ಮಾಡಿ. ಒಂದನ್ನು ಪೂರೈಸಿ ಮತ್ತೊಂದು ಕೆಲಸ ತೆಗೆದುಕೊಳ್ಳಬೇಕು ಇಂಥಾದ್ದರಲ್ಲಿ ತಾವು ರಾಜಕೀಯ ಒತ್ತಡಕ್ಕೆ ಸಿಕ್ಕಿ ಸರ್ಕಾರದಲ್ಲಿ ಹಲವಾರು ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಅವುಗಳಿಗೆ ಹಣ ಒದಗಿಸಲಿಕ್ಕೆ ನಿಮ್ಮಿಂದ ಆಗಿಲ್ಲ. ಆ ಯೋಜನೆಗಳನ್ನು ತೆಗೆದುಕೊಳ್ಳುವುದೇ ಅಲ್ಲ, ಆನ್ ಗೋಯಿಂಗ್ ವರ್ಕ್ಸ್‌ಗೆ ಹಣ ಇರುವುದಿಲ್ಲ. ಹೀಗೆಯೇ ಹಲವಾರು ವರ್ಷಗಳವರೆಗೆ ಮುಂದುವರಿಸಿದರೆ ಎಸ್‌ಕಲೇಷನ್ ಆಫ್ ಪ್ರೈಸಸ್ ಎಷ್ಟು ಆಗುತ್ತದೆ. ನೂರ. ಕೋಟಿ ರೂಪಾಯಿಗಳು ಖರ್ಚಾಗತಕ್ಕ ಯೋಜನೆಗೆ ೫೦೦ ಕೋಟಿ ರೂಪಾಯಿಗಳು ಆಗುತ್ತದೇ ಆದ್ದರಿಂದ ಈ ವರ್ಷದಲ್ಲಿ ಇದನ್ನು ಕಂಪ್ಲೀಟ್ ಮಾಡಬೇಕೆಂದು ಒಂದು ಪ್ಲಾನ್ ಅಥವಾ ಒಂದು ಪ್ರೋಗ್ರಾಮ್ ಇಟ್ಟುಕೊಳ್ಳಿ. ಇನ್ನು ಎರಡು ವರ್ಷ ಆದಮೇಲೆ ಯಾವ ಯಾವ ಯೋಜನೆಗಳು ಇವೆ ಅವನ್ನು ಕಂಪ್ಲೀಟ್ ಮಾಡಲಿಕ್ಕೆ ತೆಗೆದುಕೊಳ್ಳಿ. ಎಲ್ಲಾ ಕೆಲಸಗಳನ್ನು ತೆಗೆದುಕೊಂಡು ಎಲ್ಲವನ್ನೂ ಪೂರೈಸಬೇಕೆಂದರೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಇದರಿಂದ ರಾಜ್ಯದ ಹಿತಕ್ಕೆ ಧಕ್ಕೆ ತಂದಂತೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ಲಾನ್ ಮತ್ತು ನಾನ್ ಮಾಡುವಾಗ, ಹೇಮಾವತಿ ಹಾರಂಗಿಗೆ ಜಾಸ್ತಿ ಕೊಟ್ಟಿದ್ದಾರೆ ಅಂದರೆ ದೇವೇಗೌಡರಿಗೆ ಕಾವೇರಿ ಮೇಲೆ ಪ್ರೀತಿ ಜಾಸ್ತಿ ಇದೆ,ಕೃಷ್ಣಾ ಮೇಲೆ ಇಲ್ಲ ಎಂದು ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ರೋಡ್ಸ್ ಬಗ್ಗೆ ದೊಡ್ಡ ಕಥೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಪರ್‌ಫಾರ್‌ಮೆನ್ಸ್ ಬಡ್ಜೆಟ್ ೧೯೮೪–೮೫ರ ಪ್ರಕಾರ ೩೨,೪೮೫ ಕಿಲೋಮೀಟರ್ಸ್ ರಸ್ತೆ ಇದೆ ಇದರಲ್ಲಿ ೮,೮೩೮ ಕಿಲೋಮೀಟರ್ಸ್ ಪಬ್ಲಿಕ್ ವರ್ಕ್ಸ್‌ನಲ್ಲಿ ತೆಗೆದುಕೊಂಡಿದ್ದಾರೆ. ೮,೪೨೮ ಕಿಲೋ ಮೀಟರ್ಸ್ ತಾಲ್ಲೂಕು ಬೋರ್ಡ್‌ನಲ್ಲಿ ತೆಗೆದುಕೊಂಡಿದ್ದಾರೆ. ಎಂದರೆ ೧೫,೨೧೯ ಕಿಲೋಮೀಟರ್ ಅಂದರೆ ೫೦ ಪರ್ಸೆಂಟ್ ಈಗ ಓಲ್ಡ್ ರೂರಲ್ ರೋಡ್ಸ್ ಆಗಿವೆ. ಹಳ್ಳಿಗಾಡಿನಲ್ಲಿರತಕ್ಕ ರಸ್ತೆಗಳು ಏನಿವೆ, ಇವುಗಳನ್ನು ಯಾರು ಮೆಂಟೈನ್ ಮಾಡಬೇಕು ಈ ಬಗ್ಗೆ ನನಗೆ ಮಾನ್ಯ ದೇವೇಗೌಡರು ಉತ್ತರ ಹೇಳಬೇಕು. ಇದರಲ್ಲಿ ಎಷ್ಟು ಹಳ್ಳಿಗಳು ಸೇರಿವೆ ಹೇಳುತ್ತೇನೆ. ೧೯೮೩ಕ್ಕೆ ೧,೧೯

villages were not connected by any roads at all ೧೧,೫೩೮ villages were connected by kachha roads ೬,೨೫೭ ಹಳ್ಳಿಗಳಲ್ಲಿ ಒಳ್ಳೆಯ ರೋಡ್ಸ್ ಇವೆ. ೧,೧೦೯ ಹಳ್ಳಿಗಳಿಗೆ ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ರಸ್ತೆ ಇಲ್ಲ. ಎಲ್ಲಾ ಕಡೆಗೆ ರೋಡ್ಸ್ ಕೊಡುತ್ತೇವೆಂದು ಹೇಳಿದಿರಿ, ಹಳ್ಳಿ ಪೆದ್ದಾರಿ ಮಾಡುತ್ತೇವೆಂದು ಹೇಳಿದಿರಿ. ಹಳ್ಳಿಗಳಿಗೆ ರೋಡ್ ಕನಕ್ಷನ್ನೇ ಇಲ್ಲ. ಸೇತು ಬಂಧನ ಹೇಳಿದಿರಿ. ಇವುಗಳನ್ನೆಲ್ಲಾ ಹೇಳಿದ ಮೇಲೆ ಎಷ್ಟು ಹಳ್ಳಿಗಳಿವೆ, ಅಷ್ಟು ಹಳ್ಳಿಗಳಿಗೂ ರಸ್ತೆಗಳ ಸೌಲಭ್ಯ ಒದಗಿಸಲೇ ಬೇಕು. ಇಷ್ಟು ಹಳ್ಳಿಗಳಿಗೂ ರಸ್ತೆಗಳನ್ನು ಒದಗಿಸದೇ ದೇಶಕ್ಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷ ಆಯಿತು ಎಂದು ಹೇಳಿ ಭಾಷಣ ಮಾಡಿದರೆ ಪ್ರಯೋಜನ ಇಲ್ಲ. ಆದ್ದರಿಂದ, ದಯಮಾಡಿ ತಾವು ಈ ಕಡೆ ಗಮನಕೊಡಬೇಕು. ಹಳ್ಳಿ ಪ್ರದೇಶಗಳಲ್ಲಿ ಏನೇನು ಮಾಡುತ್ತಾರೆಂದು ಗೊತ್ತು. ಮೊದಲು ಟೆಂಡರ್ ಸ್ಯಾಂಕ್ಷನ್ ಸೇತುವೆ ಕಟ್ಟುವುದಿಲ್ಲ ಮೊದಲು ರೋಡ್ ಮಾಡುತ್ತಾರೆ. ಮಳೆ ಬಂದು ಹೋದಮೇಲೆ ಸೇತುವೆ ಕಟ್ಟಲಿಕ್ಕೆ ಹೋಗುತ್ತಾರೆ. ಇದು ಸರಿಯಾದ ಮಾರ್ಗ ಅಲ್ಲ ಎಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ ರಸ್ತೆಗಳ ಬಗ್ಗೆ ನಾನು ಇಷ್ಟು ಮಾತ್ರ ಹೇಳಿದ್ದೇನೆ. ಇನ್ನು ಕಟ್ಟಡಗಳ ಬಗ್ಗೆ ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಮೈಸೂರು ಸಿಟಿಯಲ್ಲಿ ಲೋಕೋಪಯೋಗಿ ಇಲಾಖೆಯ ತಂತ್ರಜ್ಞರು ಯಾವ ರೀತಿ ಹಾಸ್ಪಿಟಲ್ ಕಟ್ಟಿದ್ದರು ಅದು ಒಂದೇ ಸಾಕು ನಿದರ್ಶನ ಈ ಕಟ್ಟಡಗಳ ಬಗ್ಗೆ ಕಟ್ಟಡಗಳನ್ನು ಕಟ್ಟುವಾಗ ಅರ್ಧಂಬರ್ಧ ಕೆಲಸ ಮಾಡುವುದು, ಸರಿಯಾಗಿ ಕೆಲಸ ಮಾಡದೇ ಇರುವುದು ಏನು ಇದೆ, ಅದರ ಬಗ್ಗೆ ಯಾರ ಯಾರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕೋ ಅವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಬೇಕು. ಯಾರು ಯಾರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅಂತಹವರ ಮೇಲೆ ಶಿಸ್ತಿನ ಕ್ರಮ ತೆಗೆದು ಕೊಳ್ಳದೇ ಹೋದರೆ ಲೋಕೋಪಯೋಗಿ ಇಲಾಖೆ ಏನು ಇದೆ ಅದು ಸರಿಯಾಗಿ ನಡೆಯುವುದಿಲ್ಲ. ಹಣ ಪೋಲಾಗುತ್ತದೆಯೇ ವಿನಹ ಜನತಾ ಸರ್ಕಾರದಲ್ಲಿ ಜನಗಳಿಗೆ ಅನುಕೂಲ ಮಾಡುತ್ತೇವೆಂದು ಏನು ಹೇಳಿದ್ದೀರೋ ಆ ಪ್ರಕಾರ ಆಗುವುದಿಲ್ಲ. ನೀವು ಇದೇ ಕೆಲಸವನ್ನು ಮಾಡಿ, ಅಧಿಕಾರಿಗಳಿಗೆ ಇದೇ ರೀತಿ ಅವಕಾಶ ಕೊಡಿ, ತಪ್ಪುಗಳನ್ನು ಮಾಡಿ ಎಂದು ಹೇಳಿ, ಕಾಮಗಾರಿಗಳನ್ನು ಇದೇ ರೀತಿ ನಡೆಸಿಕೊಂಡು ಹೋಗಿ, ಸಂತೋಷ ಏಕೆಂದರೆ, ಜನರು ಅಂದುಕೊಳ್ಳುತ್ತಾರೆ, ಜನತಾ ಸರ್ಕಾರ ಬಂದು ಇಂತಹ ಅಪಹಾರ ಮಾಡಿದೆ, ಸರಿಯಾಗಿ ಕೆಲಸ ಮಾಡಿಲ್ಲ ಎಂದು ಜನರಿಗೆ ಬೇಸರ ಬಂದಾಗ ನಿಮ್ಮ ಕಥೆ ಏನಾಗುತ್ತದೆ ಅದನ್ನು ನಾನು ಹೇಳುವುದಿಲ್ಲ ಪುನಃ ಮುಂದಿನ ಚುನಾವಣೆಯಲ್ಲಿ ಹೇಳುತ್ತೇನೆ. ನಮಸ್ಕಾರ.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯ ಸರ್ಕಾರ ೧೯೮೫–೮೬ನೇ ಸಾಲಿನ ನೀರಾವರಿ, ಲೋಕೋಪಯೋಗಿ ವಿಚಾರವಾಗಿ ನಮ್ಮ ಸರ್ಕಾರದವರು ಏನು ಬೇಡಿಕೆಗಳನ್ನು ಮಂಡಿಸಿದ್ದಾರೋ ಅದರ ಹಣಕಾಸಿನ ವಿವರಗಳನ್ನು ಏನು ಕೇಳಿದ್ದೇನೆ, ಅದು ಬಹಳ ಸೂಕ್ತವಾಗಿದೆ. ಹೆಚ್ಚಿನ ಪ್ರೋತ್ಸಾಹಿಸಿ ಕೆಲಸ ಮಾಡತಕ್ಕಂತಹ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳತಕ್ಕ ಪ್ರತಿಷ್ಠಿತವಾದ ಬಜೆಟ್ ಇದು ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

> "ಕಳೆದ ಎರಡು ವರ್ಷಗಳಲ್ಲಿ ನಮ್ಮ ನೀರಾವರಿ ವಲಯದಲ್ಲಿ ಸಾಧನೆ.—ಅದಕ್ಕೆ ಹಿಂದಿನ ಮೂರು ವರ್ಷಗಳಿಗಿಂತ ಬಹಳಷ್ಟು ಹೆಚ್ಚು. ಮುಂದುವರಿಯುತ್ತಿರುವ ಯೋಜನೆಗಳನ್ನು ಪೂರ್ಣಗೊಳಿಸುವುದು ಮತ್ತು ಈಗಾಗಲೇ ಪೂರ್ಣಗೊಂಡ ಯೋಜನೆಗಳ ಪ್ರಯೋಜನವನ್ನು ಕ್ರೋಢೀಕರಿಸುವುದು ನಮ್ಮ ಪ್ರಪ್ರಥಮ ಕಾಳಜಿಯಾಗಿದೆ. ೧೯೮೫–೮೬ರಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳ ಅಡಿಯಲ್ಲಿ ಒಂದು ಲಕ್ಷ ಹೆಕ್ಟೇರುಗಳು ಮತ್ತು ಸಣ್ಣ ನೀರಾವರಿಯ ಯೋಜನೆಯ ಅಡಿಯಲ್ಲಿ ೧೩,೦೦೦ ಹೆಕ್ಟೇರುಗಳ ಬಗ್ಗೆ ಕ್ರಮವಾಗಿ ೧೬೩,೧೮ ಕೋಟಿ ರೂಪಾಯಿಗಳ ಹಾಗೂ ೨೬.೨೬ ಕೋಟಿ ರೂಪಾಯಿಗಳ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ."

ಈ ರೀತಿ ಹೆಚ್ಚಿನ ಉತ್ಸಾಹದ ಮೇಲಿನ ಈ ಅಭಿವೃದ್ಧಿ ಕಾರ್ಯಗಳಿಗೆ ೮೫–೮೬ನೇ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ ಮತ್ತು ಬಹಳ ಸ್ತುತ್ಯವಾದ ಕಾರ್ಯಗಳನ್ನು ಮಾಡುತ್ತಾ ಇದೆ. ಸಣ್ಣ ನೀರಾವರಿ ಯೋಜನೆಯಲ್ಲಿ ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕೆ ಅವಕಾಶ ಮಾಡಿದ್ದಾರೆ. ಬೃಹತ್ ಯೋಜನೆಯಲ್ಲಿ ಕಾರ್ಯಸಾಧನೆ ಮಾಡಿರತಕ್ಕಂಥಾದ್ದು ಸ್ತುತ್ಯಾರ್ಹವೆಂದು ಹೇಳಲು ನಾನು ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಮಾತ್ರ ೮೩–೮೪ರಲ್ಲಿ–೫ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಅಳವಡಿಸಬೇಕೆಂದು ಟೋಕನ್ ಗ್ರಾಂಟಾಗಿ ಒಂದು ಸಾವಿರ ರೂಪಾಯಿಗಳನ್ನು

ಕೊಟ್ಟಿದ್ದರು. ಆದರೂ ಸಹ, ೮೪–೮೫ರಲ್ಲಿ ಮತ್ತು ೮೫–೮೬ರಲ್ಲೂ ಸಹ ಅದು ಕಾಣಿಸಲಿಲ್ಲ. ದಯವಿಟ್ಟು ಈಗಲಾದರೂ ಈ ಯೋಜನೆಗಳನ್ನು ತೆಗೆದುಕೊಂಡರೆ ನಮ್ಮ ತಾಲ್ಲೂಕಿಗೆ ಹೆಚ್ಚು ಉಪಯೋಗ ಆಗುತ್ತವೆಂದು ಹೇಳುತ್ತೇನೆ. ಈ ನೀರಾವರಿ ಯೋಜನೆಯಲ್ಲಿ ನಮ್ಮ ತಾಲ್ಲೂಕು ಭದ್ರಾ ಯೋಜನೆಯಲ್ಲಿ ಬರುತ್ತದೆ. ಇದರಲ್ಲಿ ಈಗಾಗಲೇ ಕೇಂದ್ರ ಆಯೋಗದವರು ಇದನ್ನು ೮೫–೮೬ಕ್ಕೆ ಮುಗಿಸಬೇಕೆಂದು ನಿರ್ದೇಶನ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ೮೫–೮೬ಕ್ಕೆ ಮುಗಿಸದೇ ಹೋದರೆ, ಅಚ್ಚುಕಟ್ಟಿನಲ್ಲಿ ಹೆಚ್ಚು ಅಭಿವೃದ್ಧಿ ಪಡಿಸದೇ ಹೋದರೆ, ಆ ಭೂಮಿ ನೀರಾವರಿ ಆದರೂ ಸಹ ಪ್ರಯೋಜನವಾಗುವುದಿಲ್ಲವೆಂದು ನನ್ನ ಭಾವನೆ. ಮಾರ್ಚಿ ತಿಂಗಳಿನಲ್ಲಿರ ತಕ್ಕಂಥ ಬಜೆಟ್‌ನಲ್ಲಿ ೧೯೨ ಲಕ್ಷ ರೂಪಾಯಿಗಳ ಅನುದಾನ ಕೊಟ್ಟಿದ್ದೀರಿ. ಅದರಲ್ಲಿ, ಈಗ ೩೪ ಲಕ್ಷ ರೂಪಾಯಿಗಳನ್ನು ಇಳಿಸಲಾಗಿದೆ. ಈ ರೀತಿ ಮಾಡಿದರೆ, ಅಭಿವೃದ್ಧಿ ಕಾರ್ಯವು ಸರಿಯಾಗಿ ನಡೆಯುವುದಿಲ್ಲವೆಂದು ನನ್ನ ಭಾವನೆ ಮತ್ತು ದೇವರಬೆಳಕೆರೆ ಪಿಕಪ್ ಕೆಲಸ ಕೂಡ ಹಾಗೇ ಉಳಿದಿದೆ. ಮತ್ತು ಅಲ್ಲಿ ರಸ್ತೆ ರಿಪೇರಿಯಾಗಬೇಕಾಗಿದೆ. ಈ ಸಮಸ್ಯೆ ಹಾಗೇ ಉಳಿದಿದೆ. ಅಲ್ಲಿ ರೈಲ್ವೆ ಲೈನ್ ಬಂದಿರುವುದರಿಂದ ಅದನ್ನೂ ಕೂಡ ಸರಿಪಡಿಸಬೇಕು. ಇಲ್ಲದಿದ್ದರೆ, ಚಾನಲ್ ಹೋಗುವುದಕ್ಕೆ ತೊಂದರೆಯಾಗುತ್ತದೆ. ಅದನ್ನು ಸರಿಪಡಿಸದೇ ಹೋದರೆ, ಮೂರೂವರೆ ಸಾವಿರ ಎಕರೆ ನೀರಾವರಿ ಪ್ರದೇಶ ನಿಷ್ಪ್ರಯೋಜನ ಆಗುತ್ತದೆ. ಈ ಕೆಲಸಕ್ಕಾಗಿ ಹಣವನ್ನು ಒದಗಿಸಬೇಕೆಂದು ಹೇಳುತ್ತಿದ್ದೇನೆ. ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಬಹಳ ಮಟ್ಟಿಗೆ ೨ ವರ್ಷಗಳಿಂದ ಹಣಕಾಸಿನ ವ್ಯವಸ್ಥೆಯನ್ನು ಸರಿಯಾಗಿ ಕೊಟ್ಟಿಲ್ಲ. ನೀವು ಕೊಟ್ಟಿರತಕ್ಕಂಥ ೩೦ ಲಕ್ಷ ಹೆಚ್ಚು ಹಣದಲ್ಲಿ ಜೀಪ್, ವಗೈರೆ, ಅವರ ಸಂಬಳ ಸಾರಿಗೆಗೆ ಖರ್ಚಾಗುತ್ತದೆಯೇ ಹೊರತು ಅಭಿವೃದ್ಧಿ ಕೆಲಸಗಳನ್ನು ಏನೂ ಅರೆ ಮಾಡುವುದಕ್ಕೆ ಆಗುವುದಿಲ್ಲ. ಉಳಿದ ಹಣದಲ್ಲಿ ಏನು ಮಾಡುವುದಕ್ಕಾಗುತ್ತದೆ? ನಮ್ಮ ಕ್ಷೇತ್ರದಲ್ಲಿ ರಸ್ತೆ ಇಲ್ಲ. ೨ ಸಕ್ಕರೆ ಕಾರ್ಖಾನೆಗಳಿವೆ. ಸಾಗಾಣಿಕೆ ವೆಚ್ಚ ಜಾಸ್ತಿಯಾಗಿ ಬರತಕ್ಕಂತಹ ಲಾಭ ಕೂಡಾ ಕಡಿಮೆಯಾಗಿದೆ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕೆಲಸ ನಡೆದೇ ಇಲ್ಲ. ಕಬ್ಬನ್ನು ಶೇಖರಣೆ ಮಾಡದೇ ಇದ್ದರೆ, ೨ ಸಕ್ಕರೆ ಕಾರ್ಖಾನೆಗಳನ್ನೂ ಮುಚ್ಚಬೇಕಾಗುತ್ತದೆ. ಸರಿಯಾದ ರಸ್ತೆ ಇಲ್ಲದೆ, ರೈತರು ತೊಂದರೆ ಪಡುವಂತಹ ಪರಿಸ್ಥಿತಿ ಬಂದಿದೆ. ಬೇರೆ ಕಡೆಗೆ ಇದಕ್ಕೆ ಜಾಸ್ತಿ ಹಣವನ್ನು ಕೊಟ್ಟಿದ್ದಾರೆಂದು ನಾನು ಹೇಳುವುದಿಲ್ಲ. ೧೨೩ ಲಕ್ಷ ಹಣವನ್ನು ಹಿಂದೆ ಕೊಟ್ಟಿದ್ದನ್ನು ಅವರ ವಾಹನಕ್ಕೆ, ಸಂಬಳಕ್ಕೆ ಕೊಡುವುದಾದರೆ ನಮಗೆ ತೊಂದರೆಯಾಗುತ್ತದೆ. ನಮ್ಮ ಮಂತ್ರಿವರ್ಯರು ವಿಶಾಲ ಹೃದಯ ಉಳ್ಳವರು. ಈಗ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕೆಂದು ಅವರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಮಗೆ ಭದ್ರಾ ನೀರು ಸಿಕ್ಕದಿದ್ದರೆ ತುಂಬಾ ತೊಂದರೆಯಾಗುತ್ತದೆ. ಹರಿಹರ ತಾಲ್ಲೂಕಿನ ಬಗಾಲ ಪ್ರದೇಶಗಳಿಗೆ ನೀರು ಪಡೆಯುತಕ್ಕಂತಹ ವ್ಯವಸ್ಥೆ ಮಾಡಿದ್ದೀರಿ. ಆದರೂ ನಮಗೆ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ರಸ್ತೆ ಸೌಕರ್ಯ ಇಲ್ಲದಿರುವ ಕಾರಣ ಕಾಡಾ ಯೋಜನೆಯ ಮೂಲಕ ಒಂದೊಂದು ಹಳ್ಳಿಗೆ ಹೋಗಲು ತೊಂದರೆಯಾಗುತ್ತದೆ. ಇವೊತ್ತು ೩ ಅಡಿ ಇರತಕ್ಕ ಚಾನಲ್ ೩೦ ಅಡಿಗೂ ಹೋಗಿದೆ. ರಸ್ತೆಗೂ ಹೋಗಿದೆ. ರಸ್ತೆಗಳಲ್ಲಿ ಗಾಡಿಗಳು ಓಡಾಡುವ ಪರಿಸ್ಥಿತಿಯಿಲ್ಲ. ಆ ಪರಿಸ್ಥಿತಿಯನ್ನು ಸರಿಪಡಿಸಿ, ಆಯಾ ರಸ್ತೆಗಳನ್ನು ವಿಶಾಲವಾಗಿ ಮಾಡಿ ಚಾನಲ್ಲನ್ನು ಕಡಿಮೆ ಮಾಡು ವುದಕ್ಕಾಗಿ ಮುಖ್ಯವಾಗಿ ಕಾಡಾದಲ್ಲಿ ಹೆಚ್ಚಿನ ಹಣವನ್ನು ಕೊಡದಿದ್ದರೆ ನಮ್ಮ ಕ್ಷೇತ್ರಕ್ಕೆ ತುಂಬಾ ಅನ್ಯಾಯವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ನಮ್ಮ ಹರಿಹರ ತಾಲ್ಲೂಕಿನಲ್ಲಿ ಶ್ರೀ ಗುಂಡೂರಾಯರು ಬಂದಾಗ ಮಂಜುಳಾ ಅವರನ್ನು ಕರೆಯಿಸಿ ಸೇತುವೆ ಮಂಜೂರು ಮಾಡಿಸುತ್ತೇನೆ ಎಂದಿದ್ದರು. ಆದರೆ, ಅವರು ಹೇಳಿದ ಪ್ರಕಾರ ಸೇತುವೆ ಹಾಕಿಸಲಿಲ್ಲ. ಆದ್ದರಿಂದ ನಮಗೆ ಅನಾನುಕೂಲವಾಗಿದೆ. ನಂದಿಗುಡಿ ಹತ್ತಿರ ಸೇತುವೆ ನಿರ್ಮಾಣ ಮಾಡಿದರೆ ನಂ. ೪ ಮತ್ತು ೧೩ ನ್ಯಾಷನಲ್ ಹೈವೇ ಸೇರತಕ್ಕ ಪ್ರಸಂಗವಿದೆ. ಇದರಿಂದ, ೪೬–೪೭ ಕಿ.ಮೀ. ಉದ್ದ ಕಡಿಮೆಯಾಗುತ್ತದೆ ಹಂಸಭಾವಿ, ಹಿರೇಕೆರೂರು, ರಾಣೆಬೆನ್ನೂರು, ಹರಿಹರ ಮತ್ತು ದಾವಣಗೆರೆ ಭಾಗದ ಜನರಿಗೆ ಇದರಿಂದ ಹೆಚ್ಚಿನ ಒಂದು ನೆರವು ಆಗುತ್ತದೆ ಅಲ್ಲದೆ, ಸಾಗಾಣಿಕೆಗೆ ವಿಶೇಷವಾಗಿ ಅನುಕೂಲವಾಗುತ್ತದೆ. ಮಾನ್ಯ ಗುಂಡೂರಾಯರು ಹಿಂದೆ ಇದರ ಬಗ್ಗೆ ಮಾತು ಕೊಟ್ಟಿದ್ದರು. ಅವರ ಸರ್ಕಾರ ಹೋಯಿತು. ಈ ದಿನ ನಿಮ್ಮ ಸರ್ಕಾರ ಬಂದಿದೆ. ಆ ಸೇತುವೆ ಯನ್ನು ಮಾಡಿಕೊಡಿಯೆಂದು ರಾಣೆಬೆನ್ನೂರು, ಹಿರೇಕೆರೂರು ಮತ್ತು ಹರಿಹರ ತಾಲ್ಲೂಕಿನ ಜನತೆ ಕೇಳುತ್ತಿದ್ದಾರೆ. ಇದನ್ನು ದಯವಿಟ್ಟು ಮಾನ್ಯ ದೇವೇಗೌಡರು ಮತ್ತು ಮಾನ್ಯ ಮುಖ್ಯಮಂತ್ರಿ ಗಳಾದ ಹೆಗಡೆಯವರು ಗಮನಿಸಿ, ನಮಗೆ ತಮ್ಮ ಕಾಲದಲ್ಲಿ ಇದನ್ನು ಮಾಡಬೇಕೆಂದು ಕೋರುತ್ತೇನೆ.

ಇದರಿಂದ ನಮಗೆ ಅನುಕೂಲ ಆಗುತ್ತದೆ. ಹರಿಹರ ತಾಲ್ಲೂಕಿನ ಬಳಿ ರೈಲ್ವೇಗೇಟ್ ಬರುತ್ತದೆ, ಇದರ ಪಕ್ಕದಲ್ಲಿ ರಸ್ತೆ ಮಾಡಬೇಕು. ೨ ಗೇಟ್‌ಗಳನ್ನು ಅವಾಯ್ಡ್ ಮಾಡುವುದರಿಂದ ಜನಗಳಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ೨೦ ನಿಮಿಷ ಅರ್ಧಗಂಟೆ ಗೇಟ್ ಹಾಕಿದರೆ, ಪ್ರಯಾಣಿಕರು ಬಸ್ಸಿನಲ್ಲಿ ಹತ್ತಿ, ಇಳಿದು ಮಾಡುತ್ತಾರೆ, ಇದರಿಂದ ಪ್ರಯಾಣಕ್ಕೂ, ಸಾಗಾಣಿಕೆಗೂ ಅನಾನುಕೂಲವಾಗುತ್ತದೆ. ಹರಿಹರ ತಾಲ್ಲೂಕಿನಲ್ಲಿ ೨ ರೈಲ್ವೇಗೇಟ್ ತಪ್ಪಿಸಲಿಕ್ಕೆ ಪಕ್ಕದಲ್ಲಿ ರಸ್ತೆ ಮಾಡಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ. ಈ ಕೆಲಸಗಳಿಗೆ ಕಾಡಾ ಗ್ರ್ಯಾಂಟ್ ಸಿಗದಿದ್ದರೆ ಬಹಳ ತೊಂದರೆಯಾಗುತ್ತದೆ. ಕೇಂದ್ರ ಸರ್ಕಾರದ ಬಿಗಿಮುಷ್ಟಿಯಲ್ಲಿ ಇಷ್ಟು ದೊಡ್ಡ ಯೋಜನೆಯನ್ನು ಹಾಕಿಕೊಳ್ಳುವುದು ಒಂದು ಸ್ತುತ್ಯಾರ್ಹವಾದ ಕೆಲಸವಾಗಿದೆ. ಹಣ ಕಡಿಮೆಯಿದ್ದರೂ ಕೂಡ ತಾವು ಮಾಡುತ್ತಿರುವ ಕೆಲಸ ಮೆಚ್ಚತಕ್ಕಂಥಾದ್ದು. ಎದುರು ಪಕ್ಷದವರು ಸರ್ಕಾರ ಮಾಡತಕ್ಕಂತಹ ಒಳ್ಳೆಯ ಕೆಲಸದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿ, ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಹಣವನ್ನು ಸದುಪಯೋಗಪಡಿಸಲು ಸಲಹೆಗಳನ್ನು ಕೊಡಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ.—ಕೇಂದ್ರ ಸರ್ಕಾರ ಸಹಾಯ ಮಾಡದೇ ಹೋದರೆ, ನೀವು ಯಾವ ಕೆಲಸವನ್ನೂ ಮಾಡುತ್ತಾ ಇರಲಿಲ್ಲ.

ಅಧ್ಯಕ್ಷರು.—ನೀವು ಮಧ್ಯೆ ಮಾತನಾಡಿದರೆ, ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ಸದಸ್ಯರು ಸ್ಟಡಿ ಮಾಡಿಕೊಂಡು ಬಂದಿರುತ್ತಾರೆ. ಅವರಿಗೆ ನೀವು ತೊಂದರೆ ಕೊಡುವುದು ಬೇಡ.

† ಶ್ರೀ ಬಿ.ಜಿ. ಕೊಟ್ರಪ್ಪ.—ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ರಾಜ್ಯದಲ್ಲಿನ ಯೋಜನೆಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಬಹಳ ಗಮನ ಹರಿಸಬೇಕು. ಈ ದಿಸೆಯಲ್ಲಿ ನಾವು ನೀವು ಸೇರಿ, ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ದುಡ್ಡು ಬರುವ ಹಾಗೆ ಪ್ರಯತ್ನಿಸೋಣ.

ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಿಕ್ಕೆ ಎಕಾನಮಿಕ್ಸ್ ಮತ್ತು ಸೈನ್ಸ್ ರೀಸರ್ಚ್ ಫೌಂಡೇಷನ್‌ನವರು ಅಭ್ಯಾಸ ಮಾಡಿ ಒಂದು ವರದಿ ಕೊಟ್ಟಿದ್ದಾರೆ. ಆರನೆಯ ಪಂಚವಾರ್ಷಿಕ ಯೋಜನೆಯು ಸಕಾಲಕ್ಕೆ ಮುಗಿದಿದ್ದರೆ ದೇಶದ ಉತ್ಪಾದನೆ ೧ ಲಕ್ಷದ ೨೦ ಸಾವಿರ ಕೋಟಿ ರೂಪಾಯಿಗಳವರೆಗೆ ಜಾಸ್ತಿಯಾಗುತ್ತದೆ. ಎಕ್ಸ್‌ಪೋರ್ಟ್ ೯ ಸಾವಿರದ ೬೦೦ ಕೋಟಿ ರೂಪಾಯಿಗಳವರೆಗೆ ಜಾಸ್ತಿಯಾಗುತ್ತದೆ. ೫೪ ಮಿಲಿಯನ್ ಟನ್ ಹೆಚ್ಚುವರಿ ಆಹಾರ ಉತ್ಪಾದನೆಯಾಗುತ್ತದೆ. ಆಮೇಲೆ ೧೪.೦೪ ಮಿಲಿಯನ್ ಉದ್ಯೋಗ ಸೃಷ್ಟಿಯಾಗುತ್ತಿತ್ತು. ತಲಾವಾರು ಆದಾಯ ಈಗಿರುವುದಕ್ಕಿಂತ ಮೂರು ಪಟ್ಟು ಜಾಸ್ತಿಯಾಗುತ್ತದೆ ಎಂದು ಅವರು ಹೇಳಿದ್ದಾರೆ. ಸಕಾಲಕ್ಕೆ ನಮ್ಮ ಯೋಜನೆಗಳು ಮುಗಿದಿದ್ದರೆ, ನಮ್ಮ ರಾಜ್ಯದ ಪಾಲು ಏನಿದೆ ಅದನ್ನು ಉಪಯೋಗಿಸಿಕೊಂಡಿದ್ದರೆ ಇಷ್ಟೊಂದು ಆದಾಯ ಬರುತ್ತಿತ್ತು ಎಂದು ಅವರು ತೋರಿಸಿಕೊಟ್ಟಿದ್ದಾರೆ. ಬೇರೆ ಯಾವ ದೃಷ್ಟಿಯಿಂದಲೂ ಇದನ್ನು ಅವರು ತೋರಿಸಿ ಕೊಟ್ಟಿಲ್ಲ. ಇದು ಎಲ್ಲರೂ ಸೇರಿ ಮಾಡತಕ್ಕ ಕೆಲಸ. ಕಾಂಗ್ರೆಸ್‌ನವರು ಮತ್ತು ಜನತಾದವರು ಎಲ್ಲಾ ಸದಸ್ಯರು ರಾಷ್ಟ್ರದ ಹಿತದೃಷ್ಟಿಯಿಂದ ಈ ಕೆಲಸ ಮಾಡಬೇಕು. ನನ್ನ ಸಲಹೆ ಏನೆಂದರೆ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಂಡು ಹೆಚ್ಚಿನ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು. ನಾನು ಆಗಲೇ ಹೇಳಿದ ಹಾಗೆ ಕೇಂದ್ರದಲ್ಲಿ ನಿಮ್ಮದು ಎಷ್ಟು ನಡೆಯುತ್ತದೆಯೋ ನಮಗೆ ಗೊತ್ತಿಲ್ಲ. ಅದು ನಿಮಗೆ ಬಿಟ್ಟಿದ್ದು, ಹೆಚ್ಚಿನ ಹಣವನ್ನು ನಮ್ಮ ರಾಜ್ಯಕ್ಕೆ ನೀವು ಒದಗಿಸಿಕೊಟ್ಟರೆ ನಿಮಗೆ ಶಹಭಾಷ್‌ಗಿರಿ ಕೊಡುತ್ತೇವೆ. ನಿಮ್ಮ ಜೊತೆಯಲ್ಲಿ ನಾವು ಬರುತ್ತೇವೆ. ಅದೇ ಮಾತನ್ನು ಈ ಭಾಗದ ಅನೇಕ ಸದಸ್ಯರು ಹೇಳಿದ್ದಾರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಆಂಧ್ರಕ್ಕೆ ನಮ್ಮ ನೀರಾವರಿ ಮಂತ್ರಿಗಳಾದ ಮಾನ್ಯ ದೇವೇಗೌಡರು ಬ್ರಹ್ಮದಂಡವಿದ್ದ ಹಾಗೆ. ಹೆಚ್ಚುವರಿ ನೀರಿನ ಬಳಕೆಯನ್ನು ಯಾರೂ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಆಂಧ್ರದವರು ಹೇಳಿದ್ದಾರೆ ಆದರೆ, They cannot acquire any right to make use of the water upto 2000 years ಆದ್ದರಿಂದ ಆ ಯೋಚನೆ ನಿಮಗೆ ಬೇಕಾಗಿಲ್ಲ. ನಮ್ಮ ಸರ್ಕಾರ ಕನಿಷ್ಟ ಪಕ್ಷ ನಮ್ಮ ಪಾಲಿನ ನೀರನ್ನು ಆದಷ್ಟು ಬೇಗ ಉಪಯೋಗ ಮಾಡಿಕೊಳ್ಳಲಿಕ್ಕೆ ಯೋಜನೆಯನ್ನು ಹಾಕಿಕೊಳ್ಳಬೇಕು. ೨೦೦೦ ಇಸವಿಯೊಳಗೆ ನಮ್ಮ ಪಾಲಿನ ಎಲ್ಲಾ ನೀರನ್ನು ಬಳಸಿಕೊಳ್ಳು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವುದಕ್ಕೆ, ಪ್ರತಿಯೊಂದು ಹನಿಯನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಯೋಜನೆಯನ್ನು ಈಗಿನಿಂದಲೇ ತಾವು ತಯಾರು ಮಾಡಿಕೊಳ್ಳಬೇಕು. ಇದರ ಬಗ್ಗೆ ಚಿಂತನೆ ಮಾಡಿ ಈ ದಿಸೆಯಲ್ಲಿ ಸರ್ಕಾರ ಕೆಲಸ ಮಾಡಬೇಕು. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ನೀರಾವರಿ ಪ್ರಗತಿಯನ್ನು ನೋಡಿ ವ್ಯಥೆಪಡುತ್ತಾ ನನ್ನ ಮಾತನ್ನು ಮುಂದುವರಿಸಲಿಕ್ಕೆ ಇಚ್ಛೆ ಪಡುತ್ತೇನೆ. ನೀರಾವರಿ ಬಹಳ ಪ್ರಾಮುಖ್ಯವಾದುದಾಗಿದೆ. ದೇಶದಲ್ಲಿ ಜನರಿಗೆ, ಅನ್ನವಿಲ್ಲದೆ ಪ್ರಾಣವಿಲ್ಲ, ನೀರಿಲ್ಲದೆ ವ್ಯವಸಾಯವಿಲ್ಲ. ಅಂದಮೇಲೆ ಮಾನವ ಈ ಭೂಮಿಯ ಮೇಲೆ ತನ್ನ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರಾರಂಭ ಮಾಡಿದಂದಿನಿಂದಲೇ ನೀರಾವರಿಯ ವ್ಯವಸಾಯವನ್ನು ಮಾಡಿಕೊಂಡು ಬಂದಿದ್ದಾನೆ. ನೀರಾವರಿ ವ್ಯವಸಾಯ ಅಷ್ಟೇ ಪುರಾತನವಾದುದು. ಪುರಾತನ ಕಾಲದಿಂದಲೂ ವ್ಯವಸಾಯ ನೀರನ್ನು ಅವಲಂಬಿಸಿಕೊಂಡು ಮುಂದುವರಿದಿದೆ. ನೀರಿನ ಉತ್ಪಾದನೆಯನ್ನು ಮಾಡಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಮಳೆಯಿಂದ ಸಿಗತಕ್ಕ ನೀರನ್ನು ನಾವು ಉಪಯೋಗಿಸಿಕೊಂಡು ವ್ಯವಸಾಯವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಅಂದರೆ ಮಳೆಗಾಲದಲ್ಲಿ ನಮಗೆ ಏನು ನೀರು ಲಭ್ಯವಾಗುತ್ತದೆ. ಹಳ್ಳಕೊಳ್ಳಗಳಲ್ಲಿ ಹರಿಯುತಕ್ಕ ನೀರನ್ನು, ನದಿಗಳಲ್ಲಿ ಹರಿಯತಕ್ಕ ನೀರನ್ನು ಭೂಗರ್ಭದಲ್ಲಿ ಹುದುಗಿರತಕ್ಕ ನೀರನ್ನು ನಾವು ಉಪಯೋಗಿಸಿಕೊಂಡು ವ್ಯವಸಾಯವನ್ನು ಅಭಿವೃದ್ಧಿ ಪಡಿಸಬೇಕಾಗಿದೆ ಎಂದು ನಾವು ಚರಿತ್ರೆಯಲ್ಲಿ ಓದುತ್ತೇವೆ. ಸಾವಿರಾರು ವರ್ಷಗಳ ಹಿಂದೆಯೇ ಕಾಲುವೆಗಳನ್ನು ಮಾಡಿಕೊಂಡು ನದಿಗಳಲ್ಲಿ ಹರಿಯುತಕ್ಕ ನೀರನ್ನು ವ್ಯವಸಾಯಕ್ಕೆ ಉಪಯೋಗ ಮಾಡಿಕೊಳ್ಳುವುದಕ್ಕೆ ಆದ್ಯತೆಯನ್ನು ಕೊಟ್ಟಿದ್ದಾರೆ.

ನಮ್ಮ ರಾಜ್ಯದ ನೀರಾವರಿ ಬಗ್ಗೆ ಯೋಚಿಸುವುದಾದರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು ೧ ಲಕ್ಷದ ೯೧ ಸಾವಿರದ ೭೭೩ ಚದರ ಕಿಲೋಮೀಟರ್ ವಿಸ್ತೀರ್ಣ ಇದೆ. ಇದರಲ್ಲಿ ೪.೭೬ ಕೋಟಿ ಎಕರೆ ಭೂಪ್ರದೇಶವನ್ನು ಕರ್ನಾಟಕ ರಾಜ್ಯ ಹೊಂದಿದೆ. ಭರತಖಂಡದ ೫ ಭಾಗದಷ್ಟು ಭೂಭಾಗ ವನ್ನು ಈ ರಾಜ್ಯ ಹೊಂದಿದೆ. ನಮ್ಮ ರಾಜ್ಯದ ಸ್ಥಾನಮಾನ ಭಾರತದ ಭೂಪಟದಲ್ಲಿ ೮ನೆಯ ಸ್ಥಾನವನ್ನು ಪಡೆದಿದೆ. ಈಗ ವ್ಯವಸಾಯಕ್ಕೆ ಉಪಯೋಗಕ್ಕೆ ಬರತಕ್ಕ ಭೂಮಿ ೪.೭೬ ಕೋಟಿ ಎಕರೆ ಭೂಮಿ ಇದೆ. ಆದರಲ್ಲಿ ನಾವು ೨.೬೦ ಕೋಟಿ ಎಕರೆ ಭೂಮಿಯನ್ನು ನಾವು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದೇವೆ. ವ್ಯವಸಾಯಕ್ಕೆ ಒಳಪಡದೇ ಇರತಕ್ಕ ಭೂಮಿ ಸುಮಾರು ೩೯ ಲಕ್ಷ ಎಕರೆ ಭೂಮಿಯನ್ನು ನಾವು ವ್ಯವಸಾಯಕ್ಕೆ ಉಪಯೋಗಿಸದೇ ಹಾಗೆಯೇ ಬೀಳು ಬಿಟ್ಟಿದ್ದೇವೆ. ೨ ಕೋಟಿ ೬೦ ಲಕ್ಷ ಎಕರೆ ಭೂಮಿಯನ್ನು ಏನು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದೇವೆ ಅದರಲ್ಲಿ ಕೇವಲ ೧೪.೨೬ ಲಕ್ಷ ಎಕರೆ ಮಾತ್ರ ನೀರಾವರಿಗೆ ಒಳಪಡುವಂತಹ ಭೂಮಿಯಾಗಿದೆ. ಎಂದರೆ ೨೭ ಲಕ್ಷ ಎಕರೆ ಭೂಮಿಯನ್ನು ಕರ್ನಾಟಕ ರಾಜ್ಯದಲ್ಲಿ ನೀರಾವರಿಗೆ ಇದುವರೆಗೆ ಒಳಪಡಿಸುವುದಕ್ಕೆ ಸಾಧ್ಯವಾಗಿದೆ. ನಾವು ಏನು ಇದುವರೆಗೆ ನೀರಾವರಿಯಲ್ಲಿ ಸಾಧನೆಯನ್ನು ಮಾಡಿದ್ದೇವೆ ಅದನ್ನು ಹೊರ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ಬಹಳ ಕಡಿಮೆ ಪ್ರಮಾಣದಲ್ಲಿ ನೀರಾವರಿಯಲ್ಲಿ ಸಾಧನೆ ಯನ್ನು ಕರ್ನಾಟಕ ರಾಜ್ಯ ಮಾಡಿದೆಯೆಂದು ಗೊತ್ತಾಗುತ್ತದೆ. ನೀರಾವರಿಗಾಗಿ ಕರ್ನಾಟಕ ರಾಜ್ಯ ಹೆಚ್ಚು ಗಮನಹರಿಸಿಲ್ಲ ಎನ್ನುವುದು ಕಂಡುಬರುತ್ತದೆ. ನೀರಾವರಿಯಲ್ಲಿ ನಾವು ಬಹಳ ಹಿಂದುಳಿ ದಿದ್ದೇವೆ ಎನ್ನುವುದು ನಿರ್ಧಾರವಾಗಿದೆ. ಹೊರ ರಾಜ್ಯಗಳು ಎಂದರೆ ಆಂಧ್ರಪ್ರದೇಶ, ಪಂಜಾಬ್, ತಮಿಳುನಾಡು ರಾಜ್ಯಗಳಲ್ಲಿ ಸುಮಾರು ೬೫ ರಿಂದ ೮೦ ರವರೆಗೆ ನೀರಾವರಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ರಾಜ್ಯದ ರೈತರ ಅಭಿವೃದ್ಧಿಗೆ ಕರ್ನಾಟಕ ರಾಜ್ಯ ಏತಕ್ಕೆ ನಿರ್ಲಕ್ಷ್ಯ ತೋರಿದೆ ಎಂಬುದು ಗೊತ್ತಾಗುವುದಿಲ್ಲ. ಬೇರೆ ರಾಜ್ಯಗಳ ಅಭಿವೃದ್ಧಿಯನ್ನು ನೋಡಿದರೆ, ನಮ್ಮ ರಾಜ್ಯದ ನೀರಾವರಿ ಬಹಳ ಕಡಿಮೆಯಾಗಿರುವುದನ್ನು ನೋಡಿ ಬಹಳ ವ್ಯಥೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ನೂರಕ್ಕೆ ೭೦ರಷ್ಟು ಜನ ವ್ಯವಸಾಯಗಾರರಿದ್ದಾರೆ. ಆಹಾರಧಾನ್ಯ ಉತ್ಪಾದನೆ ಮಾಡತಕ್ಕ ರೈತನ ಸಹಾಯಕ್ಕೆ ನೀರಾವರಿ ವ್ಯವಸಾಯಕ್ಕೆ ಶಾಶ್ವತವಾದ ಸೌಲಭ್ಯವನ್ನು ಮಾಡುವ ಕಡೆಗೆ ರಾಜ್ಯ ಸರ್ಕಾರಕ್ಕೆ ಏತಕ್ಕೆ ಆಸಕ್ತಿಯಿಲ್ಲ ಎನ್ನುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ಈಗ ವ್ಯವಸಾಯಕ್ಕೆ ಉಪಯೋಗಕ್ಕೆ ಬರತಕ್ಕ ಶೇಕಡ ೫೫ರಷ್ಟು ಭೂಮಿ ನಮ್ಮಲ್ಲಿ ಇದೆ. ೮ ಪರ್ಸೆಂಟ್ ಭೂಮಿ ವ್ಯವಸಾಯಕ್ಕೆ ಉಪಯೋಗವಿದ್ದರೂ ವ್ಯವಸಾಯ ಮಾಡದೇ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇರತಕ್ಕ ಭೂಮಿ ಇದೆ. ಒಟ್ಟು ೬೩ ಪರ್ಸೆಂಟ್ ಭೂಮಿ ವ್ಯವಸಾಯಕ್ಕೆ ಬರುತ್ತದೆ. ಶೇಕಡ ೬೩ ರಷ್ಟು ಭೂಮಿಯನ್ನು ನೀರಾವರಿ ವ್ಯವಸಾಯಕ್ಕೆ ಒಳಪಡಿಸುವುದಕ್ಕೆ ಸಾಧ್ಯತೆ ಇದೆ. ಈಗ ಏನಾಗುತ್ತಿದೆ ಅಂದರೆ ನಮ್ಮ ಯಾವುದೇ ಯೋಜನೆಗಳು ತೀವ್ರವಾಗಿ ಆಗುತ್ತಿಲ್ಲ. ಅನ್ ಗೋಯಿಂಗ್ ಸ್ಕೀಮ್‌ಗಳು ಬಹಳ ಹಿಂದೆಯೇ ಪ್ರಾರಂಭವಾಗಿದ್ದರೂ ಅವುಗಳು ಮುಗಿಯುವ ಸಮಯಕ್ಕೆ ಮುಗಿದಿಲ್ಲ, ನಮ್ಮ ಯೋಜನೆಗಳು ಮಂದಗತಿಯಿಂದ ನಡೆಯುತ್ತಿವೆ. ಈಗಿರತಕ್ಕ ಯೋಜನೆಗಳ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಹೆಚ್ಚು ಸೌಲಭ್ಯವನ್ನು, ಆರ್ಥಿಕ ಸಹಾಯವನ್ನು ಒದಗಿಸಿಕೊಟ್ಟು ಸಮಯಕ್ಕೆ ಸರಿಯಾಗಿ ಮುಗಿಸದಿದ್ದರೆ, ಮುಂದಿನ ನೀರಾವರಿ ಯೋಜನೆಗಳಿಗೆ ಕಷ್ಟವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬಹುಭಾಗ ಬರಗಾಲಕ್ಕೆ ತುತ್ತಾಗಿದೆ. ಅತಿ ಕಡಿಮೆ ಮಳೆ ಬರತಕ್ಕ ಪ್ರದೇಶಗಳು ಏನಿವೆ ಅಲ್ಲಿ ರೈತರ ಜೀವನ ಹಾಳಾಗಿ ಹೋಗಿದೆ. ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಇರುವುದರಿಂದ ಭೀಕರ ಪರಿಸ್ಥಿತಿ ಉಂಟಾಗಿದೆ. ಬಾವಿಗಳಲ್ಲೂ ಸಹ ವ್ಯವಸಾಯಕ್ಕೆ ನೀರು ದೊರೆಯುತ್ತಿಲ್ಲ. ತುಮಕೂರು, ಚಿತ್ರದುರ್ಗ, ಕೋಲಾರ ಮತ್ತು ಧಾರವಾಡದ ಕೆಲವು ಭಾಗಗಳನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿರುವುದರಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಆ ವ್ಯಾಪ್ತಿಯಲ್ಲಿ ಬರತಕ್ಕ ಪ್ರದೇಶಗಳಿಗೆ ನೀರಾವರಿಗಾಗಿ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರಬಹುದು. ನಮ್ಮ ಭಾಗದ ಕಡೆಗೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿತ್ತು. ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲೂ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟರೂ- ಅದು ರಾಜ್ಯದ ಆಸ್ತಿಯಾಗುತ್ತದೆ. ರಾಜ್ಯದ ಯಾವುದೇ ಭಾಗದಲ್ಲೂ ಅಭಿವೃದ್ಧಿಯಾದರೂ ಅದು ದೇಶದ ಅಭಿವೃದ್ಧಿಯಾಗುತ್ತದೆ. ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ರಾಜ್ಯದ ಯಾವ ಯಾವ ಭಾಗಗಳು ಸದಾ ಬರಗಾಲಕ್ಕೆ ತುತ್ತಾಗುತ್ತವೆ, ಅಂತಹ ಕಡೆಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಕೂಡಿಬರಗಾಲ ಕಾಮಗಾರಿ ಕೆಲಸ ಕಾರ್ಯಗಳನ್ನು ಮಾಡುವಾಗ ನೀರಾವರಿಗೆ ಅನುಕೂಲವಾಗುವಂತಹ ಶಾಶ್ವತ ಪರಿಹಾರವನ್ನು ಒದಗಿಸುವಂತಹ ಯೋಜನೆಯನ್ನು ಏತಕ್ಕೆ ಸರ್ಕಾರ ಕೈಗೊಂಡಿಲ್ಲ? ನಿಮಗೆ ಇದರ ಬಗ್ಗೆ ಆಸಕ್ತಿ ಇಲ್ಲವೆ ? ಇದರ ಬಗ್ಗೆ ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ

೨–೩೦ ಪಿ. ಎಂ.

ಕರ್ನಾಟಕ ರಾಜ್ಯದಲ್ಲಿ ೧೭೫ ತಾಲ್ಲೂಕುಗಳು ಇವೆ. ಅದರಲ್ಲಿ ೭೫೦ ಮಿಲಿ ಮೀಟರ್ ಮಳೆ ಬರತಕ್ಕಂತಹ ೯೪ ತಾಲ್ಲೂಕುಗಳು ಇವೆ. ಮತ್ತೆ ೧,೧೦೦ ಮಿಲಿ ಮೀಟರ್ ಮಳೆ ಬೀಳತಕ್ಕಂತಹ ೪೮ ತಾಲ್ಲೂಕುಗಳು ಇವೆ. ಸುಮಾರು ೧೪೨ ತಾಲ್ಲೂಕುಗಳು ಸದಾ ಬರಗಾಲಕ್ಕೆ ಒಳಗಾದ ಪ್ರದೇಶ. ಕೇವಲ ೩೩ ತಾಲ್ಲೂಕುಗಳು ಸ್ವಲ್ಪ ಹೆಚ್ಚು ಮಳೆಪಡೆಯತಕ್ಕಂತಹ ಪ್ರದೇಶಗಳಾಗಿವೆ. ಇಷ್ಟು ವ್ಯಾಪಕವಾದ ಪ್ರದೇಶವನ್ನು ನಾವು ಬರಡು ಇಟ್ಟುಕೊಂಡು, ಹೆಚ್ಚು ನೀರಿನ ಸೌಲಭ್ಯವನ್ನು ಒದಗಿಸಿ ಕೊಡತಕ್ಕಂಥಾದ್ದು ಅತಿ ಮುಖ್ಯವಾದ ಅಗತ್ಯಗಳಲ್ಲಿ ಒಂದಾಗಿದೆ. ಈಗ ಏನಾಗಿದೆಯೆಂದು ಹೇಳಿದರೆ ಸರ್ಕಾರ ಯೋಜನೆಗಳ ಪ್ರಕಾರ ಉತ್ಪಾದನೆಯನ್ನು ಹೆಚ್ಚಿಸಬೇಕು. ಮತ್ತು ಬಹುಸಂಖ್ಯೆಯಲ್ಲಿ ಅವಲಂಬಿಸಿರುವ ರೈತಾಪಿ ಜನಗಳ ನಿರುದ್ಯೋಗವನ್ನು ಹೋಗಲಾಡಿಸಬೇಕು. ಈಗ ನಿರುದ್ಯೋಗವನ್ನು ಹೋಗಲಾಡಿಸಲು, ಕೈಗಾರಿಕೆಯಲ್ಲಿ ಯಾರಿಗಾದರೂ ಉದ್ಯೋಗ ಕೊಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ತೊಡಗಿಸಿದರೆ ೧೦ ಜನಕ್ಕೆ ಉದ್ಯೋಗ ಕೊಡಿಸುವುದಕ್ಕೆ ಕಷ್ಟವಾಗುತ್ತದೆ. ಅದೇ ಒಂದು ಕೋಟಿ ರೂಪಾಯಿಗಳ ಬಂಡವಾಳವನ್ನು ನಾವು ನೀರಾವರಿ ವ್ಯವಸಾಯಕ್ಕೆ ಉಪಯೋಗಿಸಿದರೆ ಸುಮಾರು ಒಂದು ಸಾವಿರ ಜನ ನಿರುದ್ಯೋಗಿ ರೈತರಿಗೆ ಉದ್ಯೋಗ ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಇವೊತ್ತು ಕೆಲವರು ಅನ್ನ ಇಲ್ಲದೆ, ಬಟ್ಟೆ ಇಲ್ಲದೆ ನಿರ್ಗತಿಕರಾಗಿದ್ದರೂ ಅವರಿಗೆ ವಿದ್ಯೆಯೂ ಇಲ್ಲದೆ, ಬುದ್ಧಿಯೂ ಇಲ್ಲದೆ ಸುಮಾರು ೩೮ ವರ್ಷಗಳಿಂದಲೂ ಬದುಕಿಕೊಂಡು ಬಂದಿದ್ದಾರೆ. ಅವರು ತಮ್ಮ ಜೀವನದಲ್ಲಿ ಆಶಾಭಾವನೆಯನ್ನು ಇಟ್ಟುಕೊಂಡಿದ್ದಾರೆ. ಈ ಜನಕ್ಕೆ ತಾವು ನೀರು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡದೇ ಹೋದರೆ ಇನ್ನು ಯಾರಿಗೆ ಏನು ಮಾಡುವುದಕ್ಕೆ ಸಾಧ್ಯವಿದೆ ? ಇಷ್ಟೆಲ್ಲಾ ವೆಚ್ಚವನ್ನು ಏತಕ್ಕೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ರಾಜ್ಯದ ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ, ಏತಕ್ಕೆ ಇದರ ಬಗ್ಗೆ ನಿರ್ಲಕ್ಷ್ಯ ಇದೆ ? ನಾನು ಕೆಲವು ಇಂಜನಿಯರ್‌ಗಳನ್ನು ವಿಚಾರ ಮಾಡಿದೆ. ಭದ್ರಾ ಅಣೆಕಟ್ಟು ಏನು ಇದೆ ಅದನ್ನು ಈ ಯೋಜನೆಯಲ್ಲಿ ಸೇರಿಸಿದ್ದಾರೆ. ಆದರಿಂದ ಸುಮಾರು ೫ ಲಕ್ಷ ಎಕರೆ

ಜಮೀನಿಗೆ ನೀರನ್ನು ಒದಗಿಸಿಕೊಡುವ ಪ್ರಮಾಣದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿ ಕೊಟ್ಟಿದ್ದಾರೆ. ಆದರೆ ಅಲ್ಲಿ ೩೩ ಟಿ.ಎಂ.ಸಿ.ಎಫ್.ಟಿ. ನೀರು ಲಭ್ಯವಾಗುತ್ತದೆಂದು ಹೇಳಿದ್ದಾರೆ. ಮೊದಲು ತಯಾರು ಮಾಡಿದ ಯೋಜನೆಯ ಪ್ರಕಾರ ೬ ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗುತ್ತದೆ. ಮೊದಲು ತಯಾರು ಮಾಡಿದ್ದುದು ಒಂದು ಲಕ್ಷಕ್ಕೆ ಇತ್ತು. ಎರಡನೆಯ ಸಾರಿ ತಯಾರು ಮಾಡಿದ ಯೋಜನೆ ಪ್ರಕಾರ ೨ ಲಕ್ಷ ಎಕರೆಗೆ ನೀರು ಸಿಗುತ್ತದೆ. ಮತ್ತೆ ಈಗ ತಯಾರು ಮಾಡಿದ ಯೋಜನೆ ಪ್ರಕಾರ ಐದು ಲಕ್ಷ ಎಕರೆಗೆ ನೀರು ಸಿಗುತ್ತದೆಂದು ಸರ್ಕಾರದವರು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಶಿರಾ ಕ್ಷೇತ್ರದ ಶಾಸಕರು ಕೇಳಿದಾಗ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ನೀರು ಸಾಕಷ್ಟು ಇದೆ. ಭದ್ರಾ ನದಿ ಪ್ರದೇಶಗಳಲ್ಲಿ ೯೬ ಟಿಎಂಸಿ ನೀರು ನಮಗೆ ಲಭ್ಯವಾಗುತ್ತದೆ. ಭದ್ರಾ ನದಿ ಪ್ರದೇಶದಲ್ಲಿ ೬೧ ಟಿಎಂಸಿಯಿಂದ ೯೦ ಟಿಎಂಸಿ ವರೆವಿಗೂ ನೀರು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಈ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಭಾಗದ ಜನರಿಗೆ ಹಕ್ಕು ಇದೆ. ಎಂದರೆ ಇಷ್ಟು ನೀರನ್ನು ಉಪಯೋಗಿಸಿಕೊಂಡು ಒಂದು ಯೋಜನೆಯನ್ನು ಮಾಡಿದರೆ ಸುಮಾರು ೧೩೦೦ ಕೋಟಿ ರೂಪಾಯಿಗಳ ಬಂಡವಾಳ ಬೇಕಾಗುತ್ತದೆ. ಇದರಿಂದ ೧೩ ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸುವಂತಹ ವ್ಯಾಪಕವಾದ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ. ನನಗೆ ತಿಳಿದ ಪ್ರಕಾರ ಮಂತ್ರಿಗಳಿಗೆ ಮನಸ್ಸು ಇದೆ. ಆದರೆ ಅಧಿಕಾರಿಗಳು ಈ ಬಗ್ಗೆ ಏಕೆ ಆಸಕ್ತಿ ವಹಿಸುತ್ತಿಲ್ಲ ? ಇಷ್ಟು ನೀರು ಇದ್ದು ಬರಗಾಲ ಪೀಡಿತ ಪ್ರದೇಶದ ರೈತರು ಕಷ್ಟ ಅನುಭವಿಸುತ್ತಿದ್ದಾರೆ. ಈ ಯೋಜನೆಯ ಮೂಲಕ ಶಾಶ್ವತವಾದ ಪರಿಹಾರ ಕಾಮಗಾರಿ ಯೋಜನೆಗಳನ್ನು ಮಾಡುವುದಕ್ಕೆ ಕೆಲವು ಅಧಿಕಾರಿಗಳು ಹಿಂದು ಮುಂದು ನೋಡುತ್ತಿದ್ದಾರೆ. ಈ ರೀತಿ ವಿಳಂಬಕ್ಕೆ ಮುಕ್ಕಾಲು ಭಾಗ ಅಧಿಕಾರಿಗಳೇ ಕಾರಣವೆಂದು ಈ ಸದನದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಭದ್ರ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯನ್ನು ವ್ಯಾಪಕವಾಗಿ ತೆಗೆದುಕೊಂಡರೆ ಅದು ೧೩ ಲಕ್ಷ ಎಕರೆಗೆ ನೀರನ್ನು ಒದಗಿಸುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ಈ ಎರಡು ತಾಲ್ಲೂಕುಗಳಿಗೆ ಪೂರ್ಣ ನೀರನ್ನು ಕೊಡಬಹುದು. ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಮತ್ತು ಭದ್ರಾವತಿ ತಾಲ್ಲೂಕುಗಳಿಗೆ ಈ ಯೋಜನೆಯಿಂದ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ನೀರನ್ನು ಕೊಡುವುದಕ್ಕೆ ಈ ವ್ಯಾಪಕವಾದ ಯೋಜನೆಯಿಂದ ಸಾಧ್ಯತೆ ಇದೆ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ ಇವುಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯ ಇದೆ. ಇದರಿಂದ ಕೋಲಾರ ಜಿಲ್ಲೆಯ ಗೌರೀಬಿದನೂರು ಮತ್ತು ತುಮಕೂರು ತಾಲ್ಲೂಕುಗಳಿಗೂ ನೀರನ್ನು ಕೊಡುವುದಕ್ಕೆ ಸಾಧ್ಯತೆ ಇದೆ. ಎಲ್ಲಾ ತಾಲ್ಲೂಕುಗಳಿಗೂ ನೀರನ್ನು ಒದಗಿಸುವುದಕ್ಕೆ ಈ ಯೋಜನೆಯಿಂದ ಸಾಧ್ಯವಿದೆ, ಬಹು ಅಭಾವಕ್ಕೆ ಒಳಗಾಗಿರತಕ್ಕಂತಹ ಪ್ರದೇಶಗಳಿಗೆ ಈ ಯೋಜನೆಯಿಂದ ನೀರನ್ನು ಕೊಡುವುದಕ್ಕೆ ಅವಕಾಶ ಇರುವುದರಿಂದ, ಈ ಯೋಜನೆಯನ್ನು ತೆಗೆದು ಹಾಕತಕ್ಕದ್ದು ಸರಿಯಲ್ಲ. ಮಾನ್ಯ ಮಂತ್ರಿಗಳು ಮನಸ್ಸು ಮಾಡಿ ಇದಕ್ಕೆ ೧೩ ಲಕ್ಷ ಎಕರೆಗೆ ಬೇಕಾಗುವ ವ್ಯಾಪಕವಾದ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ತುಂಗ ಮತ್ತು ಭದ್ರ ಯೋಜನೆಯನ್ನು ಕೈಗೆತ್ತಿಕೊಂಡರೆ ಧಾರವಾಡ ಜಿಲ್ಲೆಯ ೫ ತಾಲ್ಲೂಕುಗಳಿಗೆ, ಈ ವ್ಯಾಪಕವಾದ ಯೋಜನೆಯಿಂದ ಅನುಕೂಲವಾಗುತ್ತದೆ. ಇದರ ಬಗ್ಗೆ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನೇತ್ರಾವತಿ ಅಣೆಕಟ್ಟನ್ನು ಹಾಕಿ. ಇದು ನಮ್ಮ ರಾಜ್ಯದಲ್ಲಿಯೇ ಹುಟ್ಟಿ ನಮ್ಮ ರಾಜ್ಯದಲ್ಲಿಯೇ ಹರಿಯತಕ್ಕಂತಹ ನದಿ. ಮತ್ತು ನಮ್ಮ ರಾಜ್ಯದಲ್ಲಿಯೇ ಸಮುದ್ರಕ್ಕೆ ಸೇರತಕ್ಕಂತಹ ನದಿ ಇದು ನಮ್ಮ ಸ್ವಂತ ನದಿ. ಇದರ ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಯಾವ ರಾಜ್ಯದ ಅಭಿಪ್ರಾಯವನ್ನು ಕೇಳತಕ್ಕಂತಹ ಅವಶ್ಯಕತೆ ಇಲ್ಲ. ಸುಮಾರು ೨೦ ಹೊಳೆಗಳಿಂದ ೩೨೬ ಟಿ. ಎಂ. ಸಿ. ಎಸ್. ಟಿ. ನೀರು ಆ ಪ್ರದೇಶದಲ್ಲಿ ಹರಿಯುತ್ತದೆ. ಸಕಲೇಶಪುರ ತಾಲ್ಲೂಕಿನಲ್ಲಿ ಸುಮಾರು ೧೭ ಹೊಳೆಗಳು ಹರಿಯುತ್ತವೆ. ಸೋಮವಾರ ಪೇಟೆಯಲ್ಲಿ ೩ ಹೊಳೆಗಳು ಹರಿಯುತ್ತವೆ. ಈ ಎಲ್ಲಾ ಹೊಳೆಗಳಿಂದ ನಮಗೆ ನೀರು ಸಿಗುತ್ತದೆ. ಈ ಯೋಜನೆಯನ್ನು ಕೈಗೆತ್ತಿಕೊಂಡರೆ, ಸುಮಾರು ೬೫೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೆ, ಸುಮಾರು ಐದೂವರೆ ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಇದರಿಂದ ಹಾಸನ ಜಿಲ್ಲೆಯ ಅರಸೀಕೆರೆ, ತಾಲ್ಲೂಕಿಗೂ ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕುಗಳಿಗೂ ನೀರು ಸಿಗುತ್ತದೆ. ಒಂದು ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಿದರೆ ತಲಾ ೯ ಸಾವಿರ ಖರ್ಚು ಬರುತ್ತದೆ. ಇದರಲ್ಲಿ ಸ್ವಲ್ಪ ಭಾಗವನ್ನು ಲಿಫ್ಟ್ ಇರಿಗೇಷನ್ ಮಾಡಬಹುದು ಅಲ್ಲದೆ ಇದರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಕ್ಕೆ ಕೂಡ ಅವಕಾಶ ಇದೆ. ಇದರ ಬಗ್ಗೆ ನನ್ನ ಹತ್ತಿರ ಸಾಕಷ್ಟು ಮಾಹಿತಿ ಕೂಡ ಇದೆ. ಮಾನ್ಯ ಮಂತ್ರಿಯವರಿಗೆ ಅದನ್ನು ಕಳುಹಿಸಿಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿ ವಿಚಾರ

ದಲ್ಲಿ ಕಳೆದ ೨೮ ವರ್ಷಗಳಿಂದಲೂ ಸಾಕಷ್ಟು ಗಮನ ಹರಿಸಿಲ್ಲ. ಅನೇಕ ಹಿರಿಯ ರಾಜಕಾರಣಿಗಳು, ಶಾಸನಸಭಾ ಸದಸ್ಯರು, ಲೋಕಸಭಾ ಸದಸ್ಯರುಗಳು ಎಲ್ಲರೂ ಅದಕ್ಕಾಗಿ ಒಂದು ಏರ್ಪಾಡನ್ನು ಮಾಡಿಕೊಂಡು, ಅನೇಕ ಜನ ಇಂಜಿನಿಯರುಗಳು ಸೇರಿ ಯೋಜನೆಯೊಂದನ್ನು ತಯಾರು ಮಾಡಿದ್ದಾರೆ. ಅದರ ಪ್ರಕಾರ ನಾನು ಹೇಳುತ್ತಿದ್ದೇನೆ. ಸರ್ಕಾರದವರು ೩,೨೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವ್ಯಾಪಕವಾದ ೭ ಯೋಜನೆಗಳಲ್ಲಿ ಎಂದರೆ ಅಪ್ಪರ ಭದ್ರಾ ತುಂಗಾಭದ್ರಾ, ಹಿಪ್ಪರಗಿ ಮತ್ತು ನೇತ್ರಾವತಿ, ಅಘನಾಶಿನಿ ಬೇಡ್ತಿ ಮತ್ತು ಮಹಾದಾಯಿ ಇಷ್ಟು ಯೋಜನೆಗಳನ್ನು ಎತ್ತಿಕೊಂಡರೆ ಈ ರಾಜ್ಯದಲ್ಲಿ ೬೩.೫೦ ಲಕ್ಷ ಎಕರೆ ಜಮೀನನ್ನು ನಾವು ನೀರಾವರಿಗೆ ಒಳಪಡಿಸಬಹುದು. ಇದರಿಂದ ೬೩ ಪರ್ಸೆಂಟ್ ರಾಜ್ಯದ ನೀರಾವರಿ ಅಭಿವೃದ್ಧಿಯನ್ನು ಹೆಚ್ಚಿಸಿದಂತಾಗುತ್ತದೆ. ಸಮಗ್ರವಾಗಿ, ರೈತರ ಹಿತ, ಈ ನೀರಾವರಿ ಯೋಜನೆಯಲ್ಲಿ ಅಡಗಿರುವುದರಿಂದ ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಸರ್ಕಾರ ವಹಿಸಬೇಕು. ಸರ್ಕಾರದವರು ಸಣ್ಣಪುಟ್ಟ ಕಾರ್ಯಕ್ರಮಗಳಿಗಾಗಿ, ಯೋಜನೇತರದ ವೆಚ್ಚಗಳಿಗಾಗಿ ಜಾಸ್ತಿ ಖರ್ಚು ಮಾಡುವುದಾದರೆ ಅದರಿಂದ ಯಾವ ಪ್ರಗತಿಯೂ ಆಗುವುದಿಲ್ಲ, ಉತ್ಪಾದನೆಯೂ ಕೂಡ ಆಗುವುದಿಲ್ಲ. ಯೋಜನೇತರದ ವೆಚ್ಚಗಳಾದ ಕಾರ್ಯಕ್ರಮದಲ್ಲಿ ಸೀರೆ ಕೊಟ್ಟರೆ ಏನೂ ಉತ್ಪಾದನೆ ಆಗುವುದಿಲ್ಲ. ತಾಳಿ ಕೊಡುವ ಕಾರ್ಯಕ್ರಮವೂ ಕೂಡ ಈ ದೇಶದ ಸಾರ್ವಭೌಮ ಪ್ರಜೆಯ ಆತ್ಮ ಸಾಕ್ಷಿಗೆ ಮತ್ತು ಅವನ ವ್ಯಕ್ತಿತ್ವಕ್ಕೆ ಸರಿಯಾದುದಲ್ಲ. ಇಂತಹ ಕಾರ್ಯಕ್ರಮಗಳಿಗೆ ಇನ್ನು ಹೆಚ್ಚು ಗಮನ ಕೊಡುವುದು ಬೇಡ, ಸಾಮಾನ್ಯ ಜನರ ಮುಖಕ್ಕೆ ತುಪ್ಪ ಸವರಿ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಯಾವ ಭಾಗದ ಜನ ಬರಗಾಲಕ್ಕೆ ತುತ್ತಾಗಿದ್ದಾರೆ ಆ ಭಾಗದ ಜನರಿಗೆ ಕುಡಿಯುವ ನೀರು ಕೂಡಾ ಇಲ್ಲದಿರತಕ್ಕಂಥ ಪರಿಸ್ಥಿತಿ ಇದೆ. ಆ ಭಾಗದ ಜನರಿಗೆ ಸಮಗ್ರವಾದ ನೀರಾವರಿ ಯೋಜನೆಯ ಬಗ್ಗೆ ಆದ್ಯತೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

† ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ೪೪,೪೬,೩೪ ಹಾಗೂ ೩೫ ಈ ಬೇಡಿಕೆಗಳ ಬಗ್ಗೆ ಮಾನ್ಯ ದೇವೇಗೌಡರು ಈ ವರ್ಷದ ಖರ್ಚುವೆಚ್ಚಕ್ಕಾಗಿ ಸಭೆಯ ಮಂಜೂರಾತಿಯನ್ನು ಕೇಳಿದ್ದಾರೆ. ಮಾನ್ಯ ದೇವೇಗೌಡರು ೧೯೮೩ ರಲ್ಲಿಯೂ ಲೋಕೋಪಯೋಗಿ ಮಂತ್ರಿಗಳಾಗಿದ್ದರು. ನಾನು ಈಗ ಮೊದಲು ರಸ್ತೆಗಳ ಬಗ್ಗೆ ಮಾತನಾಡುತ್ತೇನೆ. ಎರಡನೆಯದಾಗಿ ಇರಿಗೇಷನ್ ಪೊಟೆನ್ಷಿಯಾಲಿಟಿ ಬಗ್ಗೆ ಮಾತನಾಡುತ್ತೇನೆ. ಎನ್.ಆರ್.ಇ.ಪಿ. ಹಾಗೂ ಆರ್.ಎಲ್.ಇ.ಜಿ.ಪಿ. ಹಾಗೂ ಹರಿಜನ್‌ವಾಡಿ ರಸ್ತೆ, ಈ ರೀತಿ ರಸ್ತೆಗಳನ್ನು ಮಾಡಿರುವ ಬಗ್ಗೆ ೧೯೮೪–೮೫ನೇ ವರ್ಷದ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ನಾನು ಇದನ್ನು ಮೇಲ್ನೋಟಕ್ಕೆ ನೋಡಿದಾಗ ಕಂಡದ್ದು ಸುಮಾರು ೨೭,೦೨೭ ಹಳ್ಳಿಗಳು ನಮ್ಮ ರಾಜ್ಯದಲ್ಲಿ ೧೯೮೧ರ ಜನಗಣತಿ ಪ್ರಕಾರ ಇವೆ ಎಂದು, ಅವುಗಳ ಪೈಕಿ ೩೧ ಪರ್ಸೆಂಟ್ ಹಳ್ಳಿಗಳಿಗೆ ರಸ್ತೆಗಳು ಇವೆ ಎಂಬುದಾಗಿ ಅದರಲ್ಲಿ ತಿಳಿಸಿದ್ದಾರೆ. ಇನ್ನೂ ಕೆಲವು ಹಳ್ಳಿಗಳಿಗೆ, ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಮಿನಿಮಂ ನೀಡ್ಸ್ ಪ್ರೋಗ್ರಾಂ, ಹರಿಜನ್ ವಾಡಿ ರೋಡ್, ಷುಗರ್ ಫ್ಯಾಕ್ಟರೀಸ್ ರೋಡ್ ಈ ಪ್ರಕಾರ ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇದನ್ನೆಲ್ಲಾ ಬೇರೆ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ ಇವುಗಳಿಗೆ ಹೋಲಿಸಿ ನೋಡಿದಾಗ ಸರ್ವಸಾಮಾನ್ಯವಾಗಿ ರಸ್ತೆಗಳ ಪರಿಸ್ಥಿತಿ ಎಲ್ಲಾಕಡೆ ಇದೇ ರೀತಿ ಇದೆ ಎನ್ನುವುದು ಕಂಡುಬರುತ್ತದೆ. ಅನೇಕ ಮಾನ್ಯ ಸದಸ್ಯರೂ ಆ ಒಂದು ಅನುಭವವನ್ನು ಈಗಾಗಲೇ ಹೇಳಿದ್ದಾರೆ. ಈ ರಾಜ್ಯದ ಯಾವ ಮೂಲೆಗೆ ಹೋದರೂ ಸಹ, ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಮಾಡಿರತಕ್ಕಂತಹ ರಸ್ತೆಗಳು ಬಹಳಷ್ಟು ಕೆಟ್ಟು ಹೋಗಿವೆ. ಈ ವಿಚಾರವನ್ನು ಮೊನ್ನೆ ಆ ಭಾಗಕ್ಕೆ ಬಂದಂತಹ ಶ್ರೀಮಾನ್ ದೇವೇಗೌಡರೇ ಹೇಳಿದ್ದಾರೆ. ಮಾನ್ಯ ಶ್ರೀ ರಾಚಯ್ಯನವರು ಇಲ್ಲಿಲ್ಲ. ಅವರು ಕೂಡ ಮೊನ್ನೆ ಆ ಭಾಗಕ್ಕೆ ಬಂದಿದ್ದಾಗ ರಸ್ತೆಯಲ್ಲಿ ಹೋಗುವಾಗ ಏತಕ್ಕಾದರೂ ಇಲ್ಲಿಗೆ ಬಂದೆನಪ್ಪ ಎಂಬುದಾಗಿ ಹೇಳುತ್ತಿದ್ದರು. ಅಷ್ಟೊಂದು ರಸ್ತೆಗಳು ಕೆಟ್ಟುಹೋಗಿವೆ. ರಸ್ತೆಗಳು ಅಭಿವೃದ್ಧಿಯಾಗಬೇಕು. ಆದಕ್ಕಾಗಿಯೇ ೧೯೭೮ನೇ ಇಸವಿಯಲ್ಲಿ, ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಮಾಡಿ ೧೯೮೫ನೇ ಇಸವಿಯವರೆಗೂ ಒಟ್ಟು ೪೮೦ ಕೋಟಿ ರೂಪಾಯಿಗಳನ್ನು ಆ ಭಾಗದ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂಬ ಉದ್ದೇಶವಿತ್ತು. ಆ ರೀತಿ ಮಾಡಿದಾಗ ಮಾತ್ರ ಈ ರಾಜ್ಯದಲ್ಲಿರುವ ಎಲ್ಲಾ ಭಾಗದ ರಸ್ತೆಗಳೂ ಒಂದೇ ರೀತಿಯವುಗಳಾಗುತ್ತವೆ ಎಂಬುದು ನಮ್ಮ ನಿರ್ಣಯ. ಆ ಪ್ರಕಾರ ತಾವು ಕೊಟ್ಟಿರುವಂತಹ ಅಂಕಿ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಂಖ್ಯೆಗಳನ್ನು ನೋಡಿದಾಗ ೧೯೮೦ ರಿಂದ ೧೯೮೫ ರವರೆಗೆ ೫.೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಪ್ರಕಾರ ಹಣವನ್ನು ಕೊಡುತ್ತಾ ಹೋದರೆ ಈ ಕೆಲಸಗಳನ್ನು ಮಾಡುವುದಕ್ಕೆ ಸುಮಾರು ೯೮೦ ವರ್ಷಗಳೇ ಬೇಕಾಗುತ್ತವೆಯೋ ಏನೋ ? ಎಂದರೆ ಈ ರಾಜ್ಯದಲ್ಲಿ ಎಲ್ಲಾ ಭಾಗದ ರಸ್ತೆಗಳು ಆಲ್ ಸೀಜನ್ ಅಂಡ್ ಆಲ್ ವೆದರ್ ರಸ್ತೆಗಳು ಆಗಬೇಕಾದರೆ ೯೮೦ ವರ್ಷಗಳವರೆಗೆ ಕಾಯಬೇಕಾಗುತ್ತದೆ. ಅಲ್ಲಿಯವರೆಗೆ ಯಾರು ಇರುತ್ತಾರೋ ಯಾರು ಹೋಗುತ್ತಾರೋ ? ಅಲ್ಲಿಯವರೆಗೆ ಎಷ್ಟು ಜನ ಶಾಸಕರಾಗಿ ಬರುತ್ತಾರೋ, ಹೋಗುತ್ತಾರೋ ? ೧೯೭೮ರಲ್ಲಿ ಪ್ರಾರಂಭ ವಾದಂತಹ ಯೋಜನೆ ಇದು. ನಂತರ ೧೯೮೩ರ ತಾವು ಬಂದಿದ್ದೀರಿ. ಆದರಲ್ಲೂ ಮಾನ್ಯ ದೇವೇ ಗೌಡರು ಸ್ವತಃ ಇಂಜನೀಯರ್ ಆಗಿದ್ದಾರೆ. ನಮ್ಮ ಭಾಗದ ರಸ್ತೆಗಳ ಬಗ್ಗೆ ಅಥವಾ ಆ ಭಾಗದ ಅಭಿವೃದ್ಧಿಯ ಬಗ್ಗೆ ತಮಗೆ ಅತ್ಯಂತ ಕಳಕಳಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ೧೯೮೪-೮೫ನೇ ಸಾಲಿನಲ್ಲೂ ಇದರ ಬಗ್ಗೆ ಇದೇ ಸದನದಲ್ಲಿ ಹೇಳಿದ್ದೇನೆ. ನಾನು ಶಾಸಕನಾಗಿ ಬಂದ ನಂತರವೂ ಈ ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಹೇಳಿದಾಗ ಹೈದರಾಬಾದ್ ಕರ್ನಾಟಕವಾಗಲೀ, ಕರ್ನಾಟಕ ಯಾವುದೇ ಒಂದು ಭಾಗವಾದರೂ ಒಂದೇ ದೃಷ್ಟಿಕೋನದಿಂದ ನೋಡುತ್ತೇನೆಂದು ತಾವು ಹೇಳಿದ್ದೀರಿ. ಆದರೆ ಆ ಭಾಗದ ರಸ್ತೆಗಳು ಎಂದರೆ ಬೀದರ್ ಆಗಲಿ, ರಾಯಚೂರು ಗುಲ್ಬರ್ಗ ಹಾಗೂ ಬಳ್ಳಾರಿ ಹಾಗೂ ಬಿಜಾಪುರ ಇಲ್ಲಿಗೆ ತಾವು, ದಯಮಾಡಿ ಬರಬೇಕು. ನನಗೆ ತಾವು ಇನ್ವಿಟೇಷನ್ ಕೊಟ್ಟರೆ ನಾನೂ ನಿಮ್ಮ ಜೊತೆಯಲ್ಲಿ ಬರುತ್ತೇನೆ. ನಿಮ್ಮ ಅಧಿಕಾರಿಗಳು ಎಷ್ಟು. ಕಿಲೋಮೀಟರ್ ರಸ್ತೆಯನ್ನು ಬಿ. ಟಿ. ರೋಡ್ ಮಾಡಿದ್ದಾರೆಂದರೆ ೧೫೦೦ ಕಿಲೋಮೀಟರ್ ಬಿ.ಟಿ. ರಸ್ತೆಯನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ೧೯೮೪ರಲ್ಲಿ ಗುಲ್ಬರ್ಗ ರಾಯಚೂರು ಮಧ್ಯೆ ಬರತಕ್ಕಂತಹ ಧರಂಪುರ ರಸ್ತೆಯನ್ನು ನನ್ನ ಒತ್ತಾಯದ ಮೇಲೆಗೆ ಪ್ರಾರಂಭ ಮಾಡಿದರು. ಅದು ೧೩ ಕಿಲೋಮೀಟರ್ ರಸ್ತೆ. ಅದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ ಜೂನ್ ತಿಂಗಳಲ್ಲಿ ಮಳೆ ಬಂದಾಗ ಆ ರಸ್ತೆಯೇ ಇಲ್ಲ. ಆಗಶ್ರೀಮಾನ್ ರುದ್ರಯ್ಯನವರು ಚೀಫ್ ಇಂಜನೀಯರ್ ಆಗಿದ್ದರು. ಅವರಿಗೆ ನಾನು ಇದನ್ನು ವಿಚಾರ ಮಾಡಿ ಎಂದು ಹೇಳಿದ್ದೆ. ಅಲ್ಲಿ ಬ್ಲಾಕ್‌ಕಾಟನ್ ಸಾಯಿಲ್ ಇದೆ. ಆದರಲ್ಲೂ ಸಿಮೆಂಟ್ ಕಾರ್ಖಾನೆಗಳು ಇರುವಂತಹ ಏರಿಯಾ ಅದು. ACC, Shahabad, Wadi, Kurkunta, Malkhedis, It is a cement insdustrial belt. ಕೃಷ್ಣ ಮೇಲ್ದಂಡೆ ಯೋಜನೆಗೆ ಬೇಕಾದಂತಹ ಸಿಮೆಂಟ್ ಈ ರಸ್ತೆಯ ಮೇಲೆ ಹೋಗುತ್ತದೆ. ಸಾವಿರಾರು ಲಾರಿಗಳು ಈ ರಸ್ತೆಯ ಮೇಲೆ ಓಡಾಡುತ್ತವೆ. ಮೊದಲು ಒಂದು ಲಾರಿಯಲ್ಲಿ ೭ ಟನ್ ಲೋಡ್ ಅನ್ನು ಹಾಕಿಕೊಂಡು ರಸ್ತೆಯ ಮೇಲೆ ಹೋಗುತ್ತಿದ್ದರು, ಈಗ ೧೨ರಿಂದ ೧೪ ಟನ್‌ಗಳವರೆಗೆ ಲೋಡನ್ನು ಹಾಕಿಕೊಂಡು ರಸ್ತೆಯ ಮೇಲೆ ಲಾರಿಗಳವರು ಹೋಗುತ್ತಿರುತ್ತಾರೆ. ೧೯೫೨ನೇ ಇಸವಿಯಲ್ಲಿ ಒಂದು ಕಿಲೋಮೀಟರ್ ರಸ್ತೆಗೆ ೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದರು. ೧೯೮೬ನೇ ಇಸವಿಯಲ್ಲೂ ಅದೇ ರೀತಿ ಒಂದು ಕಿಲೋಮೀಟರ್ ರಸ್ತೆಗೆ ೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದರೆ, ಆ ರಸ್ತೆಗಳು ನಿಲ್ಲುವುದಿಲ್ಲ. You should go for certain not plan and estimats. ತಂತ್ರಜ್ಞರು ಇದ್ದಾರೆ. ಅವರಿಗೆ ಸಾವಿರಾರು ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. We are spending thousands together on them. Let them make a plan and let them go physically to see what sort of soil it is. What we are spending on the roads it will not lash for one year. Nobody has thought about it. This is the third session I am addressing on the same subieet. ಕರ್ನಾಟಕ ರಾಜ್ಯದಲ್ಲಿರುವ ಬೇರೆ ಯಾವ ಭಾಗದಲ್ಲಿಯೂ ಈ ಒಂದು ತೊಂದರೆ ಇಲ್ಲ. Our people are cursing you...............ತಾವು ದಯಮಾಡಿ ನೋಡಿ. ನಮ್ಮ ಭಾಗದಲ್ಲಿ ಒಂದೊಂದೇ ಕಿಲೋಮೀಟರ್ ರಸ್ತೆಯನ್ನು ಮಾಡಿ ಎಂಬುದಾಗಿ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಆದರೆ ರಸ್ತೆಯನ್ನು ಮಾಡಬೇಕೆಂದು ಹಣವನ್ನೇ ಖರ್ಚು ಮಾಡುವುದಾದರೆ, ಈ ಸಾಲಿನಲ್ಲಿ ಮಾಡಿದಂತಹ ರಸ್ತೆ ಮುಂದೆ ಇರುವುದೇ ಇಲ್ಲ. ಇದಕ್ಕಾಗಿ ಸುಮ್ಮನೆ ೧೦ ಕೋಟಿ, ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಎ.ಸಿ.ಸಿ. ಯವರು ಹಾಗೂ ಬಿರ್ಲಾ ಪ್ಲಾಂಟ್ಸ್‌ರವರು ತಮಗೆ ಬೇಕಾದ ರಸ್ತೆಗಳನ್ನು ಮಾಡುವಾಗ ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಾರೆ. ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವಂತಹ ಇಂಜನೀಯರ್ಸ್-ಬೇಕು. ನಮ್ಮಲ್ಲಿರತಕ್ಕಂತಹ ಇಂಜನೀಯರ್ಸ್‌ಗಳು ಪಿ.ಡಬ್ಲ್ಯು.ಡಿ.ಗೆ ಅಥವಾ ರೆಗ್ಯೂಲರ್ ಡಿವಿಜನ್‌ಗೆ ಹೋಗುವುದಕ್ಕೆ ಕಾಂಪಿಟೇಷನ್ ಮಾಡು

ತ್ತಾರಂತೆ. ಅದು ಏನು ವಿಚಾರವೋ ನನಗೆ ಗೊತ್ತಿಲ್ಲ. ಇವರು ಇರಿಗೇಷನ್ ಬೇಡ ಎಂದು ಹೇಳುತ್ತಾರೆ. ಮೈನರ್ ಇರಿಗೇಷನ್ ಬೇಡ ಎಂದು ಹೇಳುತ್ತಾರೆ. ತಾಲ್ಲೂಕು ಕೇಂದ್ರದಲ್ಲಿ ಲೋಕೋಪಯೋಗಿ ಇಲಾಖೆಯ ರೆಗ್ಯೂಲರ್ ಸಬ್ ಡಿವಿಜನ್‌ನಲ್ಲಿ ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜಿನೀಯರ್ ಆಗಿ ಹೋಗುವುದಕ್ಕೆ ಇವರುಗಳು ತಯಾರಿದ್ದಾರೆ. ಆದರಿಂದ ಏನು ಎಂಬುದು ನನಗೆ ತಿಳಿಯುವುದಿಲ್ಲ. ಅಲ್ಲಿ ತಿನ್ನುವುದಕ್ಕೆ ಬಹಳ ಚಾನ್ಸ್ ಇದೆ ಎಂದು ಕೆಲವರು ಹೇಳುತ್ತಾರೆ. ಬಿ.ಟಿ. ರೋಡುಗಳಿಗೆ ೨ ಲಕ್ಷದವರೆಗೆ ಹಣವನ್ನು ಖರ್ಚು ಮಾಡಬೇಕು. You will not find B.T roads in Gulbarga or some part of Bellary, or Raichur. ತಾವು ಈ ಬಗ್ಗೆ ಹೋದಸಾರಿಯೂ ಹೇಳಿದ್ದೀರಿ. ನನಗೆ ತಿಳಿದ ಹಾಗೆ ಯಾವುದೇ ಒಂದು ಹಣಕಾಸಿನ ವರ್ಷದಲ್ಲಿ ಮುಕ್ಕಾಲು ಭಾಗದ ಹಣ ಖರ್ಚಾಗುವುದು ವರ್ಷದ ಕೊನೆಯ ಮೂರು ತಿಂಗಳಲ್ಲಿ. ೫–೬ ತಿಂಗಳ ಅವಧಿಯಲ್ಲಿ ಬಜೆಟ್ಟಿನಲ್ಲಿ ಏನೇನೂ ಇರುವುದಿಲ್ಲ. ಹಣ ಹಂತ ಹಂತವಾಗಿ ಖರ್ಚಾಗಬೇಕೆನು ತಾವು ವಿಚಾರ ಮಾಡಿದ್ದೀರಿ. ಈ ವರ್ಷದಲ್ಲಿ ಸಾವಿರ ರೂಪಾಯಿಗಳು ಖರ್ಚಾಗಬೇಕೆಂದರೆ ಇದುವರೆಗೆ ೨೫೦ ರೂಪಾಯಿಗಳಾದರೂ ಖರ್ಚಾಗಿರಬೇಕು. ಈ ರೀತಿ ವ್ಯವಸ್ಥೆ ಇರಬೇಕೆಂಬುದು ನನ್ನ ಅಭಿಪ್ರಾಯ. ಆಯವ್ಯಯದಲ್ಲಿ ಇಂತಿಷ್ಟು ಖರ್ಚು ಮಾಡಬೇಕೆಂಬ ಗುರಿ ಇರಬೇಕು. ಆರ್.ಸಿ. ರೋಡ್, ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ., ಮೇಜರ್ ರೋಡ್, ಸ್ಟೇಟ್ ರೋಡ್, ಬಿ.ಟಿ. ರೋಡ್ ಇವುಗಳಿಗೆಲ್ಲಾ ಇಂತಿಷ್ಟು ಹಣ ಎಂದು ಬಜೆಟ್‌ನಲ್ಲಿರುತ್ತದೆ. ಅದರ ಅನ್ವಯ ಇಂಜಿನಿಯರ್‌ಗಳು ಬಿಲ್‌ಗಳನ್ನು ಸಬ್‌ಮಿಟ್ ಮಾಡುತ್ತಾರೆ, ಅವು ಪಾಸೂ ಆಗುತ್ತವೆ. ಗುಲ್ಬರ್ಗ–ರಾಯಚೂರು ನಡುವೆ ಯಾರೊ ಶಹಾಬಾದ್–ವಾಡಿ ರಸ್ತೆಗೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ೬೦–೭೦ ಸಾವಿರ ರೂಪಾಯಿಗಳ ಬಿಲ್ ಮಾಡಿ ಕಳುಹಿಸಿ ಅದು ಪಾಸು ಕೂಡ ಆಗಿರಬಹುದು. ಆದರೆ ಇವೊತ್ತು ಆ ರಸ್ತೆಯನ್ನು ಹೋಗಿ ನೋಡಿ. ಇಂದು ಅಲ್ಲಿ ಯಾರೂ ಕೆಲಸ ಮಾಡುವವರು ಇಲ್ಲ. ಮಣ್ಣು–ಕಲ್ಲು ಹಾಕುವುದು ರಿಪೋರ್ಟ್, ಕಳುಹಿಸುವುದು, ಬಿಲ್ ಪಾಸ್ ಮಾಡಿಸಿಕೊಳ್ಳುವುದು. ಹೋದಸಾರಿ ನಾವು ರಿಪೇರಿ ಮಾಡಿದ್ದೆವು, ಈ ಸಾರಿ ಮಳೆ ಬಂದು ಎಲ್ಲಾ ಹಾಳಾಗಿ ಹೋಗಿದೆ ಎಂದು ಹೇಳುವುದು. ಬಿ.ಟಿ.ರಸ್ತೆಗಳನ್ನು ಹೋಗಿ ನೀವು ಪರಿಶೀಲನೆ ಮಾಡಿ ನೋಡಿ ಗೊತ್ತಾಗುತ್ತದೆ. ಡಾಮರ್ ರಸ್ತೆಗಳನ್ನೇ ಮಾಡದೆ ಬರೀ ಮಣ್ಣು ಕಲ್ಲು ಹಾಕಿದ ರಸ್ತೆಗಳನ್ನು ಹೇಗೆ ಹಾಳಾಗಿ ಹೋಯಿತು ಎಂದು ಕೇಳುವುದಕ್ಕೆ ಬರುತ್ತದೆ ? ರಸ್ತೆಗೆ ಮಣ್ಣು ಹಾಕಿದ್ದು ಮಳೆ ಬಂದಾಗ ಕೊಚ್ಚಿಕೊಂಡು ಹೋದರೆ ಮತ್ತೊಂದು ಮಳೆ ಬರುವ ಹೊತ್ತಿಗೆ ಮೆಯಿಂಟೆನೆನ್ಸ್ ಅಮೌಂಟ್ ಹಾಕೋಣವೆಂದು ಹಾಕಿ ಬಿಲ್ ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿ ಬಿ.ಟಿ. ರಸ್ತೆಗಳಿಗೆ ಪ್ರೊಪೋಸಲ್ ಕಳುಹಿಸಿದರೆ ಯಾರೂ ಗಮನ ಹರಿಸಿಲ್ಲ. ಜಿಲ್ಲೆಯ ರಸ್ತೆಗಳನ್ನು ಡಾಮರ್ ರಸ್ತೆಗಳನ್ನಾಗಿ ಮಾಡಿ ಎಂದು ನಾವಾಗಿ ಒತ್ತಾಯ ಮಾಡಿದಾಗ ಮಾತ್ರ ಅವರು ಸರ್ಕಾರಕ್ಕೆ ಪ್ರೊಪೋಸಲ್ ಕಳುಹಿಸುತ್ತಾರೆ. ಸ್ಥಳೀಯ ಶಾಸಕರು ಕೇಳುವವರೆಗೆ ಮಾಡುವುದಿಲ್ಲ. ತಾವಾಗಿ ಅಂತೂ ಕಳುಹಿಸುವುದಿಲ್ಲ. ಈ ಒಂದು ಪರಿಸ್ಥಿತಿಯನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

ಇನ್ನು ಕರಪ್ಷನ್ ಬಗ್ಗೆ ಎಲ್ಲರೂ ಏನು ಹೇಳುತ್ತಿದ್ದಾರೆ ಅದು ಎಲ್ಲಾ ಕಡೆಯೂ ಇದೆ. ತಮ್ಮ ಕಣ್ಮುಂದೆ ಮಾಡದಿರಬಹುದು, ಹಿಂದುಗಡೆ ಬೇಕಾದಷ್ಟು ನಡೆಯುತ್ತದೆ. ಅದಕ್ಕೆ ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ ಎಂಬ ವಿವರಗಳಿಗೆಲ್ಲ ನಾನು ಈಗ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಕರಪ್ಷನ್ ಅಂತೂ ಇದ್ದೇ ಇದೆ. ನಾನು ಶಹಬಾದ್ ಮತ್ತು ಸಣ್ಣೂರು ರೈಲ್ವೆ ಕ್ರಾಸ್ ಪ್ರಾಜೆಕ್ಟ್ ಬಗ್ಗೆ ಈ ಸದನದಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ೮೭ ಲಕ್ಷ ರೂಪಾಯಿಗಳ ಬಜೆಟ್ ಇದೆ. ೧೯೭೭–೭೮ರಿಂದ ಲೋಕೋಪಯೋಗಿ ಇಲಾಖೆಯವರು ಬಜೆಟ್ಟನ್ನು ಇಟ್ಟಿದ್ದಾರೆ. ಅಲ್ಲಿ ಸುಮಾರು ೭೦–೮೦ ಜನ ರೈಲ್ವೆ ಆಕ್ಸಿಡೆಂಟ್ ಆಗಿ ತೀರಿಕೊಂಡಿದ್ದಾರೆ. ಅಲ್ಲಿ ಒಂದು ಸಣ್ಣ ಪ್ರಾಜೆಕ್ಟ್ ಕಟ್ಟಬೇಕೆಂದು ಇದೆ. ಅಲ್ಲಿಗೆ ಮುಖ್ಯ ಮಂತ್ರಿಗಳು ಭೇಟಿ ನೀಡಿ ಪರಿಶೀಲಿಸಿದ್ದರೂ ಆ ಕೆಲಸ ಇಷ್ಟು ವಿಳಂಬವಾಗಿದೆ. ಯಾವುದೇ ರಾಜಕೀಯ ಶಿಫಾರಸ್ಸು ಇಲ್ಲದೆ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಪತ್ರ ಬರೆದರೂ ಪ್ರಯೋಜನವಾಗಿಲ್ಲ. ಆಗ ರೈಲ್ವೆ ಮಂತ್ರಿಗಳಾಗಿ ಶ್ರೀ ಜಾಫರ್ ಷರೀಫ್ ಇದ್ದರು. ಆ ಬಗ್ಗೆ ಯಾರೂ ಗಮನ ಕೊಡಲಿಲ್ಲ. ಅಲ್ಲಿ ನೂರಾರು ಜನ ಅಪಘಾತಕ್ಕೀಡಾಗಿ ಮಡಿದಿದ್ದಾರೆ, ಕೆಲಸಕ್ಕೆ ಹೋಗುವ ಜನ ಒಂದೊಂದು ತಾಸು ನಿಲ್ಲುವ ಪರಿಸ್ಥಿತಿ ಇದೆ. ೬೦ ಸಾವಿರ ಜನಸಂಖ್ಯೆ ಇರುವ ಊರಿನಲ್ಲಿ ಒಂದು ಓವರ್ ಹೆಡ್ ಬ್ರಿಡ್ಜನ್ನು ೮ ವರ್ಷವಾದರೂ ಮಾಡಲು ಕೇರ್ ಮಾಡಿಲ್ಲ. ಯಾರೋ ಕೆಲವು ಮಂದಿ ಅಧಿಕಾರಿಗಳು ಬಂದು ಪರಿಶೀಲನೆ ಮಾಡಿಕೊಂಡು ಹೋಗಿದ್ದಾರೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಈ ಬಗ್ಗೆ ನಾವು ಆಗಾಗ್ಗೆ ಒತ್ತಾಯ ಮಾಡತಕ್ಕ ಅಗತ್ಯವಿಲ್ಲ. ಇಲಾಖೆ

ಯವರು ಮಾಡುತ್ತೇವೆಂದು ಒಪ್ಪಿಕೊಂಡಮೇಲೆ ಅದನ್ನು ಮಾಡಿ ಮುಗಿಸಬೇಕು. ಅದು ಇಲಾಖೆಯವರ ಆದ್ಯ ಕರ್ತವ್ಯವಾಗಿರುತ್ತದೆ. ಒಂದು ಕೆಲಸ ಆಗಬೇಕಾದರೆ, ಆ ಕೆಲಸ ಆಯಿತೆ ಎಂದು ಕೇಳಲು ತಿರುಗಿ ತಿರುಗಿ ೧೦ ಜೊತೆ ಚಪ್ಪಲಿ ಹರಿಯಬೇಕಾಗಿದೆ. ಇಂಥ ಸಮಸ್ಯೆಗಳು ನಮ್ಮಲ್ಲಿ ಬಹಳವಾಗಿ ಇವೆ. ತಾವು ಪ್ಲಾನ್ ಮಾಡುವಾಗ ಇವನ್ನೆಲ್ಲಾ ವಿಚಾರ ಮಾಡಿ ಮಾಡಬೇಕು. ಹೋದ ವರ್ಷ ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದಿರಿ. ಆದರೆ ಇವತ್ತಿನವರೆಗೆ ಆ ಕೆಲಸ ಆಗಿಲ್ಲ.

ಅಧ್ಯಕ್ಷರು.—ತಾವು ಬೇಗ ಮುಗಿಸಿ, ವೇಳೆ ಆಯಿತು.

ಶ್ರೀ ಕೆ. ಬಿ. ಶಾಣಪ್ಪ.—ನಾನು ನಾಲ್ಕು ಜನರ ಪರವಾಗಿ ಮಾತನಾಡುತ್ತಿದ್ದೇನೆ. ಆದ್ದರಿಂದ ಇನ್ನು ೫ ನಿಮಿಷ ಮಾತನಾಡುತ್ತೇನೆ. ಈ ಬಗ್ಗೆ ನನ್ನ ಕಳಕಳಿಯ ವಿನಂತಿ ಏನೆಂದರೆ, ಯಾವ ಯಾವ ಭಾಗಗಳಲ್ಲಿ ಕೆಲಸಗಳು ಆಗಬೇಕೆಂಬುದರ ಬಗ್ಗೆ ವರದಿ ತರಿಸಿ ಕೊಂಡು ಒಂದು ಯೋಜನೆಯನ್ನು ತಯಾರು ಮಾಡಿ. ನಮ್ಮ ಗುಲ್ಬರ್ಗ ಜಿಲ್ಲೆ ಮತ್ತು ಪ್ರತಿಯೊಂದು ಜಿಲ್ಲೆಯ ಕ್ಷೇತ್ರಗಳಲ್ಲಿ ರತಕ್ಕ ರಸ್ತೆಗಳು ಆಗಬೇಕಾದರೆ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳ ಹಣ ಬೇಕು. ಈ ಬಗ್ಗೆ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ನಾವು ಕುಳಿತು ವಿಚಾರ ಮಾಡಿದ್ದೇವೆ. ಈ ಪ್ರಕಾರ ಒಂದೊಂದು ಕೋಟಿ ರೂಪಾಯಿಗಳು ಬೇಕಾಗಿರುವಾಗ ತಾವು ಬಡ್ಜೆಟ್ಟಿನಲ್ಲಿ ಇಟ್ಟಿರುವುದನ್ನು ನೋಡಿದರೆ ಅದು ಏನೇನೂ ಸಾಲದು. ಈ ಪರಿಸ್ಥಿತಿಯಲ್ಲಿ ಪ್ರತಿಯೊಂದು ಹಳ್ಳಿಗೂ ಕನೆಕ್ಷನ್ ರಸ್ತೆಗಳನ್ನಾದರೂ ಮಾಡಿ ಕೊಡಬೇಕೆಂದು ಹೇಳುತ್ತೇನೆ ಆಲ್ ವೆದರ್ ರೋಡ್ ಎಂದು ಮಾಡಿದ್ದೀರಿ. ಆ ಬಗ್ಗೆ ಹೋದ ಜುಲೈ ತಿಂಗಳಲ್ಲಿ ರೈತರು ದೊಡ್ಡ ಹೋರಾಟವನ್ನೇ ಮಾಡಿದರು. ಕುಳಗ ಹೆರೂರು ಬಿ. ಎಂಬ ಹಳ್ಳಿಗೆ ಕಳೆದ ೩೫ ವರ್ಷಗಳಿಂದ ಕನೆಕ್ಷನ್ ರಸ್ತೆ ಇಲ್ಲ. ಅಲ್ಲಿ ಸುಮಾರು ೪ ಸಾವಿರ ಜನಸಂಖ್ಯೆ ಇದೆ. ಅಲ್ಲಿನ ರೈತರು ಬಂದು ಅಲ್ಲಿ ಚಲಿಸತಕ್ಕ ವಾಹನಗಳನ್ನು, ಗಾಡಿಗಳನ್ನು ತಡೆದು ನಿಲ್ಲಿಸಿದರು. ಆಗ ಅಸಿಸ್ಟೆಂಟ್ ಕಮೀಷನರ್ ಬಂದು ಹೇಳಿದರು ನಿಮ್ಮ ರಸ್ತೆಗೆ ಎಸ್ಟಿಮೇಟ್ ಅನ್ನು ಸರ್ಕಾರಕ್ಕೆ ಕಳುಹಿಸೋಣ ಎಂದು. ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಹಳ್ಳಿಗಳಿಗೆ ಆರ್. ಎಲ್. ಇ. ಜಿ. ಪಿ. ಯನ್ನು ಅಳವಡಿಸುತ್ತೇವೆಂದು ಹೇಳಿದ್ದೀರಿ. ನಮ್ಮ ಜಿಲ್ಲೆಯಲ್ಲಿ ೮-೧೦ ಸಾವಿರ ಜನಸಂಖ್ಯೆ ಇರುವ ಹಳ್ಳಿಗಳು ಅನೇಕ ಇವೆ. ಆದರೂ ಅಲ್ಲಿಗೆ ಈ ಯೋಜನೆಯನ್ನು ಇನ್ನೂ ಅಳವಡಿಸಿಲ್ಲ. ರಸ್ತೆ ಬಗ್ಗೆ ಹೇಳುವುದಾದರೆ ಅದರ ಒಂದು ದೊಡ್ಡ ಪಟ್ಟಿಯೇ ಇದೆ. ಆದರೆ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಈ ವರ್ಷ ಯಾವ ಕೆಲಸವನ್ನು ತಗೆದುಕೊಳ್ಳುವುದಕ್ಕಾಗುವುದಿಲ್ಲ, ಮುಂದಿನ ವರ್ಷ ತೆಗೆದುಕೊಳ್ಳುತ್ತೇವೆ ಎಂದು, ತಾವು ಹಿಂದೆ ಅಧಿಕಾರಕ್ಕೆ ಬಂದಾಗ ಕೊಟ್ಟ ಬಡ್ಜೆಟ್ಟನ್ನು ನೋಡಿ ಬಹಳ ಸಂತೋಷವಾಗಿದ್ದ. ಆದರೆ ಇಂದಿನ ಬಡ್ಜೆಟ್ಟನ್ನು ನೋಡಿ ಬಹಳ ಅಸಮಾಧಾನವಾಗಿದೆ. ಅಂದು ೬೫ ಲಕ್ಷ ರೂಪಾಯಿಗಳು ಇದ್ದುದನ್ನು ಇಂದು ಒಂದು ಲಕ್ಷ ರೂಪಾಯಿಗಳಿಗೆ ಇಳಿಸಿದ್ದೀರಿ. ಸಣ್ಣತ್ತಿ ಮತ್ತು ಹರಿಸಿರಾಳ್ ಪ್ರಾಜೆಕ್ಟ್ ಮಾಡಿರುವುದನ್ನು ನೋಡಿ ನಾನು ಮತ್ತು ಬಾಪೂಗೌಡರು ಬಹಳ ಸಂತೋಷಪಟ್ಟೆವು. ಭೀಮನದಿ ಪ್ರಾಜೆಕ್ಟ್ ತೆಗೆದುಕೊಂಡಿರುವುದನ್ನು ಕೇಳಿ ಒಳ್ಳೆಯದೆಂದು ಹೇಳಿದೆವು. ಜನತಾಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಕಳೆದ ೩೫ ವರ್ಷಗಳಿಂದ ಮಾಡದೆ ಇದ್ದುದನ್ನು ಒಂದೇ ವರ್ಷದಲ್ಲಿ ದೇವೇಗೌಡರು ಮಾಡಿದ್ದಾರೆ ಎಂದು ಹೇಳುತ್ತಿದ್ದೆವು. ಆದರೆ ಅದೆಲ್ಲ ಈ ವರ್ಷ ಮಾಯವಾಗಿದೆ. ಯಾವ ಕೆಲಸ ಕೂಡ ಇಲ್ಲ. ಆದ್ದರಿಂದ, ದಯ ಮಾಡಿ ಮುಂದಿನ ಬಡ್ಜೆಟ್ಟಿನಲ್ಲಾದರೂ ಇದನ್ನು ಮಾಡಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಬಡ್ಜೆಟ್ಟಿನಲ್ಲಿ.........

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಲಕ್ಷ್ಮಯ್ಯನವರು ಚಿಕ್ಕಮಗಳೂರು ಚುನಾವಣೆಗೆ ಹೋದಾಗ ಸಿಕ್ಕಿದರು. ಆಗ ಅವರು, ನಮ್ಮ ಕ್ಷೇತ್ರಕ್ಕೆ ಐದೈದು ಕೋಟಿ ರೂಪಾಯಿಗಳು ಕೆಲಸ ಮಾಡಿದಾ, ರೆಂದು ಹೇಳಿದರು. ಬಹುಶಃ ಸರ್ಕಾರಿ ಎಂ. ಎಲ್. ಎ. ಎಂದು ಪಾರ್ಶಿಯಾಲಿಟಿ ಮಾಡಿರಬಹುದು ಅವರಿಗೆ ಕೊಡಿ, ನಾನು ಬೇಡ ಎಂದು ಹೇಳುವುದಿಲ್ಲ. ಅದೇ ರೀತಿ.......

ಅಧ್ಯಕ್ಷರು.—ಎಲ್ಲರಿಗೂ ಅವಕಾಶ ಕೊಡಬೇಕು. ತಾವು ಬೇಗ ಮುಗಿಸಿ.

ಶ್ರೀ ಕೆ. ಬಿ. ಶಾಣಪ್ಪ.—ಇನ್ನು ಇರಿಗೇಷನ್ ಬಗ್ಗೆ ಒಂದೆರಡು ಮಾತುಗಳನ್ನಾಡಬೇಕಾಗಿದೆ.

೩-೦೦ ಪಿ. ಎಂ.

ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಮಾಡಿದಾಗ ೩೫೦ ಕೋಟಿ ರೂಪಾಯಿಗಳ ಅಂದಾಜಿತ್ತು. ಈಗ ೨,೦೦೦ ಕೋಟಿ ರೂಪಾಯಿಗಳಾಗಿದೆ. ೧೯೮೪-೮೫ ರಲ್ಲಿ ಬಿಡುಗಡೆ ಮಾಡಿರುವುದು ೪೧ ಕೋಟಿ

೭೫ ಲಕ್ಷ ರೂಪಾಯಿಗಳು. ಈ ಪ್ರಕಾರ ವ್ಯವಸ್ಥೆ ಮಾಡಿದರೆ ನನಗನಿಸುತ್ತದೆ ಈ ಪ್ರಾಜೆಕ್ಟ್ ಮುಗಿಯುವ ಹೊತ್ತಿಗೆ ೫೦ ಸಾವಿರ ಕೋಟಿ ರೂಪಾಯಿಗಳು ಆಗುತ್ತದೆ. ಹೇಮಾವತಿ ಯೋಜನೆಯನ್ನು ಅದಷ್ಟು ಬೇಗ ಮುಗಿಸಿದರು. ಶರಾವತಿ ಯೋಜನೆಯನ್ನು ಮುಗಿಸಿದರು ಎಲ್ಲಾ ದೊಡ್ಡ ದೊಡ್ಡ ಯೋಜನೆಗಳನ್ನು ಮುಗಿಸಿಕೊಂಡರು. ಆದರೆ ಹೈದರಾಬಾದ್ ಕರ್ನಾಟಕದ ಯೋಜನೆ ಮಾಡಿಲ್ಲ ಹೈದರಾಬಾದ್ ಕರ್ನಾಟಕ ಎಂಬುದನ್ನು ಮರೆಸಬೇಕಾದರೆ ೫ ವರ್ಷದ ಅವಧಿಯಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ಮುಗಿಸಿ ೨ ಲಕ್ಷ ೩ ಲಕ್ಷ ಎಕರೆ ಜಮೀನಿಗೆ ನೀರು ಕೊಡುವಂಥ ವ್ಯವಸ್ಥೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಇದಕ್ಕೆ ಹೆಚ್ಚಿಗೆ ಹಣ ಒದಗಿಸಿ ಬರಗಾಲಕ್ಕೆ ಸಂಬಂಧಪಟ್ಟ ವಿಶೇಷ ಕಾರ್ಯಕ್ರಮವನ್ನೂ ಆ ಪ್ರಾಜೆಕ್ಟ್‌ನಲ್ಲಿ ಹಾಕಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತಾ ಇನ್ನೂ ಕೆಲವು ವಿಷಯಗಳನ್ನು ಮಾತನಾಡ ಬೇಕೆಂದಿದ್ದರೂ ಕಾಮ್ರೇಡ್ ಕೃಷ್ಣನ್ ಅವರು ಮಾತನಾಡುವುದರಿಂದ ಅವರಿಗೆ ಅದನ್ನೆಲ್ಲಾ ಬಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮದನ ಗೋಪಾಲ ನಾಯಕ್ (ಸುರಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಂಡಿಸಿರತಕ್ಕ ೪೪, ೪೫, ೪೬, ೩೪ ಮತ್ತು ೩೫ನೇ ಸಂಖ್ಯೆಯ ಬೇಡಿಕೆಗಳನ್ನು ಕೆಲವೊಂದು ಕಾರಣಗಳಿಂದಾಗಿ ನಾನು ವಿರೋಧ ಮಾಡುತ್ತೇನೆ. ನಾನು ಬಹಳ ಮುಖ್ಯವಾಗಿ ಮಾತನಾಡತಕ್ಕ ವಿಷಯ ನನ್ನ ಕ್ಷೇತ್ರದಲ್ಲಿಯೇ ನಡೆಯುತಕ್ಕ ಕೃಷ್ಣ ಮೆಲ್ದಂಡೆ ಯೋಜನೆ ಬಗ್ಗೆ. ಕೃಷ್ಣ ಮೆಲ್ದಂಡೆ ಯೋಜನೆಯಲ್ಲಿ ಆಗತಕ್ಕ ಕೆಲಸ, ಆಗಿರತಕ್ಕ ಕೆಲಸ ಮತ್ತು ಅಲ್ಲಿಯ ಅಧಿಕಾರಿಗಳ ಬೇಜವಾಬ್ದಾರಿತನದ ಬಗ್ಗೆ ನಾನು ಈಗಾಗಲೇ ಈ ಸದನದಲ್ಲಿ ಬಹಳ ಸಲ ಮಾತನಾಡಿದ್ದೇನೆ. ಈ ರೀತಿಯ ಒಂದು ಕಾರ್ಯ ಕೃಷ್ಣ ಮೆಲ್ದಂಡೆ ಯೋಜನೆಯಲ್ಲಿ ನಡೆಯುತ್ತಾ ಹೋದರೆ ಬಹುಶಃ ಈ ಕಾರ್ಯಕ್ರಮ ಮುಗಿಯುವುದು ಇನ್ನೂ ೨೦ ವರ್ಷಗಳಾಗುತ್ತದೆಂದು ನನಗನಿಸುತ್ತದೆ. ೧೯೮೪-೮೫ನೇ ಸಾಲಿನಲ್ಲಿ ಸರ್ಕಾರ ಈ ಯೋಜನೆಗೆ ವೆಚ್ಚ ಮಾಡಿರತಕ್ಕದ್ದು ೪೧.೮೩ ಕೋಟಿ ರೂಪಾಯಿಗಳು. ಮಾಡಿರತಕ್ಕ ವೆಚ್ಚದಲ್ಲಿ ''ಕಾಡಾ''ಗೆ ಎಷ್ಟು ಕೊಟ್ಟಿದ್ದಾರೆ ಮತ್ತು ನೀರಾವರಿಗೆ ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವಿವರ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈಗಾಗಲೇ ಸುಮಾರು ೨೧,೭೮೦ ಹೆಕ್ಟೇರ್‌ಗಳಿಗೆ ನೀರಾವರಿಯನ್ನು ಕಲ್ಪಿಸಿದ್ದೇವೆಂದು ಸರ್ಕಾರದವರು ಹೇಳಿದ್ದಾರೆ. ೨೧ ಸಾವಿರ ಹೆಕ್ಟೇರ್‌ಗಳಿಗೆ ನೀರಾವರಿಯನ್ನು ಕಲ್ಪಿಸಿರತಕ್ಕ ಯೋಜನೆಯಲ್ಲಿ ಕಾಡಾದವರು ಎಷ್ಟು ಕೆಲಸ ಮಾಡಿದ್ದಾರೆ ಎಂಬ ವಿವರಣೆಯನ್ನು ಉತ್ತರ ಕೊಡುವಾಗ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀರು ಬಿಟ್ಟಿರತಕ್ಕ ಭೂಮಿಗೆ ಸರಿಯಾಗಿ ನೀರು ಒದಗುತ್ತಿದೆಯೋ ಇಲ್ಲವೋ ? ಭೂಮಿ ಲೆವೆಲಿಂಗ್ ಆಗಿದೆಯೋ ಇಲ್ಲವೋ ? ಮತ್ತು ಅಲ್ಲಿಯ ರೈತರಿಗೆ ಯಾವರೀತಿ ತೊಂದರೆಯಾಗಿದೆ ಎಂಬುದನ್ನು ಸರ್ಕಾರ ಗಮನಿಸಬೇಕು. ಬರೀ ದುಡ್ಡು ಕೊಡುವುದರಿಂದ ಅಲ್ಲಿ ಕೆಲಸವಾಗುವುದಕ್ಕೆ ಸಾಧ್ಯವಿಲ್ಲ. ಯಾವರೀತಿ ನಡೆದುಕೊಂಡುಹೋಗುತ್ತಿದೆ ಎಂಬುದನ್ನು ಸರ್ಕಾರ ಗಮನಿಸಿದರೆ ಮತ್ತು ಅಲ್ಲಿಯ ಅಧಿಕಾರಿಗಳ ಮೇಲೆ ಗಮನ ಹರಿಸಿ ಸೋರಿಕೆಯ ಮೇಲೆ ನಿಗಾ ಇಟ್ಟರೆ ಮಾತ್ರ ಯೋಜನೆ ಬೇಗ ಕಾರ್ಯಗತವಾಗುವುದಕ್ಕೆ ಅವಕಾಶ ಇದೆ ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ರೂಲಿಂಗ್ ಬೆಂಚ್‌ನಲ್ಲಿ ೧೩೯ ಜನರಲ್ಲಿ ೧೫ ಜನ ಕೇಳುತ್ತಿದ್ದಾರೆ. ನಾವು ಇಲ್ಲಿ ಕುರ್ಚಿಗೆ ಭಾಷಣ ಮಾಡುವ ಬದಲು ಮನೆಯಲ್ಲೇ ಭಾಷಣ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಆ ಕಡೆಯುವರಿಗೆ, ಈ ಕಡೆಯುವರಿಗೆ ಎಷ್ಟು ಆಸಕ್ತಿ ಇದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಸದಸ್ಯರಲ್ಲ ಉತ್ತರ ಕೊಡುವುದು. ಮಂತ್ರಿಗಳು.

ಶ್ರೀ ಮದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೆ, ಅಲ್ಲಿ ಈಗಾಗಲೇ ನೀರು ಬಿಟ್ಟಿದ್ದಾರೆ. ಮೊನ್ನೆ ತಾನೆ ಗಮನ ಸೆಳೆಯುವ ಸೂಚನೆಯಲ್ಲಿ ರೈತರಿಗೆ ಆಗಿರತಕ್ಕ ತೊಂದರೆ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ. ಮತ್ತು ಅಲ್ಲಿಯ ಅಧಿಕಾರಿಗಳಿಗೂ ಹೇಳಿದ್ದೇನೆ. ೨೧ ಸಾವಿರ ಹೆಕ್ಟೇರುಗಳಿಗೆ ನೀರು ಬಿಟ್ಟಿರತಕ್ಕ ಪರಿಸ್ಥಿತಿಯಲ್ಲಿ ಆಗಿರತಕ್ಕ ತೊಂದರೆ ಏನೆಂದರೆ ಯಾವ ಹೊಲಗಳಿಗೆ ಫೀಲ್ಡ್ ಚಾನಲ್ಸ್ ಮುಖಾಂತರ ನೀರು ಬಿಟ್ಟಿದ್ದಾರೆ ಅಂಥ ಭೂಮಿಯಲ್ಲಿ ಬಿಟ್ಟಿರತಕ್ಕ ನೀರು ವಾಪಸ್ ಬರುತ್ತಿದೆ. ಅಂದರೆ ಅಧಿಕಾರಿಗಳು ಯಾವ ರೀತಿ ಲೆವೆಲ್ ಕಂಟ್ರೋಲ್ ಮಾಡಿದ್ದಾರೆ ಎಂಬುದನ್ನು

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಾವು ದಯವಿಟ್ಟು ಗಮನಿಸಬೇಕು. ಹುಣಸಗಿ ಸರ್ಕಲ್‌ನಲ್ಲಿ ಬರತಕ್ಕ ಪ್ರದೇಶದಲ್ಲಿ ಮೊನ್ನೆತಾನೆ ನೀರು ಬಿಟ್ಟಿದ್ದಾರೆ. ನಾನು ಅಲ್ಲಿ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಕೆಲವು ಹೊಲಗಳಿಗೆ ನೀರು ಸಿಗುತ್ತಿಲ್ಲ. ಕೆಲವೊಂದು ಹೊಲಗಳನ್ನು ವೇಳಾಪಟ್ಟಿಯಲ್ಲಿ ನಮೂದಿಸಿದ್ದಾರೆ. ಅವರಲ್ಲಿ ಹೆಸರು ಮತ್ತು ಸರ್ವೆ ನಂಬರ್‌ಗಳಿವೆ. ಆದರೆ ಆ ಹೊಲಗಳಿಗೆ ನೀರು ಬಿಟ್ಟಿಲ್ಲ. ಇಂಥ ಪರಿಸ್ಥಿತಿ ಈ ಯೋಜನೆಯಲ್ಲಿದೆ. ಜಾಗತಿಕ ಬ್ಯಾಂಕಿನಿಂದ ತೆಗೆದುಕೊಂಡಿರತಕ್ಕ ಸಾಲ ೧೧೭.೬೪ ದಶಲಕ್ಷ ಡಾಲರ್ಸ್. ಇದರ ಹೊರೆ ಬೀಳತಕ್ಕದ್ದು ನಮ್ಮ ಮೇಲೆ. ಒಂದು ವೇಳೆ ಈ ರೀತಿಯಾಗಿ ಯೋಜನೆ ನಡೆದಿದ್ದೇ ಆದರೆ ರೈತರು ನೀರಿನ ವೆಚ್ಚ ಕಟ್ಟಬೇಕಾದರೆ ಇರತಕ್ಕ ಭೂಮಿಯನ್ನು ಸರ್ಕಾರಕ್ಕೆ ಮಾರಬೇಕಾಗುತ್ತದೆ. ಅಂಥ ಪರಿಸ್ಥಿತಿ ಒದಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ತಮ್ಮ ಕಡೆಯಿಂದ ಒಂದು ಆಯೋಗವನ್ನು ನೇಮಿಸಿ ಅಲ್ಲಿಯ ತೊಂದರೆಗಳನ್ನು ಗಮನಿಸಿದ್ದೇ ಆದರೆ ಈ ಯೋಜನೆ ಪ್ರಗತಿಯಲ್ಲಿ ಸಾಗಬಹುದೆಂದು ನಾನು ಅಂದುಕೊಂಡಿದ್ದೇನೆ. ನಮ್ಮ ಭಾಗದಲ್ಲಿ ವಿಶೇಷವಾಗಿ ಇರತಕ್ಕ ತೊಂದರೆ ಎಂದರೆ ನಮ್ಮಲ್ಲಿರುವ ಎಗ್ಸಿಕ್ಯುಟೀವ್ ಇಂಜನಿಯರ್ ಅವರಿಗಾಗಲೀ ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗಾಗಲೀ ಅಥವಾ ಅಸಿಸ್ಟೆಂಟ್ ಎಗ್ಸಿಕ್ಯುಟೀವ್ ಇಂಜನಿಯರ್ ಅವರಿಗಾಗಲೀ ಏನಾದರೂ ತೊಂದರೆಗಳನ್ನು ಹೇಳಿಕೊಂಡರೆ ಅವರು ''ಕಾಡಾ''ದವರನ್ನು ಕೇಳಿ ಎಂದು ಹೇಳುತ್ತಾರೆ, ಕಾಡಾದವರನ್ನು ಕೇಳಿದರೆ ಐ.ಡಿ.ನಲ್ಲಿ ಕೇಳಿ ಎಂದು ಹೇಳುತ್ತಾರೆ. ಇದರಿಂದ ಮುಗ್ಧ ರೈತರಿಗೆ ಯಾರನ್ನು ಕೇಳಬೇಕು ಎಂಬುದು ತಿಳಿಯುತ್ತಿಲ್ಲ. ಹೀಗಾಗಿ ಆ ಭಾಗದ ರೈತರ ಗೋಳನ್ನು ದೇವರೇ ಬಲ್ಲ. ನಾವು ಈ ವರ್ಷದಲ್ಲಿ ಅಲ್ಲಿ ಖರ್ಚು ಮಾಡತಕ್ಕ ಹಣದಲ್ಲಿ ಅರ್ಧದಷ್ಟು ಹಣ ಅಲ್ಲಿಯ ಅಧಿಕಾರಿಗಳು ಮತ್ತು ನೌಕರ ವರ್ಗದವರಿಗೇ ಹೋಗುತ್ತದೆ. ವಿನಾಕಾರಣವಾಗಿ ಅಲ್ಲಿ ಆಫೀಸುಗಳಿವೆ. ಅಲ್ಲಿ ರೋಡಿನ ಕೆಲಸವಾಗಲೀ ಯಾವುದೇ ಕೆಲಸವಾಗಲೀ ಎಸ್ಟಿಮೇಟ್ ಮಾಡಬೇಕಾದರೆ ಎಸ್ಟಿಮೇಟ್ ಮಾಡತಕ್ಕ ಕೆಲಸ ಮತ್ತು ಆಫೀಸ್ ಕೆಲಸ ಒಂದೇಸಾರಿ ಪ್ರಾರಂಭ ಮಾಡಿದ್ದಾರೆ. ರೋಡ್ ಕೆಲಸ ಅಥವಾ ಬ್ರಿಡ್ಜ್ ಕೆಲಸ ಮುಗಿಯುವುದರೊಳಗಾಗಿ ಆಫೀಸ್ ಕೆಲಸ ಮುಗಿಯುತ್ತದೆ, ಆಮೇಲೆ ಆಫೀಸ್ ವೇಸ್ಟಾಗುತ್ತದೆ. ಈ ರೀತಿಯಾಗಿ ಸುಮ್ಮನೆ ಸುಮ್ಮನೆ ಹಣ ವೆಚ್ಚವಾದರೆ ಬಹಳ ತೊಂದರೆಯಾಗುತ್ತದೆ. ಮತ್ತು ಅಲ್ಲಿ ಎಷ್ಟು ಅಧಿಕಾರ ವರ್ಗ ಬೇಕೋ ಅಷ್ಟನ್ನು ಇಟ್ಟು, ಎಷ್ಟು ಡಿವಿಜನ್ ಬೇಕೋ ಅಷ್ಟನ್ನು ಬಿಟ್ಟು ಉಳಿದವನ್ನು ತೆಗೆಯಬೇಕಾಗುತ್ತದೆ. ಇನ್ನು ''ಕಾಡಾ'' ಬಗ್ಗೆ ಹೇಳಬೇಕೆಂದರೆ ಇವರು ಕೃಷ್ಣಾ ಮೇಲ್ದಂಡೆ ಯೋಜನೆ ನೀರು ಒಂದೇ ಬೆಳೆಗೆ ಎಂದು ಹೇಳಿದರು. ಅದೇ ಪ್ರಕಾರ ನಾನೂ ಸಹಾ ನಮ್ಮ ಕ್ಷೇತ್ರದಲ್ಲಿ ಹೋಗಿ ಈ ರೀತಿಯ ಒಂದು ಪ್ರೋಗ್ರಾಂ ಇದೆ ಎಂದು ಹೇಳಿದೆ. ಆದರೆ ಕಾಡಾದಲ್ಲಿನ ಅಧಿಕಾರಿಗಳು ವಿನಾಕಾರಣ ಹೋಗಿ ಹೇಳುತ್ತಾರೆ. ಒಂದು ಬೆಳೆ ಮಾಡಿ, ಇನ್ನೊಂದು ಬೆಳೆಗೂ ಸಾಧ್ಯವಾದರೆ ನೀರು ಒದಗಿಸುತ್ತೇವೆ ಹಾಗೆ ಹೀಗೆ ಎಂದು ಹೇಳುತ್ತಾರೆ. ಅವರ ಮಾತನ್ನು ಕೇಳಿ ರೈತರು ಬ್ಯಾಂಕ್‌ಗೆ ಹೋಗಿ ಸಾಲವನ್ನು ತೆಗೆದುಕೊಂಡು ಬೀಜ ಗೊಬ್ಬರ ತಂದು ಬಿತ್ತಿದ್ದು ಈಗ ಅವರಿಗೆ ನೀರು ಸಿಗುತ್ತಾ ಇಲ್ಲ. ಸರ್ಕಾರದ ಪ್ರೋಗ್ರಾಂ ಈ ರೀತಿ ಇದೆ ಎಂದು ನಾನು ಹೇಳುತ್ತೇನೆ. ಆದರೆ ಅಧಿಕಾರಿಗಳು ರೈತರಿಗೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಈ ತೊಂದರೆಯು ಸ್ವಲ್ಪ ಮಟ್ಟಿಗೆ ನಿವಾರಣೆ ಆಗಬೇಕಾದರೆ ದಯಮಾಡಿ ಜೂನ್ ಮೊದಲ ವಾರದಿಂದ ಫೆಬ್ರುವರಿ ೨೧ರವರೆಗೆ ನೀರು ಬಿಡುವ ೯ ತಿಂಗಳ ಕಾರ್ಯಕ್ರಮ ಏನಿದೆ ಅದನ್ನು ೧೦ ತಿಂಗಳವರೆಗೆ ವಿಸ್ತರಿಸಿ ಎರಡನೆಯ ಬೆಳೆ ತೆಗೆಯುವುದಕ್ಕೆ ಸದವಕಾಶವನ್ನು ನಮ್ಮ ಜನರಿಗೆ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯೮೩ರಲ್ಲಿ ಪ್ರಪ್ರಥಮವಾಗಿ ನಮ್ಮ ಭೂಮಿಗಳಿಗೆ ನೀರು ಬಿಟ್ಟ ಸಮಯದಲ್ಲಿ ಮುಖ್ಯ ಕಾಲುವೆಯ ೩೩ನೇ ಕಿಲೋಮೀಟರ್ ಭಾಗದಲ್ಲಿ ದಡ ಒಡೆದು ಹೋಯಿತು. ಛಾನಲ್ ಆಪರೇಟ್ ಮಾಡಿದಾಗ ಈ ರೀತಿ ಒಡೆಯಿತು. ಮಾನ್ಯ ಮಂತ್ರಿಗಳು ಅಲ್ಲಿಗೆ ಬರತಕ್ಕ ವಿಷಯ ಕೇಳಿ ಬಹಳ ತ್ವರಿತಗತಿಯಿಂದ ಅಲ್ಲಿ ಸಿಮೆಂಟ್ ಚೀಲಗಳನ್ನು ಹಾಕಿ ಅದನ್ನು ಮುಚ್ಚಿದರು. ಅದು ಒಡೆದ ಸಂದರ್ಭದಲ್ಲಿ ಕೆಳಗೆ ಇರತಕ್ಕ ಭೂಮಿಯ ಮಾಲೀಕರ ಹೊಲದಲ್ಲಿನ ಬೆಳೆಗಳು ಕೊಚ್ಚಿ ಹೋಗಿ ಪೂರ್ಣವಾಗಿ ನಾಶವಾಗಿವೆ. ಆದರೆ ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ಪರಿಹಾರದ ಸಲುವಾಗಿ ಅಲ್ಲಿನ ರೈತರು ಅಂಗಲಾಡಿದರೂ ಕೂಡಾ ಯಾವ ರೀತಿಯ ಉತ್ತರ ಪರಿಹಾರಧನ, ಆಶ್ವಾಸನೆ ಸಿಕ್ಕಿಲ್ಲ. ಇವೊತ್ತು ಅಲ್ಲಿ ಸುಮಾರು ೧೦ ಜನರ ಹೊಲ ಕೊಚ್ಚಿ ಹೋಗಿದೆ. ಆದ್ದರಿಂದ ಆ ಜನರಿಗೆ ತಕ್ಷಣ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು, ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾರಂಭ ಮಾಡುವಾಗ ಕೆಲವೊಂದು ಭೂಮಿಗಳನ್ನು ಸರ್ಕಾರ ವಶಪಡಿಸಿಕೊಂಡಿತ್ತು, ಭೂಮಿ ವಶಪಡಿಸಿಕೊಂಡ ನಂತರ ಮೊದಲು ಯಾವ ಯೋಜನೆ ಇತ್ತೋ ಆ ಯೋಜನೆಯನ್ನು ಬದಲಾವಣೆ ಮಾಡಿ ಬೇರೆ ಕಡೆ ಮೇನ್ ಕೆನಾಲ್ ಮಾಡಿರುವುದರಿಂದ ಸುಮಾರು ೧ ಸಾವಿರ ಎಕರೆಗೆ ಮೇಲ್ಪಟ್ಟು ಭೂಮಿ ಹಾಗೆಯೇ ಉಳಿದಿದೆ.

ಅದನ್ನು ಯಾವುದೇ ಕೆಲಸಕ್ಕೆ ತೆಗೆದುಕೊಂಡಿಲ್ಲ. ಅಂತಹ ಭೂಮಿಯನ್ನು ನೀರಾವರಿ ಮಾಡಿದ್ದಾರೆ. ನೀರಾವರಿ ಮಾಡಿ ಅವುಗಳನ್ನು ಈಗ ಬಾಡಿಗೆ ರೂಪದಲ್ಲಿ ಲೀಸ್ ಮೇಲೆ ಕೊಡುತ್ತಿದ್ದಾರೆ. ಇವೊತ್ತು ಆ ಭೂಮಿಯನ್ನು ಯಾರಿಂದ ಪಡೆದುಕೊಂಡಿದ್ದರು ಅವರಿಗೇ ಆ ಭೂಮಿಯನ್ನು ಕೊಡದಿದ್ದರೆ ಬಹಳ ತೊಂದರೆಯಾಗುತ್ತದೆ. ಅಲ್ಲಿ ಯಾರು ರೈತರು ತಮ್ಮ ಹೊಲವನ್ನು ಕಳೆದುಕೊಂಡರು, ಅವರು ಮತ್ತೆ ಆ ಹೊಲಗಳನ್ನು ನಮಗೇ ಕೊಡಿ ಎಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆ. ಅವರು ಯಾವ ಹಣವನ್ನು ತೆಗೆದುಕೊಂಡಿದ್ದಾರೆ ಅದನ್ನು ಅವರಿಂದ ಹಂತಹಂತವಾಗಿ ತೆಗೆದುಕೊಂಡು ಅವರಿಗೇ ಹೊಲವನ್ನು ವಾಪಸ್ಸು ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಅಲ್ಲಿ ನಡೆಯುತಕ್ಕ ದುಂದುವೆಚ್ಚ, ಅಲ್ಲಿನ ಅಧಿಕಾರಿಗಳಿಂದ ಆಗುತ್ತಾ ಇರತಕ್ಕ ಅನ್ಯಾಯವನ್ನು ಹಾಗೂ ತೊಂದರೆಯನ್ನು ತಪ್ಪಿಸಬೇಕಾದರೆ ಅಲ್ಲಿನ ಅಧಿಕಾರಿಗಳು ಮಾಡುವ ಕಾರ್ಯಕ್ರಮಗಳ ಮೇಲೆ ತಾವು ನಿಗಾ ಇಡಬೇಕೆಂದು ಹೇಳುತ್ತೇನೆ. ಆಗಸ್ಟ್ ೧೧ರ ಲಂಕೇಶ್ ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ ಅಲ್ಲಿನ ಕೆಲವು ಅಧಿಕಾರಿಗಳು ತಮ್ಮ ಮಕ್ಕಳನ್ನು ಗುಲ್ಬರ್ಗಾದ ಶಾಲೆಗಳಿಗೆ ಸರ್ಕಾರಿ ಕಾರಿನಲ್ಲಿ ಕಳುಹಿಸುತ್ತಿದ್ದಾರೆ ಎಂದು ಬಂದಿದೆ. ಕಾರ್ ಸಂಖ್ಯೆ ಎಂ.ಇ.ಪಿ. ೨೧೨೧ ಎಂದು ಸಹಾ ಅದರಲ್ಲಿ ಬರೆದಿದ್ದಾರೆ. ನಂತರ ಕೆಲವು ಅಧಿಕಾರಿಗಳು ಕುಡಿಯುವ ನೀರನ್ನು ೨೦-೩೦ ಕಿಲೋಮೀಟರ್ ದೂರದಿಂದ ಕಾರ್‌ನಲ್ಲಿ ತರಿಸುತ್ತಿದ್ದಾರಂತೆ. ಇನ್ನು ಅಲ್ಲಿನ ಅಧಿಕಾರಿಗಳು ರೋಡ್ ಕೆಲಸವಾಗಲೀ, ಇತರೆ ಕೆಲಸವಾಗಲೀ ಮಾಡಬೇಕಾದರೆ ತಮ್ಮ ಕಡೆಯ ಒಬ್ಬ ಏಜೆಂಟ್‌ನನ್ನು ನೇಮಿಸಿ ಅವರಿಂದ ಕೆಲಸ ಮಾಡಿಸುತ್ತಿದ್ದಾರೆ. ಇಂತಹ ಒಂದು ವ್ಯವಸ್ಥೆ ಅಲ್ಲಿ ಇರುವಾಗ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಈ ಯೋಜನೆ ಮುಗಿಯುತ್ತದೆ ಎಂದು ನಾನು ಅಂದುಕೊಂಡಿಲ್ಲ. ಇಂತಹವರ ಮೇಲೆ ನಿಗಾ ಇಟ್ಟು ಅಲ್ಲಿ ಆಗತಕ್ಕ, ಆಗಿರತಕ್ಕ ತೊಂದರೆಗಳನ್ನು ಸರಿಪಡಿಸಬೇಕಾದರೆ ದಯವಿಟ್ಟು ತಾವು ಒಂದು ಸದನದ ಸಮಿತಿಯನ್ನು ನೇಮಕ ಮಾಡಿದರೆ ಮಾತ್ರ ಇದನ್ನು ಸರಿಪಡಿಸಲು ಸಾಧ್ಯವೆಂದು ನಾನು ಹೇಳುತ್ತೇನೆ. ಇದರಿಂದ ಆ ಸಮಿತಿಯವರು ಅಲ್ಲಿನ ತೊಂದರೆಗಳನ್ನು ಕೂಲಂಕಷವಾಗಿ ವಿಚಾರ ಮಾಡುವುದಕ್ಕೆ ಅವಕಾಶ ಆಗುತ್ತದೆ. ಇನ್ನು ಲೋಕೋಪಯೋಗಿ ಇಲಾಖೆಯ ವಿಚಾರವಾಗಿ ಹೇಳಬೇಕೆಂದರೆ, ನಾನು ಮತ್ತು ಮಾನ್ಯ ಸಚಿವರಾದ ಬಾಪೂಗೌಡ ದರ್ಶನಾಪುರ ಅವರು ೧೯೮೩ರಿಂದ ಹುನಸಗಿ-ಎಲ್ಲಾ ಪವರ್ ರಸ್ತೆ ಆಗಬೇಕೆಂದು ಕೇಳುತ್ತಿದ್ದೇವೆ. ಅಲ್ಲಿ ಟ್ರಾಫಿಕ್ ಬಹಳ ಜಾಸ್ತಿ ಇದೆ. ಈಗ ಇರುವ ರಸ್ತೆಯಲ್ಲಿ ಯಾವುದಾದರೂ ಬಸ್‌ನಲ್ಲಿ ಪ್ರಯಾಣ ಮಾಡಿದರೆ ನೋವು ಇಲ್ಲದವರಿಗೂ ನೋವು ಪ್ರಾರಂಭವಾಗುತ್ತದೆ. ರಸ್ತೆಯ ಬಗ್ಗೆ ಪಿ. ಡಬ್ಲ್ಯು.ಡಿ. ಯವರಿಗೆ ಕೇಳಿದರೆ ಅದನ್ನು ಯು. ಕೆ. ಪಿ. ಯವರು ಮಾಡಬೇಕೆಂದು ಹೇಳುತ್ತಾರೆ ಯು. ಕೆ. ಪಿ. ಯವರು ಅವರ ಮೆಟೀರಿಯಲ್ಸ್ ಏನು ಇದೆ ಅದು ನಮಗೆ ಬೇಕಾಗಿಲ್ಲ. ಅದನ್ನು ಅವರೇ ತೆಗೆದುಕೊಳ್ಳಲಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಸ್ವಲ್ಪ ಕಲ್ಲು ಇದೆ. ಅದನ್ನು ನಿಮ್ಮ ಇಲಾಖೆಯವರೇ ಇಟ್ಟುಕೊಳ್ಳಲಿ ಎಂದು ಹೇಳುತ್ತಾರೆ. ಇವರಿಬ್ಬರ ಗುದ್ದಾಟದಿಂದ ರಸ್ತೆ ಹಾಗೆಯೇ ಉಳಿದಿದೆ. ಇದನ್ನು ಕೊಡೇಕಲ್-ತಾಳೀಕೋಟೆಗೆ ರಸ್ತೆ ಬೇಕಾಗಿರುತ್ತದೆ. ಕೊಡೇಕಲ್‌ನಿಂದ ಸುರಪುರಕ್ಕೆ ೭೦ ಕಿಲೋಮೀಟರ್, ತಾಳೀಕೋಟೆಗೆ ೩೦ ಕಿ.ಮೀ. ಆಗುತ್ತದೆ. ಅಲ್ಲಿ ರಸ್ತೆ ವ್ಯವಸ್ಥೆ ಮಾಡಿದರೆ ಆ ಭಾಗದ ಜನರಿಗೆ ಬಹಳ ಅನುಕೂಲವಾಗುತ್ತದೆ. ಆದುದರಿಂದ, ನಾನು ಮೊದಲೇ ನಿಮ್ಮನ್ನು ಕೇಳಿಕೊಂಡಿದ್ದೇನೆ. ಈ ರಸ್ತೆಗಳ ವಿಷಯ ಕೇಳಿಕೊಂಡಮೇಲೆ ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ನಮ್ಮ ಭಾಗದಲ್ಲಿ ಇರತಕ್ಕ ಬಡ ಜನರು, ಬಡ ರೈತರ ಮಕ್ಕಳು ಯಾರು ಇದ್ದಾರೆ ಅವರು ನಮ್ಮ ಯೋಜನೆಯ ಸಲುವಾಗಿ ತಮ್ಮ ಹೊಲಗಳನ್ನು ಕೊಟ್ಟಿದ್ದಾರೆ ಅಂತಹವರು ನಮ್ಮ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ದಿನಗೂಲಿ ಕೆಲಸ ಪಡೆಯುತ್ತಿದ್ದಾರೆ. ಹಾಗೂ ೧೭೮೨ರ ಜೂನ್‌ನಿಂದ ಆ ವ್ಯಕ್ತಿಗಳನ್ನು ತೆಗೆಯಬೇಕೆಂದು ಸರ್ಕಾರದಿಂದ ಆದೇಶ ಬಂತು. ಆ ಆದೇಶದ ಪ್ರಕಾರ ಸುಮಾರು ೫೦೦ ರಿಂದ ೧,೦೦೦ ಜನ ಎನ್.ಎಂ.ಆರ್. ವರ್ಕರ್ಸ್‌ನ್ನು ತೆಗೆದುಹಾಕಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ೧೯೭೨ರಿಂದ ೧೯೮೨ರ ಅವಧಿಯೊಳಗೆ ಸುಮಾರು ೨೫ ಸಬ್ ಡಿವಿಷನ್‌ಗಳು, ೨೫ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳನ್ನು ನೇಮಕ ಮಾಡಲಾಗಿದೆ. ಯು.ಕೆ.ಪಿ.ಯಲ್ಲಿ ಕೆಲಸ ಮಾಡತಕ್ಕ ದಿನಗೂಲಿ ನೌಕರರಿಗೆ ತೊಂದರೆಯಾಗುತ್ತಿರುವುದು ತುಂಬಾ ಅನ್ಯಾಯ. ಈ ಯೋಜನೆಯ ಅಡಿಯಲ್ಲಿ ಮುಳುಗಡೆಯಾದ ಪ್ರದೇಶದ ಜನರು ಯಾರ್ಯಾರು ತಮ್ಮ ತಮ್ಮ ಜಮೀನುಗಳನ್ನು ಕಳೆದುಕೊಂಡರೋ ಅವರಿಗೆಲ್ಲಾ ಈ ಸರ್ಕಾರದವರು ಏನು ಆಶ್ವಾಸನೆಯನ್ನು ಕೊಟ್ಟಿದ್ದರು ಎಂದರೆ, ಜಮೀನು ಕಳೆದುಕೊಂಡವರ ಮನೆಯವರಿಗೆ ಈ ಯೋಜನೆಯಲ್ಲಿ ಒಂದೊಂದು ಖಾಯಂ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಇವೊತ್ತು ಅವರಿಗೆ ಆ ರೀತಿ ಕೆಲಸವನ್ನು ಕೊಡದೇ ಹೋದರೆ ಅವರಿಗೆ ಮೋಸ ಮಾಡಿದಂತಾಗುತ್ತದೆ. ಆದ್ದರಿಂದ

ತಾವು ಯು.ಕೆ.ಪಿ.ಯಲ್ಲಿ ಎನ್.ಎಂ.ಆರ್. ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಮೊದಲು ಈ ಸದನದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ ಯು.ಕೆ.ಪಿ.ಯಲ್ಲಿ ಯಾವರೀತಿ ಕೆಲಸಕಾರ್ಯಗಳು ಸಾಗುತ್ತಿವೆ ಎಂಬುದನ್ನು ವೀಕ್ಷಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

† ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಉಪ ಸಭಾಧ್ಯಕ್ಷರೆ, ಈ ಸದನದಲ್ಲಿ ೧೯೮೪-೮೫ನೇ ಸಾಲಿನ ವಾರ್ಷಿಕ ವರದಿಯನ್ನು ಮಾನ್ಯ ಮಂತ್ರಿಗಳು ಮಂಡಿಸಿರುವುದನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ.

ಈ ವಿಚಾರದಲ್ಲಿ ಆ ಭಾಗದ ಮಾನ್ಯ ಸದಸ್ಯರು ಮತ್ತು ಈ ಭಾಗದ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನಮ್ಮ ಸರ್ಕಾರ ೧೯೮೩ರಲ್ಲಿ ಒಂದು ಸಾರಿ ಬಂದು ಹೊರಟುಹೋಯಿತು. ನಂತರ ೧೯೮೫ರಲ್ಲಿ ಮತ್ತೆ ಚುನಾವಣೆಯಲ್ಲಿ ಬಹುಮತದಿಂದ ಆರಿಸಿ ಬರಬೇಕಾದರೆ ಹಿಂದಿನ ೨ ವರ್ಷಗಳಲ್ಲಿ ಇದು ಏನು ಸಾಧನೆ ಮಾಡಿದೆ ಎಂಬುದನ್ನು ಜನತೆ ಬಹಳ ದೀರ್ಘವಾಗಿ ತುಲನಾತ್ಮಕ ದೃಷ್ಟಿಯಿಂದ ಯೋಚನೆ ಮಾಡಿ ನಮ್ಮ ಪಕ್ಷವನ್ನು ಪುರಸ್ಕರಿಸಿ ಆರಿಸಿ ಅಧಿಕಾರಕ್ಕೆ ತಂದಿದ್ದಾರೆ ಬಂದ ಹೊಸದರಲ್ಲಿ ಕೆಲಸಕಾರ್ಯಗಳು ಸ್ವಲ್ಪ ಮಟ್ಟಿಗೆ ನಿಧಾನವಾಗಬಹುದು. ಉದಾಹರಣೆಗೆ ಹೇಳುವುದಾದರೆ ಒಂದು ಸಂಸಾರ ಹೊಸದಾಗಿ ಒಂದು ಮನೆಗೆ ಹೋದರೆ, ಅಲ್ಲಿ ನೀರು ಎಲ್ಲಿದೆ, ಬಚ್ಚಲುಮನೆ ಎಲ್ಲಿದೆ, ಅಡಿಗೆ ಮನೆ ಎಲ್ಲಿದೆ ಎಂಬುದನ್ನು ನೋಡಿಕೊಳ್ಳಬೇಕಾಗುತ್ತದೆ. ಆ ಸಂಸಾರ ವ್ಯವಸ್ಥಿತವಾಗಿ ನಡೆಯಬೇಕಾದರೆ ಸ್ವಲ್ಪಕಾಲ ಹಿಡಿಯುತ್ತದೆ. ನಮ್ಮ ಸರ್ಕಾರಕ್ಕೆ ೨ ವರ್ಷ ತುಂಬಿ ಈಗ ೩ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಕೇವಲ ೨೩ ತಿಂಗಳ ಅವಧಿಯಲ್ಲಿ ಸಾಕಷ್ಟು ಕೆಲಸವನ್ನು ಪೂರ್ಣ ಮಾಡುವುದಕ್ಕೆ ಆಗಲಿಲ್ಲ........

ಒಬ್ಬ ಮಾನ್ಯ ಸದಸ್ಯರು.—ನೀವು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಮಾತನಾಡುತ್ತಿದ್ದೀರಾ ?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ನಮ್ಮ ಸರ್ಕಾರ ಯಾವುದೇ ಒಳ್ಳೆಯ ಕೆಲಸ ಮಾಡುವುದಕ್ಕೆ ಹೋದರೂ ನೀವು ಇದರ ಕಾಲನ್ನು ಹಿಡಿದು ಹಿಂದಕ್ಕೆ ಎಳೆಯುತ್ತಿದ್ದೀರಿ. ಕೆಲಸ ಮಾಡಲು ಹೋಗುವವರಿಗೆ ನೀವು ತೊಂದರೆ ಕೊಡುತ್ತಿದ್ದೀರಿ. ತುಕ್ಕು ಹಿಡಿದ ಯಂತ್ರವನ್ನು ಸರಿಪಡಿಸುವುದು ಕಷ್ಟವಿದೆ. ತಮಗೆ ಗೊತ್ತಿರುವಂತೆ ಈ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದು ಇದ್ದ ಪರಿಸ್ಥಿತಿಯನ್ನು ಗಮನಿಸಿದ ಈ ಅಧಿಕಾರಿಗಳು ಏನು ಮಾತನಾಡಿಕೊಳ್ಳುತ್ತಿದ್ದರು ಎಂದರೆ, ಈ ಸರ್ಕಾರ ಇರುತ್ತದೋ, ಉರುಳಿ ಹೋಗುತ್ತದೋ ಎಂದು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದರು. ನಾವು ಹೇಳಿದ ಕೆಲಸವನ್ನು ಮಾಡುವುದಕ್ಕೆ ಅವರು ಹಿಂದು ಮುಂದು ನೋಡುತ್ತಿದ್ದರು. ಆಗ ಅಂಥ ಒಂದು ಸಂದರ್ಭ ಇತ್ತು. ೧೯೮೩-೮೪ ಮತ್ತು ೧೯೮೪-೮೫ರ ಅವಧಿ ಅತಿ ಕಠಿಣವಾಗಿತ್ತು ಎಂಬುದು ರಾಜ್ಯದ ಜನತೆಗೆ ಗೊತ್ತಿದೆ. ಆ ಅವಧಿಯಲ್ಲಿ ಸರ್ಕಾರ ಸಾಕಷ್ಟು ಪರಿಣಾಮಕಾರಿಯಾಗಿ ಸಮಸ್ಯೆಗಳನ್ನು ಪರಿಹಾರ ಮಾಡಿತು ಎಂದರೆ, ಇದು ಪ್ರಾಮಾಣಿಕತನದಿಂದ ಕೆಲಸಮಾಡಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಸರ್ಕಾರದ ದಕ್ಷತೆ ಹೆಚ್ಚಿದೆ ಎಂಬುದನ್ನು ನಾನು ಸಮರ್ಥಿಸುತ್ತೇನೆ. ರಾಜ್ಯದ ಲೋಕೋಪಯೋಗಿ ಖಾತೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಾನ್ಯ ದೇವೇಗೌಡರು ಅವರ ಕಾರ್ಯಭಾರವನ್ನು ವ್ಯವಸ್ಥಿತ ರೀತಿಯಲ್ಲಿ, ಪ್ರಾಮಾಣಿಕತೆಯಿಂದ, ಅವರು ಈ ಪಕ್ಷಕ್ಕೆ ಸೇರಿದವರು ಇವರು ಆ ಪಕ್ಷಕ್ಕೆ ಸೇರಿದವರು ಎನ್ನದೆ ಎಲ್ಲಾ ಮಾನ್ಯ ಸದಸ್ಯರ ಮತ ಕ್ಷೇತ್ರಗಳಲ್ಲೂ ರಸ್ತೆ ಕಾಮಗಾರಿಗಳನ್ನು ಕೈಗೆ ತೆಗೆದುಕೊಂಡರು......

ಶ್ರೀ ಕೆ.ಬಿ. ಶಾಣಪ್ಪ.—೧೯೭೩-೭೪ರ ಸಾಲಿನ ಬಜೆಟ್‌ನ್ನು ಥೌಸಂಡ್ ರುಪೀಸ್ ಬಜೆಟ್ ಎಂದು ಜನ ಕರೆಯುತ್ತಿದ್ದರು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—೮೩-೮೪ರ ಸಾಲಿನ ಬಜೆಟ್‌ನ್ನು ಎಲ್ಲರೂ ಒಪ್ಪಿದ್ದಾರೆ. ೭೪-೭೫ರ ಸಾಲಿನ ಬಜೆಟ್ ಬಗ್ಗೆ ಯೋಚನೆ ಮಾಡಿ. ರಾಜ್ಯದ ಎಲ್ಲಾ ಸಮಸ್ಯೆಗಳನ್ನೂ ಒಂದೇಸಾರಿ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಗೆಹರಿಸುವುದಕ್ಕೆ ಇದನ್ನು ಮ್ಯಾಜಿಕ್ ಲ್ಯಾಂಟ್ರಿನ್ ಎಂದು ತಿಳಿದುಕೊಂಡಿರಾ ? ಪ್ರತಿಯೊಂದಕ್ಕೂ ಸಂಪನ್ಮೂಲಗಳು ಬೇಕಾಗುತ್ತದೆ. ನಮ್ಮ ಬೊಕ್ಕಸದಲ್ಲಿ ಹೆಚ್ಚು ದುಡ್ಡು ಇದ್ದರೆ ಧಾರಾಳವಾಗಿ ಖರ್ಚುಮಾಡಬಹುದು. ಆದರೆ ಸಂಪನ್ಮೂಲದ ಕೊರತೆ ಇದೆ. ೧೯೮೩-೮೪, ೧೯೮೪-೮೫ರ ಅವಧಿಯಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲ ಬಂದಾಗ ಜನತೆಯನ್ನು ಆ ಬರಗಾಲದ ದವಡೆಯಿಂದ ಪಾರುಮಾಡಬೇಕಾದರೆ ಎಷ್ಟು ಕಷ್ಟವಾಯಿತು ಎಂಬುದನ್ನು ನಾವೂ, ನೀವೂ ಯೋಚನೆ ಮಾಡಬೇಕು. ಕೇವಲ ೨೩ ತಿಂಗಳಲ್ಲಿ ರಸ್ತೆ ಕುಸಿದಿದೆ ಎಂದು ಹೇಳುವುದಾದರೆ, ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವೇದಿಕೆಯ ಮೇಲೆ ನಿಂತು ನಾವು ಅವಕಾಶವನ್ನು ಧರೆಗೆ ಇಳಿಸುತ್ತೇವೆ ಎಂದು ಭರವಸೆಯನ್ನು ನೀಡಿ ನೀಡಿ ಯಾವುದೇ ಅಡಿಗಲ್ಲನ್ನೂ ಹಾಕಲಿಲ್ಲ. ೧೯೮೨-೮೩ ಸಾಲಿನಲ್ಲಿ ೨೦೦ ದನಗಳ ಆಸ್ಪತ್ರೆಗಳನ್ನು ನೀವು ಮಂಜೂರು ಮಾಡಿದಿರಿ. ಆದರೆ ಅಲ್ಲಿಗೆ ವೈದ್ಯರುಗಳಿಲ್ಲ, ಕಾಂಪೌಂಡರ್ ಇಲ್ಲ, ಔಷಧಿಗಳು ಮೊದಲೇ ಇಲ್ಲ. ಇಂಥಾದ್ದು ಏತಕ್ಕೆ ಮಾಡಿದಿರಿ. ಅವೊತ್ತು ನೀವು ಮಾಡಿದ ಪಾಪದ ಹೊರೆಯನ್ನು ಇವತ್ತು ನಾವು ಅಧಿಕಾರಕ್ಕೆ ಬಂದಮೇಲೆ ಹೊರಬೇಕಾಗಿದೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ತಮಾಷೆಗಾಗಿ ಒಂದು ಮಾತನ್ನು ಹೇಳುವುದಾದರೆ, ನನಗೆ ತಿಳಿದವರು ಇಬ್ಬರು ವ್ಯಕ್ತಿಗಳಿದ್ದರು. ಅವರಲ್ಲಿ ಒಬ್ಬ ನಾನು ಒಂದು ನೂರು ಸುಳ್ಳು ಹೇಳುತ್ತೇನೆಂದು ಹೇಳಿದ. ಆದರೆ ಇನ್ನೊಬ್ಬ ನಾನು ಒಂದು ಸಾವಿರ ಸುಳ್ಳು ಹೇಳುತ್ತೇನೆಂದು ಹೇಳಿದ. ಅದೇರೀತಿ ನೀವೂ ಕೂಡ ಹಿಂದಿನ ಸರ್ಕಾರ ಹಾಗೆ ಮಾಡಿತ್ತು, ಆದ್ದರಿಂದ ನಾವು ಈ ರೀತಿ ಮಾಡುತ್ತೇವೆಂದು ಏತಕ್ಕೆ ಹೇಳುತ್ತೀರಿ ?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೆ, ಇನ್ನು ನಾವು ಕಳೆದ ೨ ವರ್ಷಗಳ ಅವಧಿಯಲ್ಲಿ ಕಾಮಗಾರಿಗಾಗಿ ಬಹಳಷ್ಟು ಹಣವನ್ನು ಖರ್ಚುಮಾಡಿದ್ದೇವೆ. ಈ ಮಾತನ್ನು ಎಲ್ಲರೂ ಒಪ್ಪತಕ್ಕ ವಿಚಾರವಾಗಿದೆ. ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿದ್ದರೂ ಕೂಡ ಸಾಕಷ್ಟು ಕೆಲಸಗಳಾಗಿಲ್ಲವೆಂದು ತಾವು ಹೇಳುವುದಾದರೆ, ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ, ರಸ್ತೆ ಕಾಮಗಾರಿಗಾಗಿ ನಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎಂಬುದನ್ನು ಒಮ್ಮೆ ಅವಲೋಕಿಸಿ ನೋಡಿದರೆ ಆಗ ನೀವೇ ಅದನ್ನು ಒಪ್ಪಿಕೊಳ್ಳುತ್ತೀರಿ.

ಶ್ರೀ ಮದನಗೋಪಾಲ ನಾಯಕ್.—ನೀವು ಖರ್ಚುಮಾಡಿರತಕ್ಕ ಹಣ ಏನಿದೆ ಅದು ವಿಶ್ವ ಬ್ಯಾಂಕ್‌ನಿಂದ ಸಾಲ ತಂದಿರತಕ್ಕದ್ದು

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ನಾವು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಿದ್ದೇವೆ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಲೋಕೋಪಯೋಗಿ ಖಾತೆಯ ಸಚಿವರಲ್ಲಿ ನನ್ನ ಒಂದು ಮನವಿ ಎಂದರೆ, ಈ ಇಲಾಖೆಯಲ್ಲಿರತಕ್ಕ ವಾಹನಗಳು ಏನಿವೆ ಅವು ಬಹುಶಃ ಬ್ರಿಟಿಷರ ಕಾಲದವುಗಳೆಂದು ಕಾಣುತ್ತದೆ. ಆಗ ಟಾಟಾ, ಬಿರ್ಲಾ, ಮುಂತಾದವರ ಕಂಪನಿಗಳಲ್ಲಿ ತಯಾರಾಗುತ್ತಿದ್ದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದರೋ ಏನೋ ಗೊತ್ತಿಲ್ಲ. ಅವರು ನಮ್ಮ ಹತ್ತಿರವೇ ಈ ಸಾಮಾನುಗಳನ್ನು ಕೊಂಡುಕೊಳ್ಳಬೇಕೆಂದು ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿದ್ದಾರೋ ಏನೋ ಎಂಬ ಅನುಮಾನ ಬಂದಿದೆ. ತಾವು ದಯವಿಟ್ಟು

೩-೩೦ ಪಿ.ಎಂ.

ಯೋಚನೆ ಮಾಡಬೇಕು. ಈ ವಾಹನಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸಬೇಕಾದರೆ ಕಷ್ಟ ಇರುತ್ತದೆ. ಒಂದು ಲೀಟರ್ ಪೆಟ್ರೋಲ್‌ಗೆ ಮೂರುವರೆ ಕಿಲೋಮೀಟರ್ ಬರುತ್ತದೆ. ತಾವೂ ಅವರಿಗೆ ಕೊಡತಕ್ಕಂಥ ಪೆಟ್ರೋಲ್ ಸಾಲದೆ ಬರುತ್ತದೆ. ಅಧಿಕಾರಿಗಳನ್ನು ನೀವು ಸುಮ್ಮನೆ ದೂರುತ್ತಾ ಹೋಗಬಾರದು. ನಾವೂ ಕೂಡ ಈ ವಿಷಯದಲ್ಲಿ ಯೋಚನೆ ಮಾಡಬೇಕು. ಈಗಿರತಕ್ಕಂಥ ವಾಹನಗಳು ಬಹುತೇಕ ೧೯೧೮ನೇ ಇಸವಿಯವು. ಬ್ರಿಟಿಷರ ಕಾಲದಲ್ಲಿದ್ದವುಗಳು ಇವೊತ್ತಿಗೂ ಅವೇ ಚಾಲು ಆಗುತ್ತಿವೆ. ಅವುಗಳನ್ನು ತಾವು ಏತಕ್ಕೆ ಬದಲಾವಣೆ ಮಾಡಬಾರದು? ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಮೊದಲು ಇವುಗಳನ್ನು ಬದಲಾವಣೆ ಮಾಡಬೇಕು. ಪೆಟ್ರೋಲ್ ಒಂದೂವರೆ ರೂಪಾಯಿನಿಂದ ಮೂರುವರೆ ರೂಪಾಯಿಯಾಗಿ ಈಗ ಎಂಟು ರೂಪಾಯಿಗೆ ಒಂದು ಲೀಟರ್ ಬೆಲೆಯಾಗಿದೆ, ಆದರೆ ಆಗಿನ ಕಾಲ

ಪಲ್ಲಿ ಕೊಟ್ಟಂತೆ ವಾಹನಗಳನ್ನು ಇಟ್ಟುಕೊಂಡು ಲೋಕೋಪಯೋಗಿ ಇಲಾಖೆಯಲ್ಲಿ ಅಧಿಕಾರಿಗಳು ತಮ್ಮ ಕೆಲಸಗಳನ್ನು ಮಾಡುವುದಾದರೂ ಹೇಗೆ ? ಸಂಬಂಧ ಪಟ್ಟ ಮಂತ್ರಿಗಳು ಪ್ರಾಮಾಣಿಕವಾಗಿ ಪ್ರಯತ್ನಪಟ್ಟು ವಾಹನಗಳನ್ನು ಹರಾಜು ಹಾಕಿ ಹೊಸ ಲಾರಿ ಜೀಪ್ ಇವುಗಳನ್ನು ಸರಬರಾಜು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈವೊತ್ತಿನ ದಿವಸ ಈ ಒಂದು ಮೇಜರ್ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯಬೇಕಾದರೆ ಸಾಕಷ್ಟು ವಾಹನಗಳನ್ನು ಒದಗಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದು ಇರುತ್ತದೆಂದು ನಾನು ಹೇಳುತ್ತೇನೆ.

೧೯೨೭ನೇ ಇಸವಿಯಲ್ಲಿ ಬ್ರಿಟಿಷರ ಸರ್ಕಾರವಿದ್ದ ಕಾಲದಿಂದಲೂ ಚಿಕ್ಕಮಗಳೂರು ಲಕ್ಕವಳ್ಳಿ ಭಾಗದಲ್ಲಿ ಹರಿಯತಕ್ಕಂಥ ನೀರನ್ನು ತಡೆಗಟ್ಟುವ ಪ್ರಯತ್ನಗಳು ನಡೆಯುತ್ತಿವೆ. ಯಾವುದೇ ಕಾರಣದಿಂದಲೂ ಆ ನೀರನ್ನು ತಡೆಗಟ್ಟಬಾರದು. ನಮ್ಮಲ್ಲಿ ಹರಿಯತಕ್ಕಂಥ ನೀರನ್ನು ನಾವು ಉಪಯೋಗಿಸಲಿಕ್ಕೆ ಬರುವುದಿಲ್ಲವೆಂದು ಹೇಳಿದರೆ ಜನರು ಸರ್ಕಾರದ ಮುಂದೆ ಜಾತ ಹೊರಡತಕ್ಕಂಥ ಕಾಲ ಬರಬಹುದು. ನಮ್ಮಲ್ಲಿ ಹರಿಯತಕ್ಕಂಥ ನೀರನ್ನು ಉಪಯೋಗ ಮಾಡಿಕೊಂಡು ನಮ್ಮ ಜನರು ಬದುಕಬಾರದು ಎನ್ನುವ ಕೆಲಸಕ್ಕೆ ಕೈಹಾಕತಕ್ಕಂಥದ್ದು ಯೋಗ್ಯವಾದುದ್ದಲ್ಲ. ಆ ಕಾನೂನನ್ನು ಕಿತ್ತುಹಾಕಬೇಕೆಂದು ಈ ಸದನದ ಮುಖಾಂತರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ನಮ್ಮ ಭಾಗದಲ್ಲಿ ಹರಿಯುವ ಮಹಾಗಂಗೆಯನ್ನು ಉಪಯೋಗ ಮಾಡುವುದು ಆಗಬಾರದೆಂದು ಯಾವ ಕಾನೂನನ್ನು ಹಾಕಿದ್ದರು, ಅದನ್ನು ಸದನದ ಮೂಲಕ ಕಾನೂನನ್ನು ಸಡಿಲಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಹರಿದು ಬರತಕ್ಕಂಥ ಸ್ಟ್ರೀಮ್‌ಗೆ ಅಣೆಕಟ್ಟನ್ನು ಕಟ್ಟಿ ನೀರಾವರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಸರ್ಕಾರ ನುಡಿದಂತೆ ನಡೆದುಕೊಳ್ಳುವ ಸರ್ಕಾರ. ಲೋಕೋಪಯೋಗಿ ಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಮೇಲೆ ಸಾಕಷ್ಟು ಕೆಲಸಗಳು ಆಗಿವೆ. ಹೊಗಳಿಕೆಗಾಗಿ ಈ ಮಾತನ್ನು ನಾನು ಹೇಳುತ್ತಿಲ್ಲ. ಸರ್ಕಾರವು ಅಧಿಕಾರಕ್ಕೆ ಬಂದಕೂಡಲೇ ಇಡೀ ಕರ್ನಾಟಕದ ಮೂಲೆ ಮೂಲೆಯಲ್ಲಿಯೂ ಸ್ತಗಿತಗೊಂಡಿದ್ದ ಯಂತ್ರಕ್ಕೆ ಕಳೆ ಕೊಟ್ಟಿದ್ದಾರೆ. ಅಧಿಕಾರಿಗಳಲ್ಲಿ ನಮ್ಮ ಹಸ್ತಕ್ಷೇಪವಿಲ್ಲ. ಮುಖ್ಯ ಇಂಜನೀಯರ್ ಆಗಲಿ, ಎಕ್ಸಿಕ್ಯುಟೀವ್ ಇಂಜನೀಯರ್‌ರವರಾಗಲಿ, ಅಸಿಸ್ಟೆಂಟ್ ಇಂಜನೀಯರ್‌ರವರಾಗಲಿ ಅವರ ಕೆಲಸಗಳಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ. ಈವೊತ್ತಿನ ದಿವಸ ಅಧಿಕಾರಿಗಳು ಪ್ರಾಮಾಣಿಕವಾಗಿ ಒಳ್ಳೆಯ ಕೆಲಸ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಧಿಕಾರಿಗಳಿಗೆ ಕಿರುಕುಳವಿಲ್ಲದಿದ್ದರೆ ಅವರೂ ಕೂಡ ಒಳ್ಳೆಯ ಕೆಲಸ ಮಾಡುತ್ತಾರೆ. ಅವರೂ ಕೂಡ ನಮ್ಮ ರಾಜ್ಯದ ಜನರೇ. ಅಧಿಕಾರಿಗಳನ್ನು ಟೀಕೆ ಮಾಡತಕ್ಕಂಥದ್ದು ಒಳ್ಳೆಯದಲ್ಲ. ಅವರಲ್ಲೂ ಕೆಲವು ರಾಜಕಾರಣಿಗಳು ಪಾಲುಗಾರರಾಗಿರುತ್ತಾರೆ. ಅಧಿಕಾರಿಗಳಲ್ಲಿ ನಮ್ಮ ಹಸ್ತಕ್ಷೇಪವಿಲ್ಲದಿದ್ದರೆ ಅವರು ಒಳ್ಳೆಯ ಕೆಲಸ ಮಾಡಿ ಸಮರ್ಥಿಸುತ್ತಾರೆ. ರಾಜಕಾರಣಿಗಳು ಕೂಡ ನ್ಯಾಯಯುತವಾಗಿ ದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರಯತ್ನ ಪಟ್ಟರೆ ರಾಜ್ಯಕ್ಕೂ ಒಳ್ಳೆಯದು, ದೇಶಕ್ಕೂ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಈ ಆಯವ್ಯಯವನ್ನು ನಾನು ಸಮರ್ಥಿಸುತ್ತಾ ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಾನ್ಯ ಸಚಿವರು ತಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ೧೯೮೫–೮೬ನೇ ಸಾಲಿಗೆ ತಾವು ಇಟ್ಟಿರತಕ್ಕಂಥ ಬಡ್ಜೆಟ್ಟನ್ನು ಪರಿಶೀಲನೆ ಮಾಡಿ ಈ ಇಲಾಖೆಯ ಕೆಲಸ ಕಾರ್ಯಗಳನ್ನು ವ್ಯಾಪಕವಾಗಿ ಪರಿಣಾಮಕಾರಿಯಾಗಿ ಮಾಡಲು ಹಣವನ್ನು ಕೊಟ್ಟರೆ ಸಾಕಷ್ಟು ಅಭಿವೃದ್ಧಿಯಾಗುತ್ತದೆಂದು ಹೇಳಿ ಈ ಬಡ್ಜೆಟ್ಟನ್ನು ಸಮರ್ಥಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ರಾಮಯ್ಯ (ಹಿರಿಯೂರು).—ಈ ಸದನದ ಗೌರವಾನ್ವಿತ ಅಧ್ಯಕ್ಷರೇ ಇವತ್ತಿನ ದಿವಸ ಲೋಕೋಪಯೋಗಿ ಇಲಾಖೆಯ ೧೯೮೫–೮೬ನೇ ಸಾಲಿನ ಅನುಧಾನ ಬೇಡಿಕೆಯನ್ನು ಸದನದ ಮುಂದೆ ಮಂಡಿಸಿರುವ ಬಗ್ಗೆ ನಾಲ್ಕಾರು ಮಾತುಗಳನ್ನು ನಾನು ಹೇಳಬಯಸುತ್ತೇನೆ. ರಾಷ್ಟ್ರದಲ್ಲಿ ಒಂದು ಸಮೀಕ್ಷೆ ನಡೆದ ಮೇಲೆ ಭ್ರಷ್ಟಾಚಾರ ಅನೇಕ ಇಲಾಖೆಗಳಲ್ಲಿ ಪ್ರಥಮ ಸ್ಥಾನ ಲೋಕೋಪಯೋಗಿ ಇಲಾಖೆ ಗಳಿಸಿದೆ. ಈ ಇಲಾಖೆ ಕೈಗೊಳ್ಳತಕ್ಕಂಥ ಯೋಜನೆಗಳಿಗೆ ಹೆಚ್ಚು ಹಣವನ್ನು ಸಂದಾಯ ಮಾಡತಕ್ಕಂಥದ್ದು ಇದೆ. ಇದರಲ್ಲಿ ಬಹುಪಾಲು ದುರುಪಯೋಗವಾಗುತ್ತಿದೆ ಎನ್ನ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಕ್ಕಂಥ ಮಾತು ಇದರಿಂದ ಅರ್ಥವತ್ತಾಗಿದೆ. ಎಂದರೆ ಇಲ್ಲಿ ಯಾವುದೇ ಒಂದು ಕಟ್ಟಡವಾಗಲಿ, ರಸ್ತೆಯಾಗಲಿ, ಕೆರೆ ಕುಂಟೆ ನಿರ್ಮಾಣ ಮಾಡುವುದಾಗಲಿ, ಯಾವುದನ್ನು ಮಾಡಬೇಕಾದರೂ ಅವರು ಎಸ್.ಆರ್. ರೇಟ್ ಎಂದು ಬಿಲ್ ತಯಾರು ಮಾಡಬೇಕಾಗಿರುತ್ತದೆ. ಸುಮಾರು ಒಂದೂವರೆ ರೂಪಾಯಿನಿಂದ ಮೂರು ರೂಪಾಯಿಗಳವರೆಗೆ ಬೆಲೆ ನಿಗದಿ ಮಾಡಿರುವುದರಿಂದ ಅಪಾರ ಹಣ ಸೋರಿಕೆಯಾಗುತ್ತಿದೆ. ಇದನ್ನು ತಾವು ಗಮನಿಸಬೇಕು.

ಮಾನ್ಯ ಅಧ್ಯಕ್ಷರೇ, ಈ ಇಲಾಖೆಯನ್ನು ಇತ್ತೀಚೆಗೆ ಮೂರು ಮುಖ್ಯ ವಿಭಾಗಗಳಾಗಿ ವಿಂಗಡಣೆ ಮಾಡಿದ್ದಾರೆ. ಒಂದು ರಸ್ತೆ, ಸೇತುವೆ, ಕಟ್ಟಡ ಅನಂತರ ಸಣ್ಣ ನೀರಾವರಿ ಯೋಜನೆ, ಮಧ್ಯಮ ಹಾಗೂ ಭಾರಿ ನೀರಾವರಿ ಯೋಜನೆಗಳೆಂದು ಮೂರು ವಿಭಾಗಗಳಾಗಿ ಮಾಡಲಾಗಿದೆ. ಈ ಮೂರು ವಿಭಾಗಗಳಿಗೂ ರಾಜ್ಯದ ಬೊಕ್ಕಸದ ಬಹುಪಾಲು ಹಣವನ್ನು ಖರ್ಚು ಮಾಡುತ್ತಿದ್ದಾರೆಂದು ನಾನು ಭಾವಿಸಿದ್ದೇನೆ, ಆದರೆ ಖರ್ಚಾಗುವ ಹಣ ಎಷ್ಟರಮಟ್ಟಿಗೆ ದುರುಪಯೋಗವಾಗುತ್ತಿದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಮೈಸೂರಿನಲ್ಲಿ ಗೃಹ ನಿರ್ಮಾಣ ಮಂಡಲಿಯವರು ಕಟ್ಟಿರ ತಕ್ಕಂಥ ಒಂದು ಕಟ್ಟಡ ಕುಸಿದು ಬಿದ್ದು ಹೋಯಿತು ಎಂದರೆ ಈ ಇಲಾಖೆಯಲ್ಲಿ ನಿಜವಾಗಿಯೂ ಪ್ರಾಮಾಣಿಕತೆ, ಧಕ್ಷತೆ ಕಡಿಮೆಯಾಗಿಲ್ಲವೇ ಎನ್ನುವ ಶಂಕೆ ಬರುತ್ತದೆ. ಅದಕ್ಕೆ ನಾವು ಕೆಲವರನ್ನು ಹೊಣೆಗಾರರನ್ನಾಗಿ ಮಾಡಿದರೆ ಬೊಕ್ಕಸಕ್ಕೆ ಪೋಲಾಗುತ್ತಿರುವ ಹಣವನ್ನು ತಡೆಗಟ್ಟಬಹುದು ಮತ್ತು ಧಕ್ಷತೆಯನ್ನೂ ಕೂಡ ಹೆಚ್ಚು ಮಾಡಬಹುದು. ಆದ್ದರಿಂದ ಮೊದಲನೆಯದಾಗಿ ಇಲಾಖೆಯಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸತಕ್ಕಂಥ ಹೊಸ ಚಿಂತನೆಯನ್ನು ಮಾಡಿ ಅದರಿಂದ ಒಂದು ವೈಶಿಷ್ಟತೆ ಮೂಡಿಬಂದರೆ ಮಾತ್ರ ಈ ಒಂದು ಇಲಾಖೆಯನ್ನು ಧೃಢಕಾಯವಾಗಿ ಜನತೆಗೆ ಮಾಡಬೇಕಾದಂಥ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಸುಮಾರು ನೂರಕ್ಕೆ ಎಂಭತ್ತರಷ್ಟು ಜನ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಭಿಸಿದ್ದಾರೆ. ಅವರಿಗೆ ಕೃಷಿಗೆ ಬೇಕಾದಂಥ ಮೂಲ ಅವಶ್ಯಕತೆ ಏನಿದೆ, ಅದು ವರ್ಷ ವರ್ಷ ಕಡಿಮೆಯಾಗುತ್ತಿದೆ. ನೀರಾವರಿ ಸೌಲಭ್ಯಗಳನ್ನು ಹೆಚ್ಚಾಗಿ ಮಾಡಬೇಕಾದುದು ಈ ಇಲಾಖೆಯ ಮುಖ್ಯ ಕರ್ತವ್ಯ. ಆದಾಗ್ಯೂ, ನಾವು ಬೇರೆ ಬೇರೆ ಪ್ರಮಾಣದ ಬಿಲ್ಡಿಂಗ್ಸ್ ರಸ್ತೆ, ಸೇತುವೆ ನಿರ್ಮಾಣ ಮಾಡುತ್ತೇವೆ ಎಂಬುದನ್ನು ನೋಡಿದರೆ ಒಂದು ಗಾದೆಯ ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. '' ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು '' ಎಂಬಂತಾಗಿದೆ. ಪ್ರಮುಖವಾಗಿ ನಮಗೆ ಹೊಟ್ಟೆ ತುಂಬಿದ ನಂತರವೇ ಇತರೇ ಅವಶ್ಯಕತೆಗಳಿಗೆ ಗಮನಕೊಡಬೇಕಾದುದು ಅವಶ್ಯ. ನೂರಕ್ಕೆ ಎಂಬತ್ತರಷ್ಟು ಕೃಷಿಕರು ಇರುವ ಭಾರತ ದೇಶದಲ್ಲಿ, ಇವರು ಸಂತೃಪ್ತಿಯಿಂದ ಜೀವನ ನಡೆಸಿ ಚೆಂದವಾದ ರಾಷ್ಟ್ರಪ್ರಜೆಗಳು ಆಗಬೇಕಾದರೆ ಅವರಿಗೆ ಅತ್ಯಂತ ಮುಖ್ಯವಾಗಿ ಬೇಕಾಗಿರತಕ್ಕಂಥದು ನೀರಾವರಿ ಕಾಮಗಾರಿಗಳನ್ನು ಹೆಚ್ಚು ಹೆಚ್ಚಾಗಿ ಈ ಇಲಾಖೆಯಿಂದ ಕೈಗೊಳ್ಳಬೇಕು. ಅದನ್ನು ಮಾಡತಕ್ಕಂಥ ಧೃಢಸಂಕಲ್ಪವನ್ನು ಸಂಬಂಧಪಟ್ಟ ಮಂತ್ರಿಗಳು ಮಾಡಬೇಕು. ಹಾಗಾದರೆ ಈ ಇಲಾಖೆಯಲ್ಲಿ ಪ್ರಗತಿ ಆಗಿಲ್ಲವೇ ಎಂಬ ಪ್ರಶ್ನೆ ನಮಗೆ ಎದುರಾಗುತ್ತದೆ. ಪ್ರಗತಿ ಆಗಿದೆ. ಕಳೆದ ೩೮ ವರ್ಷಗಳ ಇತಿಹಾಸವನ್ನು ನಾವು ತೆಗೆದುಕೊಂಡಿದ್ದು ನೋಡಿದರೆ, ಕೇವಲ ೧೮ ಪರ್ಸೆಂಟ್‌ನಷ್ಟು ನೀರಾವರಿಯನ್ನು ನಾವು ಮಾಡಿಕೊಂಡಿದ್ದೇವೆ. ನೆರೆರಾಜ್ಯಗಳಿಗೆ ಇದನ್ನು ಹೋಲಿಸಿದರೆ ಶೇಕಡ ೫೮ರಷ್ಟು ಭಾಗ ನಾವು ಹಿಂದುಳಿದಿದ್ದೇವೆ. ಇದನ್ನು ನೋಡಿದರೆ ನಾವು ವ್ಯಸನ ಪಡಬೇಕಾಗುತ್ತದೆ. ಪಶ್ಚಿಮ ಘಟ್ಟಗಳ ನದಿಗಳಲ್ಲಿ ಹರಿದುಹೋಗತಕ್ಕಂಥ ನೀರನ್ನು ಪೂರ್ಣಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ ಎನ್ನುವುದು ನಿಜವಾಗಿಯೂ ಕಳವಳಕಾರಿಯಾದ ಪ್ರಸಂಗ. ಈ ನದಿಗಳ ಪೂರ್ಣ ಪ್ರಯೋಜನ ಪಡೆಯಲಿಕ್ಕೆ ಏಕೆ ಹೋರಾಟ ಮಾಡಿಲ್ಲ ? ಈ ದಿಕ್ಕಿನಲ್ಲಿ ಯಾವುದೇ ಯೋಚನೆ ಮಾಡಿಲ್ಲವೆನ್ನುವುದು ತುಂಬಾ ವ್ಯಸನಕರವಾದ ಸಂಗತಿಯೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕದ ಹಿತರಕ್ಷಣೆ ಸಲುವಾಗಿ ನೀರಾವರಿ ಪ್ರಯೋಜನ ಪಡೆಯುವಲ್ಲಿ ತಾವು ಎಂತಹ ಹೋರಾಟಕ್ಕೂ ಸಿದ್ಧ ಎನ್ನುವ ಮಾತನ್ನು ಭರವಸೆಯನ್ನು ಕೊಟ್ಟಿದ್ದಾರೆ ನಿಜವಾಗಿಯೂ ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು ಕೊನೆಗೆ ಈ ದುರ್ದಿನಗಳಲ್ಲಾದರೂ ಈ ತೀರ್ಮಾನ ಮಾಡಿದ್ದಾರೆ ಅದಕ್ಕೆ ಅವರಿಗೆ ನನ್ನ ಅಭಿನಂದನೆಗಳನ್ನು ಅರ್ಪಿಸಬಯಸುತ್ತೇನೆ. ಇವೊತ್ತು ಪತ್ರಿಕೆಯಲ್ಲಿ ನೋಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ತೆಲುಗು ಗಂಗಾ ಯೋಜನೆ ಬಗ್ಗೆ ಈ ಸದನದಲ್ಲಿ ನೀಡಿದ ಹೇಳಿಕೆಗೆ ಬದಲಾಗಿ ಬೇರೊಂದು ಹೇಳಿಕೆಯನ್ನು ಹೈದರಾಬಾದಿನಲ್ಲಿ ಕೊಟ್ಟಿದ್ದಾರೆ ಎಂದು ವರದಿಯಾಗಿದೆ. ಆದ್ದರಿಂದ ಈ ರೀತಿಯ ದ್ವಂದಾರ್ಥ ಉಂಟುಮಾಡತಕ್ಕ ಹೇಳಿಕೆ ಕೊಡುವುದನ್ನು ತಾವು ಸಾಕುಮಾಡಿ, ರಾಜ್ಯದ ಹಿತದೃಷ್ಟಿಯನ್ನು ಇಟ್ಟುಕೊಂಡು ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿರುವ ಜನತೆಗೆ ನೀರಿನ

ಪೂರ್ಣ ಸವಲತ್ತನ್ನು ಕೊಡುವ ಯೋಜನೆಗಳನ್ನು ಕೈಗೊಳ್ಳಬೇಕೆಂದು ರೈತರ ಪರವಾಗಿ ಸನ್ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಈ ಪಶ್ಚಿಮ ಘಟ್ಟಗಳಲ್ಲಿ ಹರಿಯತಕ್ಕಂಥ ನದಿಗಳ ನೀರಿನ ಪ್ರಯೋಜನವನ್ನು ಕುರಿತು ಈಗಾಗಲೇ ಬೇರೆಯದ್ದೇ ಆದ ಒಂದು ಸಮಿತಿಯನ್ನು ನೇಮಿಸಿ ಅಲ್ಲಿ ಸಂಸತ್ ಸದಸ್ಯರು, ಕೆಲವು ವಿಧಾನಸಭಾಸದಸ್ಯರುಗಳು ಮಾಡಿದಂಥ ಸಲಹೆ, ಸೂಚನೆಗಳನ್ನು ಕೊಟ್ಟಿರುವ ಒಕ್ಕಣೆ ಬಹುಶಃ ಮಾನ್ಯ ಸಚಿವರಿಗೆ ಈಗಾಗಲೇ ಸೇರಿರಬಹುದು. ೧,೩೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೩೩.೫ ಲಕ್ಷ ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸುವ ಒಟ್ಟು ಎಂಟು ಯೋಜನೆಗಳಿವೆ. ಯಾವ ಯಾವ ಮೂಲಗಳಿಂದ ಈ ಯೋಜನೆ ಸಾಧ್ಯ ಎನ್ನತಕ್ಕಂಥಾದ್ದನ್ನು ಪೂರ್ಣ ಬುದ್ಧಿಯಿಂದ ಯೋಚನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ವೈಶಿಷ್ಟ್ಯವೆಂದರೆ ಇದು ಅತ್ಯಂತ ವಿನೂತನವಾದುದು. ಮೂರು ಮತ್ತು ಫಲಗಳನ್ನು ನೀಡತಕ್ಕಂಥ ಯೋಜನೆ ಮೊದಲಾಗಿ ನಮ್ಮ ಕರಾವಳಿ ಪ್ರದೇಶದಲ್ಲಿ ಏಕಾಏಕಿ ನೆರೆಬಂದು ಸಂಕಷ್ಟಕ್ಕೆ ಎಡೆ ಮಾಡಿಕೊಡುವುದನ್ನು ಇದು ತಡೆಗಟ್ಟುತ್ತದೆ ಆಮೇಲೆ ವಿದ್ಯುಚ್ಛಕ್ತಿ ಅಭಾವವನ್ನು ನಾವು ಎದುರಿಸುತ್ತಿದ್ದೇವೆ, ಈ ಯೋಜನೆಯಿಂದ ಈ ಕೊರತೆಯನ್ನು ನೀಗಿಸಬಹುದು. ಅನೇಕ ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸ ಬಹುದು ಎನ್ನುವುದು ಈ ಯೋಜನೆಯಲ್ಲಿ ಇದೆ. ಮೂರನೆಯದಾಗಿ ನಮಗೆ ಬೇಕಾದಷ್ಟು ನೀರು ಪಡೆಯಬಹುದು. ಈ ಮೂರು ವಿನೂತನವಾದ ಯೋಜನೆಗಳು ಇದರಲ್ಲಿ ಸೇರಿವೆ. ಇದನ್ನು ಕಾರ್ಯಗತ ಮಾಡಿದರೆ ನಮಗೆ ಬೇಕಾದಂಥ ವಿದ್ಯುತ್ ಪಡೆಯಬಹುದು, ವ್ಯವಸಾಯಕ್ಕೆ ಬೇಕಾದ ನೀರನ್ನು ಪಡೆಯಬಹುದು ಮತ್ತು ನೆರೆ ಹಾವಳಿಯನ್ನು ತಡೆಗಟ್ಟಬಹುದು. ಇವು ಮೂರು ಕೂಡ ಈ ಯೋಜನೆಯಲ್ಲಿ ಇರುವುದರಿಂದ ಇದು ಬಹಳ ಮುಖ್ಯವಾದ ಯೋಜನೆ, ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹೆಚ್ಚಿನ ಮನಸ್ಸನ್ನು ಮಾಡಬೇಕೆಂದು ಹೇಳಿ ಸಂಬಂಧಪಟ್ಟ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ತದನಂತರ, ಇವೊತ್ತು ರೈತನ ಜಮೀನು ಒಂದು ನದಿ ಅಥವಾ ಹೊಳೆಯ ಪಕ್ಕದಲ್ಲಿ ಇದ್ದು, ಜಮೀನಿನಲ್ಲಿ ಒಂದು ಬಾವಿಯನ್ನು ತೋಡಿಕೊಂಡರೆ ಅದಕ್ಕೆ ವಿದ್ಯುತ್‌ಚ್ಛಕ್ತಿ ಪಡೆಯಬೇಕಾದರೆ ಪಂಪ್ ಅಳವಡಿಸಲಿಕ್ಕೆ ಎನ್.ಒ.ಸಿ. ಪಡೆಯುವಾಗ ಬಹಳ ಸಂಕಷ್ಟಕ್ಕೆ ಗುರಿಯಾಗಬೇಕಾದ ಪರಿಸ್ಥಿತಿ ಇದೆ. ಕೆಲವರಿಗೆ ಬಹಳ ಸುಲಭವಾಗಿ ಪರವಾನಗಿ ದೊರೆಯುತ್ತದೆ. ಆದರೆ ಬಡಬಗ್ಗರು ಅವರ ಜಮೀನಿನಲ್ಲಿ ಎನ್.ಒ.ಸಿ. ಪಡೆಯಬೇಕಾದರೆ, ಕಾನೂನನ್ನು ಮುಂದಿಟ್ಟುಕೊಂಡು ವಿಳಂಬ ಮಾಡುತ್ತಿರುವುದು ಸರಿಯಲ್ಲ. ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ ಇದು ಬಹಳವಾಗಿ ನಡೆಯುತ್ತಿದೆ. ಮುಖ್ಯ ಅಭಿಯಂತರರು ಅವರ ಮಟ್ಟಿನವರೆಗೂ ಬರಬೇಕಾದ ಪ್ರಸಂಗ ಇರುವುದು ಕಳವಳಕಾರಿಯಾದುದು. ಇದು ತಿದ್ದುಪಡಿಯಾಗಬೇಕು ಮತ್ತು ಬಹಳ ಸರಳವಾದ ರೀತಿಯಲ್ಲಿ ನೇರವಾಗಿ ರೈತರ ಕೈಗೆ ಸಿಗುವಂತಹ ಹೊಸ ನೀತಿಯನ್ನು ಎನ್.ಒ.ಸಿ. ಕೊಡುವಲ್ಲಿ ಅನುಸರಿಸಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇದಾದಮೇಲೆ ಈ ಇಲಾಖೆಯಲ್ಲಿ ಬಹುತೇಕ ಕಾಮಗಾರಿಗಳು ಕಾಂಟ್ರಾಕ್ಟ್ ವ್ಯವಸ್ಥೆ ಮೇಲೆ ನಡೆಯುವುದರಿಂದ, ಇದರಿಂದ ಎಷ್ಟು ಹಣ ಪೋಲಾಗುತ್ತದೆ ಎಂದು ವಿದ್ವಾಂಸರು ಯೋಚನೆ ಮಾಡಿದ್ದಾರೆ. ಇವೊತ್ತು ಬಹುತೇಕ ಕಂಟ್ರಾಕ್ಟುದಾರರು ಕೆಲವು ಅಧಿಕಾರಿಗಳಿಂದಲೇ ಬಡ್ಡಿ ರೂಪದಲ್ಲಿ ಹಣ ಪಡೆದುಕೊಂಡು ಕೆಲಸ ನಡೆಸುತ್ತಿದ್ದಾರೆ. ಚಿಕ್ಕ ಕೆರೆಯ ಒಬ್ಬ ಕಂಟ್ರಾಕ್ಟುದಾರರ ಸ್ಥಿತಿ ನೋಡಿದರೆ ಕಥೆ ಕೇಳಿದರೆ ಹಣ ಬರುವುದರಲ್ಲಿ ಅಧಿಕಾರಿಗಳಿಗೆ ಇಂತಿಷ್ಟು ಅಂಶ ಕೊಡಬೇಕೆಂದು ಹೇಳಲಾಗುತ್ತದೆ. ಇದನ್ನು ಪ್ರತಿಯೊಬ್ಬ ಕಂಟ್ರಾಕ್ಟುದಾರರೂ ಹೇಳುತ್ತಿದ್ದಾರೆ. ಗಂಭೀರವಾಗಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ತದನಂತರ ಈ ಇಲಾಖೆ ಬಹುತೇಕ ಹೆಚ್ಚಿನ ಫಲಕಾರಿಯಾದ, ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇರುವುದಕ್ಕೆ ಮತ್ತೊಂದು ಕಾರಣ ಇಲ್ಲಿ ಸೋರಿಹೋಗತಕ್ಕಂಥ ಹಣ ಹಣ ಸೋರಿಕೆಯಾಗುವುದನ್ನು ತಡೆಗಟ್ಟದೆ ಪರಿಣಾಮಕಾರಿಯಾಗಿ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳಬಯಸುತ್ತೇನೆ. ಇಲ್ಲಿ ಸೋರಿಹೋಗತಕ್ಕಂಥ ಹಣ ಎಲ್ಲಿ ಕೇಂದ್ರೀಕೃತವಾಗುತ್ತದೆ ಎಂದರೆ, ಇತ್ತೀಚೆಗೆ ಕೆಲವು ಅಧಿಕಾರಿಗಳ ಮನೆಗಳನ್ನು ರೈಡ್ ಮಾಡಿದಾಗ ಎಷ್ಟು ಪ್ರಮಾಣದ ಹಣ ಪತ್ತೆಯಾಯಿತು ಎನ್ನುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ ಇವನ್ನು ತಡೆಗಟ್ಟುವ ಕಡೆಗೆ ನಾವು ಮನಸ್ಸು ಕೊಡಬೇಕು. ಇದನ್ನು ಮಾಡದೆ ಹಾಗೆಯೇ ಬಿಟ್ಟರೆ ಹುಚ್ಚು ಕುದುರೆ ಅಡ್ಡಾದಿಡ್ಡಿ ಓಡಿದ ಹಾಗೆ, ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಮಾನ್ಯ

ಸಚಿವರು ಈ ಎಲ್ಲಾ ವಿಷಯಗಳ ಕಡೆಗೆ ಗಮನ ಕೊಡಬೇಕೆಂದು ಹೇಳಿ, ಲೋಕೋಪಯೋಗಿ ಬೇಡಿಕೆಗಳನ್ನು ಬೆಂಬಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ದ್ಯಾವರಪ್ಪ (ಮಾಲೂರು).—ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ನಮ್ಮ ಸ್ನೇಹಿತರು ಸರ್ಕಾರದ ಮೇಲೆ ಆರೋಪ ಮಾಡುತ್ತಾ, ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಿಲ್ಲ ಮತ್ತು ಸರಿಯಾದ ರೀತಿಯಲ್ಲಿ ಹಣವನ್ನು ವಿನಿಯೋಗಿಸಿಲ್ಲ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದ್ದಾರೆ. ಅವರು ಆರೋಪಕ್ಕೋಸ್ಕರ ಇದನ್ನು ಮಾಡಿದ್ದಾರೆಯೋ ಹೊರತು, ಬೇರೇನೂ ಅಲ್ಲ. ನಿಜಸ್ಥಿತಿ ಅವರಿಗೆ ಗೊತ್ತಿದೆ. ಆದರೂ ಸಹ ಅದನ್ನು ಮರೆ ಮಾಚಿ ಸರ್ಕಾರದ ಮೇಲೆ ಆರೋಪವನ್ನು ಹೊರಿಸುತ್ತೇವೆಂದು ಹೇಳಿದರೆ, ಪ್ರಯೋಜನವಾಗಲಾರದು. ನಮ್ಮ ಸರ್ಕಾರ, ಅದರಲ್ಲೂ ಈ ಒಂದು ಇಲಾಖೆಯ ಕೆಲಸ ಕಾರ್ಯಗಳನ್ನು ಅವಲೋಕಿಸಿ ನೋಡಿದಲ್ಲಿ, ನಮ್ಮ ಸರ್ಕಾರಕ್ಕೆ ಶಹಬಾಸ್‌ಗಿರಿ ಕೊಡಬೇಕಾದಂಥಾದ್ದು ಅವರ ಕರ್ತವ್ಯ. ಅವರು ಕೊಡದೇ ಇದ್ದರೂ ಚಿಂತೆಯಿಲ್ಲ. ಆರೋಪ ಮಾಡದೆ ಇದ್ದರೆ ಸಾಕೆಂದು ನಾವು ತಿಳಿದುಕೊಂಡಿದ್ದೇವೆ. ನಮ್ಮ ಸರ್ಕಾರ ಸುಮಾರು ಎರಡು ವರ್ಷಗಳಿಂದ ಕೆಲಸ ಕಾರ್ಯ ಗಳನ್ನು ನಡೆಸುತ್ತಿದೆ. ಅದರ ಹಿಂದೆ ಇದ್ದಂತಹ ಸರ್ಕಾರಗಳು ಏನು ಕೆಲಸ ಮಾಡಿವೆ ಎನ್ನುವುದನ್ನು ಒಂದು ಅಚ್ಚು ಹಾಕಿರುವಂತಹ ಪುಸ್ತಕವನ್ನು ನಮ್ಮ ಸರ್ಕಾರದವರು ಅವರ ಮುಂದಿಟ್ಟಿದ್ದಾರೆ. ಅದರಲ್ಲಿ ಕೆಲವು ವಿಷಯಗಳನ್ನು ಅವಲೋಕಿಸಿ ನೋಡಿದಲ್ಲಿ, ಹಿಂದೆ ಮೂರು ವರ್ಷದಿಂದ ಏನು ಕೆಲಸಗಳು ನಡೆದಿವೆ, ಈ ಎರಡು ವರ್ಷದಿಂದ ಏನು ಕೆಲಸಗಳು ನಡೆದಿವೆ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಈ ಸಭೆಯ ಗಮನಕ್ಕೆ ನಾನು ತರಬೇಕೆಂದು ಇಷ್ಟಪಡುತ್ತೇನೆ. ೧೯೮೦–೮೧, ೮೧–೮೨, ೮೨–೮೩ರಲ್ಲಿ ಒಂದು ಅಪ್ರೂವ್ಡ್ ಔಟ್‌ಲೇಯಲ್ಲಿ ೧೩,೭೧,೯೨,೦೦೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾವು ಎರಡು ವರ್ಷಗಳಲ್ಲಿ ೧೩೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅವರು ಮೂರು ವರ್ಷದಲ್ಲಿ ಖರ್ಚುಮಾಡಿದ್ದನ್ನು ನಾವು ಎರಡು ವರ್ಷದಲ್ಲಿ ಖರ್ಚು ಮಾಡಿದ್ದೇವೆ. ಇರಿಗೇಷನ್ ಮೇಲೆ ಅವರು ಮೂರು ವರ್ಷಗಳಲ್ಲಿ ಖರ್ಚು ಮಾಡಿದ್ದು ೮೫ ಕೋಟಿ ರೂಪಾಯಿಗಳು ನಾವು ಎರಡುವರ್ಷದಲ್ಲಿ ಖರ್ಚು ಮಾಡಿದ್ದು ೧೧೯ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರ ತನ್ನ ಅಧಿಕಾರಿಗಳಿಗೆ ಡಿ. ಎ. ಹೆಚ್ಚಿಸಿದಾಗ ನಾವೂ ಸಹ ಹೆಚ್ಚಿಸಿದ್ದೇವೆ. ಅವರು ಮೂರು ವರ್ಷದಲ್ಲಿ ಡಿ. ಎ. ಗೆ. ಖರ್ಚು ಮಾಡಿದಂತಹ ಹಣ ೨೮೧ ಕೋಟಿ ರೂಪಾಯಿಗಳು ನಾವು ಎರಡು ವರ್ಷದಲ್ಲಿ ಡಿ.ಎ.ಗೆ ಖರ್ಚು ಮಾಡಿದ್ದು ೪೮೭ ಕೋಟಿ ರೂಪಾಯಿಗಳು ಅವರಿಗಿಂತ ಹೆಚ್ಚಿನ ಹಣವನ್ನು ನಾವು ಖರ್ಚು ಮಾಡಬೇಕಾಯಿತು ಎನ್ನತಕ್ಕಂತಹ ಸಂದರ್ಭವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಹಾಗೂ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದವರು ಹಾಕಿಕೊಂಡು ಹೆಚ್ಚಿನ ಹಣವನ್ನು ಖರ್ಚು ಮಾಡಿರುವುದು ನಿಜ. ಹೆಚ್ಚು ಕೆಲಸ ಕಾರ್ಯಗಳನ್ನು ನಡೆಸಬೇಕೆಂದರೆ, ಹೆಚ್ಚು ಹಣ ಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ನಮ್ಮ ಭಾಗಕ್ಕೆ ಬರಬೇಕಾದಂತಹ ಹಣ ಏನಿದೆ, ಅದನ್ನು ನಮಗೆ ಕೊಟ್ಟಿಲ್ಲ. ಕಾನೂನು ಪ್ರಕಾರ, ಕಾನ್ಸ್ಟಿಟ್ಯೂಷನ್ ಪ್ರಕಾರ ನಮಗೆ ಬರತಕ್ಕಂತಹ ಹೆಚ್ಚಿನ ಹಣ ನಮಗೇ ಬಾರದೇ ಇರತಕ್ಕಂಥಾದ್ದು ತೊಂದರೆಯಾಗಿದೆ. ಕಾನ್ಸಿಟ್ಯೂಷನ್ ಆರ್ಟಿಕಲ್ ೨೭೫ರ ಪ್ರಕಾರ ನಮಗೆ ಕೇಂದ್ರ ಸರ್ಕಾರದಿಂದ ಯಾವ ಹಣ ಬರಬೇಕಾಗಿತ್ತೋ, ಆ ಹಣ ನಮಗೆ ಬಂದಿಲ್ಲ. ಆದರೆ, ಬೇರೆ ಸ್ಟೇಟ್‌ಗಳಿಗೆ, ಬೇರೆ ರಾಜ್ಯಗಳಿಗೆ ೪೩ ಕೋಟಿ, ೪೪೦ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಟ್ಟಿದ್ದಾರೆ. ನಾವು ಮಾಡಿದ ಅನ್ಯಾಯ ಅಥವಾ ಪಾಪವಾದರೂ ಏನು ? ನಮಗೆ ೨೭೫ರ ಪ್ರಕಾರ ಕೇಂದ್ರ ಹಣ ಕೊಟ್ಟಿಲ್ಲ. ನಮಗೆ ಬರಬೇಕಾದಂತಹ ಹಣ ಬಾರದೇ ಇದ್ದುದರಿಂದ ನಮಗೆ ಹಣದ ಸವಲತ್ತು ಕಡಿಮೆಯಾಗಿದೆ. ಇದರಿಂದಾಗಿ ಕೆಲವು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ ಆದರೆ ಕೆಲಸ ಕಾರ್ಯಗಳನ್ನು ಹೆಚ್ಚಿನ ರೀತಿಯಲ್ಲಿಯೇ ಮಾಡಿದ್ದೇವೆ. ಮಾಡಿರತಕ್ಕಂತಹ ಕೆಲಸಕಾರ್ಯಗಳಲ್ಲಿ ಒಂದೆರಡನ್ನು ಈ ಸದನದ ಗಮನಕ್ಕೆ ತಂದರೆ, ನಮ್ಮ ಸ್ನೇಹಿತರು ಒಪ್ಪುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ಅದರಲ್ಲೂ ಈ ಒಂದು ಇಲಾಖೆಯಲ್ಲಿ ಅನೇಕ ಕೆಲಸ ಕಾರ್ಯಗಳನ್ನು ನಮ್ಮ ಸರ್ಕಾರ ಮಾಡಿದೆ. ಎಲ್ಲಾ ಕೆಲಸಗಳನ್ನು ಮಾಡಿದೆಯೆಂದು ಹೇಳಿದರೆ, ಅದು ಜಾಸ್ತಿಯಾಗುತ್ತದೆ. ಈಗ ಈ ಒಂದು ಇಲಾಖೆಯ ಮುಖಾಂತರವಾಗಿ ನಮ್ಮ ಸರ್ಕಾರದವರು ಎಷ್ಟು ಕೆಲಸಗಳನ್ನು ಮಾಡಿದ್ದಾರೆ, ಇನ್ನು ಮಾಡಬೇಕಾದ ಕೆಲಸಗಳೇನಿವೆ ಎಂಬುದನ್ನು ಮಾನ್ಯ ಅಧ್ಯಕ್ಷರ ಮುಖಾಂತರವಾಗಿ, ಮಾನ್ಯ ಮಂತ್ರಿಯವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಕೋಲಾರದಲ್ಲಿ ಬಹಳವಾಗಿ ಕ್ಷಾಮ ಪರಿಸ್ಥಿತಿ ಇದೆ. ನಾನು ಕೋಲಾರ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಜಿಲ್ಲೆಯಿಂದ ಬಂದಿರತಕ್ಕವನು. ಬೇರೆ ಜಿಲ್ಲೆಯಲ್ಲೂ ಕ್ಷಾಮ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಕೋಲಾರದಲ್ಲಿ ಹೆಚ್ಚಿನ ಕ್ಷಾಮ ಪರಿಸ್ಥಿತಿ ಇದೆ. ಅಲ್ಲಿನ ಜನರ ಜೀವನ ಅಸ್ತವ್ಯಸ್ತವಾಗಿದೆ. ಕುಡಿಯುವ ನೀರು ಇಲ್ಲ. ದನಕರುಗಳಿಗೆ ಮೇವು ಇಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಹೆಚ್ಚಿನ ಹಣವನ್ನು ಕೊಟ್ಟು, ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆ. ಆದರೆ, ಅದು ಸಾಕಾಗದು, ಇನ್ನು ಹೆಚ್ಚಿನ ಹಣವನ್ನು ಕೊಡಬೇಕು. ಇದರ ಬಗ್ಗೆ ನಮ್ಮ ಸರ್ಕಾರದವರು ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಹೆಚ್ಚು ಕೆರೆಗಳು ಇಲ್ಲ. ನಾಲೆ ಇಲ್ಲ. ಹಿಂದಿನ ಕೆರೆಗಳು ಇದ್ದರೂ, ಅವು ಮುಚ್ಚಿ ಹೋಗಿವೆ. ಇಂತಹ ಸಂದರ್ಭದಲ್ಲಿ ತಾವು ದೊಡ್ಡ ಮನಸ್ಸು ಮಾಡಿ, ಎಲ್ಲೆಲ್ಲಿ ಕೆರೆಗಳು ಮುಚ್ಚಿ ಹೋಗಿವೆಯೋ ಅಂತಹ ಕೆರೆಗಳ ಹೂಳು ತೆಗೆಸಬೇಕು. ಕಿತ್ತು ಹೋಗಿರ ತಕ್ಕಂತಹ ಕೆರೆಗಳನ್ನು ರಿಪೇರಿ ಮಾಡಿಸಬೇಕು. ನಿಂತ ನೀರು ಮುಂದಕ್ಕೆ ಹೋಗದ ರೀತಿಯಲ್ಲಿ ತಡೆಯಲು ಸರ್ಕಾರದವರು ಮನಸ್ಸು ಮಾಡಬೇಕು. ಹಾಗೆ ಮಾಡಿದರೆ, ಕೆರೆಗಳಲ್ಲಿ ನೀರು ನಿಲ್ಲುತ್ತದೆ. ಬಾವಿಗಳಲ್ಲಿ ಅಷ್ಟೋ ಇಷ್ಟೋ ನೀರು ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಈ ಕೆಲಸವನ್ನು ಮಾಡಿ ಕೊಡಬೇಕು. ಅಧಿಕಾರಿಗಳೂ ಸಹ ದೊಡ್ಡ ಮನಸ್ಸು ಮಾಡಿ, ನಮ್ಮ ಜಿಲ್ಲೆಯಲ್ಲಿ ಇಂತಹ ಕೆಲಸಕಾರ್ಯಗಳನ್ನು ಮಾಡಬೇಕು. ಹಳ್ಳ ಕೊಳ್ಳಗಳಲ್ಲಿ ನೀರು ನಿಲ್ಲುವುದಕ್ಕೆ ಸಹಕರಿಸಬೇಕೆಂದು ವಿನಂತಿಸುತ್ತೇನೆ. ನಮ್ಮ ಬಾವಿಯಲ್ಲಿ ೨೦ ಎಕರೆಗೆ ನೀರು ಹರಿಯುತ್ತಿದ್ದು, ಈಗ ಒಂದು ಎಕರೆಗೂ ನೀರು ಹರಿಯುತ್ತಿಲ್ಲ. ಇಂತಹ ಒಂದು ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ, ನಮ್ಮ ಜಿಲ್ಲೆಯಲ್ಲಿ ಬಂದಿದೆ. ನೀರಿನ ಅಭಾವ ಎಷ್ಟಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ ಇಂತಹ ಒಂದು ಸಂದರ್ಭ ನಮ್ಮ ಜಿಲ್ಲೆಯಲ್ಲಿ ಇರುವಾಗ ಸರ್ಕಾರದವರು ಸಾಧ್ಯವಾದಷ್ಟು ಮಟ್ಟಿಗೆ ಅನುಕೂಲ ಮಾಡಿ ನೀರು ನಿಲ್ಲುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಇನ್ನು ರಸ್ತೆಗಳ ವಿಚಾರ ಹೇಳಬೇಕೆಂದರೆ, ಇನ್ನೂ ಸ್ವಲ್ಪ ಕೆಲಸಗಳನ್ನು ಮಾಡಬೇಕಾಗಿದೆ. ಈಗ ಸರ್ಕಾರದವರು ಸಾವಿರಾರು ರೂಪಾಯಿಗಳ ಗ್ರಾಂಟನ್ನು ಕೊಟ್ಟು, ಅವನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ದುರಾದೃಷ್ಟವಶಾತ್ ಇದಕ್ಕೆ ಹಣದ ಕೊರತೆಯಿದೆಯೆಂದು ಕಾಣುತ್ತದೆ. ನಮ್ಮ ಮಂತ್ರಿಗಳು ಇದನ್ನು ಕೈಬಿಟ್ಟಿದ್ದಾರೆ ಇದನ್ನು ನಾನು ಒಂದೆರಡು ಸಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಅವರು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಆ ಕೆಲಸಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿ, ಆ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಮಾನ್ಯ ಮಂತ್ರಿವರ್ಯರಲ್ಲಿ ಅರಿಕೆ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ಎಸ್. ಶಿವನಂಜಪ್ಪ.— ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಈ ಇಲಾಖೆಯ ಮೇಲೆ ಮಾತನಾಡುವಾಗ ಮಾನ್ಯ ದೇವೇಗೌಡರವರು, ಈ ಕಡೆ ಕುಳಿತುಕೊಂಡು ಮಾತನಾಡಿದ್ದರು. ಅದನ್ನು ಜ್ಞಾಪಕ ಮಾಡಿಕೊಳ್ಳಿ ಎಂದು ಮೊದಲನೆಯದಾಗಿ ನಾನು ಅವರಿಗೆ ಮನವಿ ಮಾಡುತ್ತೇನೆ. ಟೀಕೆ ಮಾಡಿದರೆ, ಟೀಕೆ ಮಾಡುತ್ತಾರೆಂದು ಹೇಳುತ್ತಾರೆ. ಟೀಕೆ ಮಾಡಲಿಲ್ಲವೆಂದರೆ, ಏನೂ ಹೇಳಲಿಲ್ಲವೆಂದು ಹೇಳುತ್ತಾರೆ. ಮಾನ್ಯ ದೇವೇಗೌಡರವರು ಹೇಳಿದಂತಹ ಮಾತು ಆಗಾಗ್ಗೆ ನನಗೆ ಜ್ಞಾಪಕಕ್ಕೆ ಬರುತ್ತಿರುತ್ತದೆ. ಅವರು ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಟಿ ರೆಕಮೆಂಡೇಷನ್ ಬಗ್ಗೆ ಬಹಳ ಜೋರಾಗಿ ಹೇಳುತ್ತಿದ್ದರು. ಅವರು ಈ ಕಡೆ ಕುಳಿತಾಗ ಹೇಳಿದಂತಹ ಮಾತು, ನನಗೆ ನಿನ್ನೆ ಮಾತನಾಡಿದ ಹಾಗೆ ಇದೆ. ತಾವು ಮಂತ್ರಿಮಂಡಲದಲ್ಲಿ ಈಗ ಜವಾಬ್ದಾರಿ ಸ್ಥಾನದಲ್ಲಿರುವುದರಿಂದ, ನಿಮ್ಮ ಜವಾಬ್ದಾರಿ ಬಹಳಷ್ಟು ಇರುವುದರಿಂದ, ಮತ್ತು ನಮಗೆ ನಿಮ್ಮಲ್ಲಿ ಹೆಚ್ಚಿನ ವಿಶ್ವಾಸವಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅಡ್ಮಿನಿಸ್ಟ್ರೇಟಿವ್ ಕಮಿಟಿ ರಿಫಾರ್ಮ್ಸ್ ಕಮಿಟಿಯ ರೆಕಮೆಂಡೇಷನ್ಸ್‌ಗಳನ್ನು ತಾವು ಮಂತ್ರಿಗಳಾದ ಮೇಲೆ ಎಲ್ಲಿ ಅಪ್ಲೈ ಮಾಡಿದ್ದೀರಿ ?

೪-೦೦ ಪಿ. ಎಂ.

ಹಣ ಇನ್ನೂ ನಿಮಗೆ ಬರಬೇಕು, ಬಂದ ಹಣವನ್ನು ನೀವು ಖರ್ಚು ಮಾಡಬೇಕು ಎನ್ನುವ ಪ್ರಶ್ನೆ ಇದಲ್ಲ. ರಿಸೋರ್ಸಸ್ ಎಲ್ಲಿ ಇದೆ ? ಮೊಬಿಲೈಸೇಷನ್ ಹೇಗೆ ಮಾಡಬೇಕು ಎನ್ನತಕ್ಕ ವಿಚಾರವನ್ನು ನೀವು ಮನಸ್ಸಿಗೆ ಏಕೆ ತೆಗೆದುಕೊಳ್ಳಲಿಲ್ಲ ? ನಿಮ್ಮ ಮಂತ್ರಿಮಂಡಲದಲ್ಲಿ ಒಂದೆರಡು ಕಡಿಮೆ ಮಂತ್ರಿಗಳನ್ನು ತೆಗೆದುಕೊಂಡಿದ್ದರೆ ಅದರಲ್ಲೇ ೨ ಕೋಟಿ ರೂಪಾಯಿಗಳನ್ನು ಉಳಿಸಬಹುದಾಗಿತ್ತು. ಇದನ್ನು ಏಕೆ ಮಾಡಲಿಲ್ಲ ? ಮಾನ್ಯ ಹೆಗಡೆಯವರ ಮಂತ್ರಿಮಂಡಳ ಇಷ್ಟೇ ಇರಬೇಕೆಂದು ಏಕೆ ಹೇಳಲಿಲ್ಲ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವೆಂದು ಕಳಕಳಿಯಿಂದ ಕೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ, ಕೇಂದ್ರದ ಮೇಲೆ ಅಪಾದನೆಗಳನ್ನು ಹೊರಿಸತಕ್ಕ ಹವ್ಯಾಸ ಜಾಸ್ತಿಯಾಗಿದೆ. ಸನ್ಮಾನ್ಯ ದೇವೇಗೌಡರು ಇವೊತ್ತಿನ ದಿವಸ ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಯಲ್ಲಿ ಹರಿಜನರಿಗೆ ಬಾವಿ ತೋಡಿಸಲಿಕ್ಕೆ ಏನಾದರೂ ಹಣವನ್ನು ನಿಮ್ಮ ಡಿಪಾರ್ಟ್‌ಮೆಂಟಿನಿಂದ ಕೊಟ್ಟಿದ್ದೀರಾ ಎಂಬುದನ್ನು ದಯವಿಟ್ಟು ಹೇಳಿ. ಈ ಮೂರು ವರ್ಷಗಳಿಂದ ಕೇಂದ್ರದವರು ಎಷ್ಟು ಹಣವನ್ನು ನಿಮಗೆ ಕೊಟ್ಟಿದಾರೆ? ಅದಕ್ಕೂ ಮೊದಲು ಕಾಂಗ್ರೆಸ್‌ನವರು ಸರ್ಕಾರ ನಡೆಸುತ್ತಿದಾಗ ಕೇಂದ್ರದವರು ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಿ. ಕೇಂದ್ರದವರು ಹಣವನ್ನು ಕೊಟ್ಟಿಲ್ಲ ಕೊಟ್ಟಿಲ್ಲ ಎಂದರೆ ಏನು ಅರ್ಥ? ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಕೊಡುವಷ್ಟನ್ನೂ ಕೊಟ್ಟಿದ್ದಾರೆ. ಶ್ರೀಮಾನ್ ಜನಾರ್ಧನಪೂಜಾರಿಯವರು ಬಂದು ರಾಜ್ಯ ಸರ್ಕಾರಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಪಟ್ಟಿ ಮಾಡಿ ಹೇಳಿದರು. ಆ ಪಟ್ಟಿಯನ್ನು ನೋಡಿದಾಗ ೨–೩ ಪರ್‌ಸೆಂಟ್ ಹೆಚ್ಚು ಹಣವನ್ನು ಹೆಚ್ಚು ಹಣವನ್ನು ಕರ್ನಾಟಕ ರಾಜ್ಯಕ್ಕೆ ಜಾಸ್ತಿ ಕೊಟ್ಟಿದ್ದಾರೆ. ಹೀಗಿದ್ದರೂ ನೀವು ಕೇಂದ್ರವನ್ನು ಬಯ್ಯುತ್ತಿದ್ದೀರಿ. ನೀವು ಬಯ್ಯುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ರಾಜ್ಯಕ್ಕೆ ಇದುವರೆಗೆ ಕೊಟ್ಟ ಹಣವನ್ನು ಯಾವ ಇರಿಗೇಷನ್ ಕೆಲಸಕ್ಕೆ ಉಪಯೋಗಿಸಿದ್ದೀರಿ. ನಮ್ಮ ತುಮಕೂರು ಜಿಲ್ಲೆಯಲ್ಲಿ ಜನರ ಸ್ಥಿತಿ ಜೀವನ ಮರಣದ ಸ್ಥಿತಿಯಾಗಿದೆ. ಮಾನ್ಯ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದರು. ಆ ಕಮಿಟಿಯವರು ಕೂಡ ಒಂದು ಪ್ರಾಜೆಕ್ಟ್ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಿಮಗೆ ಏನು ಹಕ್ಕು ಬಾಧ್ಯತೆಗಳು ಇವೆ ಎಂಬ ಬಗ್ಗೆ ಎಂದಾದರು ಯೋಚನೆ ಮಾಡಿದ್ದೀರಾ? ನಿಮಗೆ ಮನಸ್ಸು ಇದ್ದಿದ್ದರೆ ಹೇಮಾವತಿ ನದಿಯ ನೀರನ್ನು ನಮ್ಮ ತುಮಕೂರು ಜಿಲ್ಲೆಗೆ ಕೊಡಬಹುದಾಗಿತ್ತು. ಹೇಮಾವತಿ ನೀರನ್ನು ಬೇಕಾದರೆ ಕೋಲಾರದವರೆಗೂ ತೆಗೆದುಕೊಂಡು ಹೋಗಬಹುದಾಗಿತ್ತು. ಅದಕ್ಕೆ ನೀವು ಹಣದ ಕೊರತೆ ಇದೆ ಎಂದು ಹೇಳಬಹುದು. ಅದಕ್ಕೆ ಹಣವನ್ನು ಕೊಡಿಸುವುದನ್ನು ನಮಗೆ ಬಿಡಿ. ನೀವು ಹೇಮಾವತಿ ನೀರನ್ನು ತುಮಕೂರಿಗೆ ಕೊಡುತ್ತೇವೆಂದು ಹೇಳಿದರೆ ಸಾಕು, ನಮ್ಮ ಜಿಲ್ಲೆಯ ಎಲ್ಲಾ ಜನರು ತಮ್ಮ ಸ್ವತ್ತುಗಳನ್ನು ಮಾರಿ ಹಣವನ್ನು ಸಂಗ್ರಹಿಸಿಕೊಡುತ್ತಾರೆ. ಸುಮ್ಮನೆ ಹಣ ಹಣ ಎಂದರೆ ಹಣ ಬರುವುದು ಹೇಗೆ? ಆದ್ದರಿಂದ ದಯವಿಟ್ಟು ಈ ಬರಗಾಲ ಪ್ರದೇಶವಾದ ತುಮಕೂರು ಜಿಲ್ಲೆಗೆ ಹೆಚ್ಚಿನ ಗಮನ ಕೊಡಿ. ನಿಮ್ಮಂತಹ ದಕ್ಷ ಮಂತ್ರಿಗಳಿಂದ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಬಹುಶಃ ಬೇರೆ ಇನ್ನಾವ ಮಂತ್ರಿಗಳ ಕೈಯಲ್ಲಿಯೂ ಇದು ಆಗುವುದಿಲ್ಲವೆಂದು ನನ್ನ ಭಾವನೆ. ಇದು ನಮ್ಮ ತುಮಕೂರು ಜಿಲ್ಲೆಯ ದುರಾದೃಷ್ಟವೆಂದು ಕಾಣುತ್ತದೆ. ಹಿಂದೆ ಮಾನ್ಯ ಚೆನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ತುಮಕೂರು ಜಿಲ್ಲೆಯನ್ನು ಪೂರ್ಣವಾಗಿ ನೆಗ್‌ಲೆಕ್ಟ್ ಮಾಡಿದರು. ಆದರಿಂದ ನಾವು ಈಗ ಕಷ್ಟವನ್ನು ಅನುಭವಿಸುತ್ತಿದ್ದೇವೆ ಎಂಬುದನ್ನು ಇಲ್ಲಿ ಹೇಳುತ್ತಿದ್ದೇನೆ. ಹೇಮಾವತಿ ಚಾನಲ್‌ನ್ನು ನಮ್ಮ ತುಮಕೂರು ಜಿಲ್ಲೆಗೆ ವಿಸ್ತರಿಸಬೇಕು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಪ್ರತಿ ವರ್ಷ ಸುಮಾರು ೨೮ ರಿಂದ ೨೩ ಸೆನ್‌ಟಿಯಸ್ ಅಷ್ಟು ಮಾತ್ರ ಮಳೆ ಬೀಳುತ್ತದೆ. ಆದುದರಿಂದ ತುಮಕೂರು ಜಿಲ್ಲೆಗೆ ನೀರನ್ನು ಕೊಡುವುದಕ್ಕೆ ಆದ್ಯತೆ ಕೊಡಬೇಕು. ಬಾಗರು ಟವನ್‌ನಿಂದಾದರು ತುಮಕೂರು ಜಿಲ್ಲೆಗೆ ನೀರನ್ನು ಒದಗಿಸಲಿಕ್ಕೆ ಬೇಗ ಪ್ರಯತ್ನ ಮಾಡಬೇಕು. ಬರೀ ಕಾಗ್ರೆಸ್‌ನವರು ಮಾತ್ರ ತುಮಕೂರು ಜಿಲ್ಲೆಯಲ್ಲಿ ಇಲ್ಲ. ಜನತಾ ಪಕ್ಷದವರು ತುಮಕೂರು ಜಿಲ್ಲೆಯಲ್ಲಿ ಇದ್ದಾರೆಂದು ತಾವು ತಿಳಿದುಕೊಳ್ಳಬೇಕು. ದಯವಿಟ್ಟು ಹಾಸನ ಜಿಲ್ಲೆಯನ್ನು ಎರಡು ವರ್ಷಗಳಾದರೂ ತಾವು ಮರೆಯಿರಿ. ಎರಡು ವರ್ಷ ಹಾಸನ ಜಿಲ್ಲೆಯನ್ನು ಮರೆತು ನಮಗೆ ನೀರನ್ನು ಕೊಡುವ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ನೀವು ಹೋದ ಸಾರಿ ಬಜೆಟ್‌ನಲ್ಲಿ ಏನೇನು ಕೆಲಸಗಳನ್ನು ಸೇರಿಸಿದ್ದಿರಿ ಅದನ್ನು ಈ ವರ್ಷದ ಬಜೆಟ್‌ನಲ್ಲಿ ಎಲ್ಲವನ್ನೂ ಕೈ ಬಿಟ್ಟಿದ್ದೀರಿ. ಅದಕ್ಕೆ ಕಾರಣ, ಹಣ ಇಲ್ಲವೆಂದು ಹೇಳುತ್ತೀರಿ. ಹೋದಸಾರಿ ಸೇರಿಸಿದ ಕಾರ್ಯಕ್ರಮಗಳನ್ನು ಈ ಸಾರಿ ಬಿಟ್ಟುಬಿಟ್ಟರೆ, ಮುಂದಿನ ವರ್ಷಗಳಲ್ಲಿ ಅದನ್ನು ಸೇರಿಸಬೇಕಾದರೆ ಮತ್ತೆ ಎಸ್ಟಿಮೇಟ್ ಮಾಡಬೇಕಾಗುತ್ತದೆ ಮತ್ತೆ ರಿಪೋರ್ಟ್‌ನ್ನು ತರಿಸಿಕೊಳ್ಳಬೇಕಾಗುತ್ತದೆ. ಟೆಕ್ನಿಕಲ್ ಫಿಸಿಬಿಲಿಟಿ ಸರ್ಟಿಫಿಕೇಟ್ ಬೇಕಾಗುತ್ತದೆ. ಈ ಎಲ್ಲಾ ಫೈಲುಗಳು ೫–೬ ಸಾರಿ ಎಲ್ಲಾ ಇಲಾಖೆಗಳಿಗೂ ಹೋಗಿ ವಾಪಸ್ ಬರುವುದರೊಳಗೆ ಬಹಳ ವರ್ಷಗಳೇ ಆಗುತ್ತವೆ. ಈ ಎಸ್ಟಿಮೇಟುಗಳೆಲ್ಲಾ ಬಜೆಟ್ ಪುಸ್ತಕದಲ್ಲಿ ಇದ್ದಿದ್ದರೆ ನಿಮಗೆ ಏನಾಗುತ್ತಿತ್ತು? ಇದು ಮೂಲಭೂತವಾದ ಪ್ರಶ್ನೆಯಾಗಿದೆ ಎಂದು ನಾನು ಕೇಳುತ್ತಿದ್ದೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳಬೇಕಾದರೆ, ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ವರ್ಷಗಳ ಹಿಂದೆ ಅಂದರೆ ನೂರಾರು ವರ್ಷಗಳ ಹಿಂದೆ ಕಟ್ಟಿದ ಕೆರೆಗಳು ಇವೆ. ಅವುಗಳಲ್ಲಿ ಬಹಳಷ್ಟು ಕೆರೆಗಳು ತುಂಬಿದರೂಕೂಡ ಪೂರ್ಣವಾಗಿ ಒಂದು ಬೆಳೆ ಬರತಕ್ಕಂಥದ್ದು ಕಷ್ಟ. ಈ ಕೆರೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ಬಂದು ನೋಡುವುದಿಲ್ಲ. ತಹಸಿಲ್ದಾರ್‌ರವರು

ಕೆರೆಗಳ ಹತ್ತಿರ ಹೋಗಿ ಯಾವ ರಿಪೋರ್ಟ್‌ನ್ನೂ ಕೊಡುವುದಿಲ್ಲ. ವಾಟರ್ ರೇಟ್ ಮಾತ್ರ ಜಾಸ್ತಿ ಹಾಕುತ್ತೀರಿ. ಮೈನರ್ ಇರಿಗೇಷನ್ ಟ್ಯಾಂಕುಗಳು ಏನು ಇವೆ ಇವುಗಳ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕು. ನಿಮ್ಮ ಕಾಲದಲ್ಲೇ ಅವುಗಳಿಗೆ ಪರಿಹಾರ ಹುಡುಕಬೇಕು. ಕಾರಣ ನೀವು ಪಿ.ಡಬ್ಲ್ಯೂ.ಡಿ. ಮಂತ್ರಿಯಾಗಿದ್ದೀರಿ ಎಂದಲ್ಲ, ಇವುಗಳ ಬಗ್ಗೆ ನಿಮಗೆ ಅನುಭವ ಜಾಸ್ತಿ ಇದೆ. ಈಗೀಗ ಕೆರೆಗಳ ಸ್ಥಿತಿ ಏನಾಗಿದೆ ? ಅವುಗಳನ್ನು ಯಾರೂ ನೋಡಿಕೊಳ್ಳುವವರು ಇಲ್ಲ. ಯಾರದು ತೂಬಿನ ಜಾಗದಲ್ಲಿ ಜಮೀನು ಇದೆಯೋ ಅಂತಹವರಿಗೆ ಮಾತ್ರ ನೀರು ಹೋಗುತ್ತದೆ ಹೊರತು ಬೇರೆಯವರಿಗೆ ಹೋಗುವುದಿಲ್ಲ. ಯಾರು ಭಲಾಢ್ಯರು ಇರುತ್ತಾರೋ ಅಂತಹವರು ಮಾತ್ರ ಕೆರೆಯ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ನೀರನ್ನು ವಿತರಣೆ ಮಾಡಿಬಿಡಲು ನೀರಗಂಟಿಯೂ ಸಹ ಇವತ್ತಿನ ದಿವಸ ಹಳ್ಳಿಗಳಲ್ಲಿ ಇಲ್ಲ. ಆದುದರಿಂದ ತಾವು ಈ ಸಣ್ಣ ಕೆರೆಗಳ ಬಗ್ಗೆ ತ್ವರಿತವಾಗಿ ಒಂದು ವರದಿಯನ್ನು ತರಿಸಿಕೊಂಡು ಅವುಗಳನ್ನು ಸರಿಪಡಿಸಬೇಕು. ಟ್ಯಾಂಕುಗಳನ್ನು ಮೈಟೆನೆನ್ಸ್ ಮಾಡುವುದಕ್ಕೆ ತೊಂದರೆ ಏನು ? ಅವುಗಳನ್ನು ನೋಡುಕೊಳ್ಳುವುದಕ್ಕೆ ಹಾಗು ಇರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ತಾವು ದಯವಿಟ್ಟು ಗಮನ ಹರಿಸಿ. ಇನ್ನು ನ್ಯಾಷನಲ್ ಹೈವೇ ನಂ. ೪ ರಲ್ಲಿ ಹಿಂದೆ ಮಂತ್ರಿಗಳಾಗಿದ್ದ ಹೆಚ್. ಎಂ. ಚೆನ್ನಬಸಪ್ಪನವರು ರಸ್ತೆಯ ಎರಡೂ ಕಡೆ ಹುಣಿಸೆ ಗಿಡಗಳನ್ನು ನಡೆಸಿದ್ದರು ಅವುಗಳಲ್ಲಿ ಸುಮಾರು ೧೦೦-೧೫೦ ಗಿಡಗಳು ಹುಲುಸಾಗಿ ಬಂದಿವೆ. ಅವರು ಇದ್ದಿದ್ದರೆ ರಾಜ್ಯದ ಎಲ್ಲಾ ಹೈವೇಗಳ ಎರಡೂ ಕಡೆಗಳಲ್ಲಿ ಹುಣಿಸೆ ಗಿಡಗಳನ್ನು ನಡೆಸುತ್ತಿದ್ದರು ಎಂದು ಕಾಣುತ್ತದೆ. ದುರ್ದೈವದಿಂದ ಅವರು ಮಂತ್ರಿಗಳಾದ ಮೇಲೆ ಬಂದಂತಹ ಮಂತ್ರಿಗಳು ಇತ್ತಕಡೆ ಗಮನ ಹರಿಸಿಲ್ಲ. ಅವರು ರಸ್ತೆಯ ಬದಿಯಲ್ಲಿ ಹುಣಿಸೆ ಗಿಡಗಳನ್ನು ಹಾಕಿದಾಗಲೇ ನಾನು ಸುಮಾರು ೧೦೦ ಹುಣಿಸೆ ಗಿಡಗಳನ್ನು ನೆಡೆಸಿದ್ದೆ. ಇವೊತ್ತು ಒಂದೊಂದು ಮರದಲ್ಲಿ ಬಿಟ್ಟಿರುವ ಫಸಲನ್ನು ೨೫೦ ರೂಪಾಯಿಗಳಿಗೆ ಕೊಟ್ಟಿದ್ದೇನೆ. ಇದೇ ರೀತಿ ಎಲ್ಲಾ ರಸ್ತೆಗಳ ಇಕ್ಕೆಲಗಳಲ್ಲೂ ಹುಣಿಸೆ ಮರಗಳನ್ನು ಬೆಳೆಸಿದ್ದರೆ ಲಕ್ಷಾಂತರ ರೂಪಾಯಿಗಳ ಆದಾಯ ನಿಮ್ಮ ಇಲಾಖೆಗೆ ಬರುತ್ತಿತ್ತು. ಆ ಹಣ ನಿಮ್ಮ ಇಲಾಖೆಯ ಅಡ್ಮಿನಿಸ್ಟ್ರೇಷನ್‌ಗೆ ಸಾಕಾಗುತ್ತಿತ್ತು. ಇದರ ಕಡೆ ಯಾರಿಗೂ ಗಮನ ಹೋಗಲಿಲ್ಲ. ಇವೊತ್ತು ಕೂಡ ಕೇಂದ್ರ ಸರ್ಕಾರದಿಂದ ಮರಗಳನ್ನು ನಡೆಸುವುದಕ್ಕೆ ಹಣ ಬರುತ್ತಿದೆ. ಅದನ್ನು ಉಪಯೋಗಿಸಿಕೊಂಡು ಇನ್ನೂ ಮುಂದಾದರೂ ರಸ್ತೆಗಳ ಪಕ್ಕಗಳಲ್ಲಿ ಹುಣಿಸೆ ಮರಗಳನ್ನು ನಡೆಸುವ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಇಂತಹ ಮರಗಳನ್ನು ನೀವು ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯದ ಹೆದ್ದಾರಿಯೊಳಗೆ ಬೆಳೆಯುವುದಾದರೆ ಅವುಗಳು ಐದಾರು ವರ್ಷಗಳೊಳಗಾದರೂ ಫಲಕ್ಕೆ ಬರುತ್ತವೆ. ನಿಮ್ಮ ಪಿ.ಡಬ್ಲ್ಯೂ.ಡಿ. ಇಲಾಖೆಯ ಮೈಂಟೇನೆನ್ಸ್ ಪ್ರತಿಯೊಂದನ್ನೂ ಅದು ನೋಡಿಕೊಳ್ಳುತ್ತದೆ. ಇಂತಹ ವಿಚಾರದ ಬಗ್ಗೆ ತಾವುಗಳು ಏಕೆ ಯೋಚನೆ ಮಾಡಲಿಲ್ಲ ? ನಾನು ತಿಳಿದುಕೊಂಡ ಪ್ರಕಾರ ಮಾನ್ಯ ದೇವೇಗೌಡರಿಗೆ ಈ ಯೋಜನೆ ಮನಸ್ಸಿಗೆ ಬಂದಿರಬಹುದು. ರಸ್ತೆಗಳ ಎರಡೂ ಭಾಗಗಳಲ್ಲಿ ಹುಣಸೆ ಗಿಡಗಳನ್ನು ಬೆಳೆಸಬೇಕು. ಹೇಗೂ ದಿನಗೂಲಿ ನೌಕರರು ಇದ್ದಾರೆ. ಅವರನ್ನು ಖಾಯಂ ಗೊಳಿಸಿದ್ದೀರಿ. ಅವರು ಮನೆಯಲ್ಲಿಯೇ ಇರುತ್ತಾರೆ. ಮೊದಲು ಅವರು ದಿನಾಲೂ ಅಟೆಂಡೆನ್ಸ್ ಕೊಡಬೇಕಾಗಿತ್ತು. ಬಂದು ಮುಖ ತೋರಿಸಿಯಾದರೂ ಹೋಗುತ್ತಿದ್ದರು. ಈಗ ಯಾವುದೂ ಇಲ್ಲದೆ ಸ್ವಂತದ ಕೆಲಸ ಮಾಡಿಕೊಳ್ಳುತ್ತಾ ಇದ್ದಾರೆ. ಅವರೆಲ್ಲರಿಗೂ ಪ್ರತಿಯೊಬ್ಬರಿಗೂ ಒಂದು ನೂರು ಗಿಡಗಳನ್ನು ಬೆಳೆಸುವ ಕೆಲಸ ಕೊಡಿಸಿ. ಈ ರೀತಿಯಾಗಿ ಮಾಡಿದರೆ ಅದರಿಂದ ಕೋಟಿ ಗಟ್ಟಲೆ ಹಣವನ್ನು ಸಂಪಾದನೆ ಮಾಡಬಹುದು. ಅಲ್ಲದೇ ನಿಮ್ಮ ಇಲಾಖೆಯೂ ಕೂಡಾ ಸುಭದ್ರವಾದ ಹಣಕಾಸಿನ ಅಡಿಯ ಮೇಲೆ ನಿಲ್ಲಲು ಸಾಧ್ಯವಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಎರಡನೆಯದಾಗಿ, ಎಲ್ಲಿಯೇ ರಸ್ತೆಗಳನ್ನು ನೋಡಲಿ, ರಸ್ತೆಯ ಕೊನೆಯ ಅಂಚಿನ ವರೆಗೂ ಕಟ್ ಮಾಡಿಕೊಂಡು ಬರುತ್ತಾ ಇದ್ದಾರೆ, ಅಲ್ಲಿ ತಿಪ್ಪೆಗುಂಡಿಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಈ ನಮ್ಮ ಇಂಜಿನಿಯರ್‌ಗಳು ಏನು ಮಾಡುತ್ತಿದ್ದಾರೆ ಎಂದು ನಮಗೆ ಅನ್ನಿಸುತ್ತದೆ. ಇದನ್ನೆಲ್ಲಾ ಅವರು ನೋಡಿಕೊಳ್ಳುವುದಿಲ್ಲವೇ ? ಒಂದೆರಡು ವರ್ಷ ಹೀಗೆ ಬಿಟ್ಟರೆ ರಸ್ತೆಗಳು ಪೂರ್ಣ ಹಾಳಾಗುತ್ತವೆ. ಆಮೇಲೆ ಅಲ್ಲಿಗೆ ಹೋದರೆ ಆ ಜನರೇ ನಮಗೆ ರಸ್ತೆಯನ್ನು ರಿಪೇರಿ ಮಾಡಿಕೊಡಿರಿ ಎಂದು ನಮ್ಮನ್ನು ಕೇಳುತ್ತಾರೆ. ಆಗ ನಮಗಾಗಲೀ, ನಿಮಗಾಗಲೀ ಅದನ್ನು ಕೂಡಲೇ ಮಾಡಲಿಕ್ಕೆ ಆಗುವುದಿಲ್ಲ. ಹೀಗೆ ಆಗುವುದನ್ನು ನೀವು ಸಕಾಲದಲ್ಲಿ ತಪ್ಪಿಸಿದರೆ, ಕೊನೆಯ ಪಕ್ಷ ೨೫ ಪರ್ಸೆಂಟ್ ಹಣ, ನೀವು ರಸ್ತೆಗಳಿಗೆ ಖರ್ಚು ಮಾಡತಕ್ಕಂಥಾದ್ದು ಉಳಿಯುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡೂ ಕಡೆಗಳಲ್ಲಿ ತಿಪ್ಪೆಗುಂಡಿಗಳಿಗೋಸ್ಕರ ರಸ್ತೆಗಳನ್ನು ಹಾಳು ಮಾಡುತ್ತಿದ್ದಾರೆ, ಅದರ ಬಗ್ಗೆ ಬಿಗಿಯಾದ ಕ್ರಮವನ್ನು ತೆಗೆದುಕೊಂಡು ರಸ್ತೆಗಳು ಹಾಳಾಗದಂತೆ

ತಾವುಗಳು ನೋಡಬೇಕು. ಇಲ್ಲದಿದ್ದರೆ ನಾವು ನಿಮ್ಮ ಹತ್ತಿರ ಬರುವುದು, ರಿಪೇರಿ ಮಾಡಿಸಿಕೊಡಿ ಎಂದು ನಿಮ್ಮನ್ನು ಕೇಳುವುದು, ನೀವು ಆಗುವುದಿಲ್ಲ ಎಂದು ಹೇಳುವುದು ಜನರು ನಮ್ಮನ್ನು ಬೈಯುವುದು ಇದೆಲ್ಲಾ ಆಗುವುದು ಬೇಡ. ಆದಷ್ಟು ಜಾಗ್ರತೆ ಇದು ಆಗದಂತೆ ನೋಡಿಕೊಳ್ಳುವಂತೆ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಹಾಗೆಯೇ ಮೈಂಟೇನೆನ್ಸ್ ಬಗ್ಗೆ ಹೇಳುವುದಾದರೆ, ರಸ್ತೆಗಳನ್ನೇನೋ ನೀವು ಮಾಡಿಸಿ ಬಿಡುತ್ತೀರಿ. ಎನ್. ಆರ್. ಇ. ಪಿ.ಯಲ್ಲಿ ಹಣ ಕೊಟ್ಟರೂ ನೀವುಗಳು ರಸ್ತೆಯನ್ನು ಮಾಡಿಸಿದಿರಿ. ಆದರೆ ಅವುಗಳನ್ನು ನೋಡಿಕೊಳ್ಳುವವರು ಯಾರು? ಪಿ.ಡಬ್ಲ್ಯು.ಡಿ.ಗೆ ರಸ್ತೆಗಳಿಗಾಗಿ ಎಷ್ಟು ಹಣ ಕೊಡುತ್ತೀರೋ ನನಗೆ ಗೊತ್ತಿಲ್ಲ. ಈ ವರ್ಷ ಮಣ್ಣು ರಸ್ತೆ ಮಾಡಿಸಿದ್ದೀರಿ, ಅದಕ್ಕೆ ಮುಂದಿನ ವರ್ಷ ಜಲ್ಲಿಯನ್ನು ಹಾಕಿದರೆ ಅದು ಗಟ್ಟಿಯಾಗಿ ಉಳಿಯುತ್ತದೆ, ಅದು ಹೋಗುವುದೇ ಇಲ್ಲ. ಆದರೆ ಹಾಗೆ ನೀವು ಮಾಡುವುದಿಲ್ಲ. ಎನ್.ಆರ್.ಇ.ಪಿ. ಯಲ್ಲಿ ಕೆಲಸ ಕೊಡಿಸುತ್ತಾ ಇದ್ದೀರಿ, ಅದು ಮಂಜೂರು ಆಗುತ್ತಾ ಇದೆ. ಹೋದ ವರ್ಷ ಮಾಡಿದ ರಸ್ತೆಗೆ ಈ ವರ್ಷವೂ ಕೂಡಾ ಸೇರಿಸಿ ಬಿಡುತ್ತಾರೆ. ಒಂದೇ ರಸ್ತೆಗೆ ಪಿ.ಡಬ್ಲ್ಯು.ಡಿ ಮತ್ತು ಬಿ.ಡಿ.ಓ. ಇಬ್ಬರೂ ಮಂಜೂರಾತಿಗೆ ಕಳುಹಿಸಿಕೊಡುತ್ತಾರೆ, ಮಂಜೂರು ಮಾಡಿಸಿಕೊಳ್ಳುತ್ತಾರೆ. ಇದನ್ನೆಲ್ಲಾ ಸರಿಯಾಗಿ ಏಕೆ ನಾವು ಚೆಕ್ ಮಾಡುವುದಿಲ್ಲ? ಇಷ್ಟು ರಿಪಿಟೇಷನ್ ಆಗುವುದರಿಂದ ಕೋಟ್ಯಾಂತರ ರೂಪಾಯಿಗಳ ಹಣ ಪೋಲಾಗುತ್ತಿದೆ ದಯವಿಟ್ಟು ಈ ರೀತಿಯಲ್ಲಿ ಸರ್ಕಾರದ ಹಣವು ಹಾಳಾಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನನಗಂತೂ ಆಶ್ಚರ್ಯ ಆಯಿತು, ಏಕೆಂದರೆ, ನಾನು ಹಿಂದೆ ಬೆಳ್ಳಾವೆ ಕ್ಷೇತ್ರದಲ್ಲಿ ಶಾಸಕನಾಗಿದ್ದೆ. ಅಲ್ಲಿ ಯಾವುದೇ ರಸ್ತೆಗಳು ಹಾಳಾಗಿದ್ದು ನನ್ನ ನಾನು ನೋಡಲಿಲ್ಲ. ಆದರೆ ಗುಬ್ಬಿ ತಾಲ್ಲೂಕಿನ ಎಂ.ಎಲ್.ಎ. ಆದ ಮೇಲೆ ನನ್ನ ಕ್ಷೇತ್ರದಲ್ಲಿ ನಿಮ್ಮ ಪಿ.ಡಬ್ಲ್ಯು.ಡಿ. ರಸ್ತೆಗಳು ಒಂದೊಂದು ಮೂರು ನಾಲ್ಕು ಅಡಿಯಷ್ಟು ಗುಂಡಿಗಳು ಬಿದ್ದಿವೆ. ಮನುಷ್ಯನನ್ನು ಅದರಲ್ಲಿ ಹೂಳಿ ಬಿಡಬಹುದು. ಗುಂಡಿಯನ್ನು ಬೇರೆಯಾಗಿ ತೆಗೆಯಬೇಕಾಗಿಲ್ಲ, ಅಷ್ಟು ಮಟ್ಟಿಗೆ ರಸ್ತೆಗಳು ಆಳವಾಗಿ ಬಿಟ್ಟಿದೆ. ಹೀಗೆ ಅನೇಕ ರಸ್ತೆಗಳು ರಾಜ್ಯದ ಹೆದ್ದಾರಿಯಲ್ಲಿ ಇರುವಾಗ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನಿಮಗೆ ಇವರ ಬಗ್ಗೆ ಏನಾದರೂ ವರದಿ ಇದೆಯೇ? ದಯವಿಟ್ಟು ತಾವುಗಳು ಇದರ ಬಗ್ಗೆ ಗಮನ ಹರಿಸಬೇಕು. ಹಾಗೆಯೇ ನನ್ನ ಕ್ಷೇತ್ರದ ಒಂದು ವಿಷಯವನ್ನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಯಿಂದ ಎಡೆಯೂರು ಕ್ಷೇತ್ರಕ್ಕೆ ಬಹಳಷ್ಟು ಜನರು ಹೋಗುತ್ತಾ ಇರುತ್ತಾರೆ. ಈ ವಿಷಯದಲ್ಲಿ ನಾನು ಸುಮಾರು ಎರಡು ವರ್ಷಗಳಿಂದ ತಮ್ಮಲ್ಲಿ ಕೇಳುತ್ತಾ ಇದ್ದೇನೆ. ಮಾನ್ಯ ರೇವಣ್ಣನವರೂ ಕೇಳಿ ಕೊಂಡಿದ್ದಾರೆ. ಚಿಕ್ಕಕಲ್ಲೂರಿನಿಂದ ಎಡೆಯೂರು ರಸ್ತೆ, ಪಿ.ಡಬ್ಲ್ಯು.ಡಿ. ರಸ್ತೆಯಾಗಿದೆ, ಹಣವನ್ನೂ ಸಾಕಷ್ಟು ಖರ್ಚು ಮಾಡಿದ್ದೀರಿ. ಆ ರಸ್ತೆಗೆ ಎರಡು ಸೇತುವೆ ಬೇಕು. ಅದು ಆದರೆ ಸಾವಿರಾರು ಯಾತ್ರಿಕರುಗಳಿಗೆ ಅನುಕೂಲವಾಗುತ್ತದೆ. ನಾವು ಈಗಾಗಲೇ ಅದನ್ನು ಮಾಡಿಕೊಡಿ ಎಂದು ಕೇಳಿದರೆ ನಿಮಗೆ ಏಕೋ ಮನಸ್ಸು ಬರುತ್ತಾ ಇಲ್ಲ. ರಸ್ತೆಗಾಗಿ ನಮ್ಮ ತುರುವೇಕೆರೆ ಎಂ.ಎಲ್.ಎ. ಹೇಳಿದ್ದಾರೆ, ತಾವು ಮಾಡಿಸಿಕೊಟ್ಟಿದ್ದೀರಿ. ಹಾಗೆಯೇ ಕುಣಿಗಲ್ ಶಾಸಕರು ಹೇಳಿದ್ದಾರೆ ಅವರಿಗೂ ಮಾಡಿಸಿಕೊಟ್ಟಿದ್ದೀರಿ. ಆದರೆ ನಾನು, ಶಿವನಂಜಪ್ಪ ಹೇಳಿದ್ದುದನ್ನು ಏಕೋ ಮಾಡಿಸಿಕೊಟ್ಟಿಲ್ಲ. ಅದೇನೇ ಇದ್ದರೂ ನನ್ನ ಕೆಲಸವಲ್ಲ, ನನ್ನ ಸ್ವಂತದ ಕೆಲಸವೂ ಅಲ್ಲ, ಜನರಿಗೆ ಅನುಕೂಲ ಮಾಡಿಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ ಅಷ್ಟೆ. ಆದುದರಿಂದ ದಯಮಾಡಿ ಅದನ್ನು ಮಾಡಿಸಿ ಕೊಡಿ. ನಿಮಗೆ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ದೇವರು ಒಳ್ಳೆಯದನ್ನು ಮಾಡುತ್ತಾನೆ. ಅತ್ಯಂತ ಅವಶ್ಯಕವಾಗಿ ಈ ಕೆಲಸ ಆಗಬೇಕಾಗಿದೆ. ದಯವಿಟ್ಟು ಮಾಡಿಸಿಕೊಡಿ ಎಂದು ತಮ್ಮಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಕುಣಿಗಲ್ ತಾಲ್ಲೂಕಿನಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಕೆಲಸ ಗಳನ್ನು ಮಾಡಿದ್ದಾರೆ, ಇನ್ನು ೪-೫ ಕಿ.ಮೀ. ದೂರ ಸೇರಿಸಿ ಕೊಟ್ಟರೆ ನಮ್ಮ ಕೆಲಸವನ್ನೂ ಮಾಡಿದಂತಾಗುತ್ತದೆ.

ಉಪಾಧ್ಯಕ್ಷರು.—ಆ ಕೆಲಸವನ್ನು ಮಾಡದಿದ್ದರೆ ಅವರಿಗೆ ಶಾಪ ಬರುತ್ತದೆಯೇ?

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ದೇವೇಗೌಡರು ನಮ್ಮ ಹಿತೈಷಿಗಳು, ಅವರಿಗೂ ಮತ್ತು ನಮ್ಮೆಲ್ಲರಿಗೂ ದೇವರು ಒಳ್ಳೆಯದನ್ನು ಮಾಡಲಿ ಎಂದು ನಮ್ಮ ಪ್ರಾರ್ಥನೆ ಅಷ್ಟೆ. ನಾನು ಒಂದು ಪ್ರಶ್ನೆಯನ್ನು ಗಂಭೀರವಾಗಿ ಕೇಳುತ್ತಿದ್ದೇನೆ, ಅದು ಏನೆಂದರೆ ಮಾನ್ಯ ರಾಮಕೃಷ್ಣಯ್ಯ ನವರು ಹೇಳಿದರು. ಅದನ್ನು ಮಾಡಿಸಿಕೊಟ್ಟಿರಿ, ವೈ.ಕೆ. ರಾಮಯ್ಯನವರು ಹೇಳಿದ ರಸ್ತೆಯನ್ನೂ ಕೂಡಾ ಮಾಡಿಸಿಕೊಟ್ಟಿದ್ದೀರಿ, ಆದರೆ ಶಿವನಂಜಪ್ಪ ಹೇಳಿದ ರಸ್ತೆಯ ಕೆಲಸವನ್ನು ಏತಕ್ಕಾಗಿ ಮಾಡ ಲಿಲ್ಲ? ದಯಮಾಡಿ ಹಾಗೆ ಮಾಡಬೇಡಿ, ನಮ್ಮ ರಸ್ತೆಯ ಕೆಲಸವನ್ನೂ ಮಾಡಿಸಿಕೊಡಿ.

ಕೊನೆಯದಾಗಿ, ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಗುಂಡೂರಾಯರ ಸರಕಾರ ಇದ್ದಾಗ ನಾನು ಒಬ್ಬ ಎಕ್ಸಿಕ್ಯೂಟಿವ್ ಇಂಜಿನೀಯರ್‌ರವರ ಕಛೇರಿಗೆ ಹೋಗಿದ್ದೆ. ಬಹುಶಃ ಅದು ಮಾರ್ಚ್ ೩೧ನೇ ತಾರೀಖು ಎಂದು ಕಾಣುತ್ತದೆ, ತಿಂಗಳ ಕೊನೆಯ ದಿವಸ ಅವರು ಫ್ರೀಯಾಗಿ ಇದ್ದರು. ಪೇಪರ್ ಯಾವುದೂ ಅವರ ಟೇಬಲ್ ಮೇಲೆ ಇರಲಿಲ್ಲ. ನಾನು ಅವರನ್ನು ಕೇಳಿದೆ ಏನ್ರಿ ತಿಂಗಳ ಕೊನೆಯ ದಿವಸ ಹೀಗೆ ಫ್ರೀಯಾಗಿ ಇದ್ದೀರಲ್ಲ ಕಲೆಕ್ಷನ್ ಏನು ಆಯಿತು, ಬಿಲ್ಲುಗಳು ಎಷ್ಟು ಮಾಡಿದಿರಿ ಎಂದು ಕೇಳಿದಾಗ, ಅವರು ಹೆದರಿಕೊಂಡು, ಆ ಹಣ ಯಾರಿಗೆ ಬೇಕು, ಹೆಂಡತಿ ಮಕ್ಕಳ ಮಾಂಗಲ್ಯವನ್ನೂ ಕೂಡಾ ಬಿಡುವುದಿಲ್ಲ, ಅಂತಹ ಹಣವನ್ನು ನೋಡಿದರೆ ವಾಂತಿ ಬರುತ್ತದೆ. ನಮಗೆ ಅಂಥಾದ್ದು ಬೇಡ ಎಂದು ಭಯವನ್ನು ವ್ಯಕ್ತಪಡಿಸಿದರು. ಆದರೆ ಆ ತರಹದ ಭಯ ಇವೊತ್ತಿನ ದಿವಸ ಅಧಿಕಾರಿಗಳಲ್ಲಿ ಇದ್ದಹಾಗೆ ಕಾಣುವುದಿಲ್ಲ. ನೀವು ಮೊದಲು ಏನೋ ಹೇಳಿದಿರಿ, ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು. ಆದರೆ ನಿಮ್ಮ ಭಯ ಅಧಿಕಾರಿಗಳಿಗೆ ಇಲ್ಲ, ಯಥೇಚ್ಛವಾಗಿ ಬೇಕಾದಂತೆ ವರ್ತಿಸುತ್ತಾ ಇದ್ದಾರೆ. ಅವರೇ ಹೇಳು ತ್ತಾರೆ ನಮ್ಮ ದೇವೇಗೌಡರು ಇದ್ದಾರೆ. ನೀವೇನು ಮಾಡುತ್ತೀರಿ? ಏನು ಮಾಡುತ್ತೀರೋ ಅದನ್ನು ಮಾಡಿಕೊಳ್ಳಿ ಎಂದು ನೇರವಾಗಿ ಹೇಳುವ ಮಟ್ಟಕ್ಕೆ ಅವರು ಈಗ ಬಂದಿದ್ದಾರೆ. ಹೀಗೆ ಏಕೆ ಆಯಿತು ? ಬಹಳ ಲಘುವಾಗಿ ನಿಮ್ಮ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ? ನನಗಂತೂ ನಿಮ್ಮ ಬಗ್ಗೆ ಬಹಳಷ್ಟು ಗೌರವ ಇದೆ. ಆದರೆ ಜನರು ಹೇಳುವುದನ್ನು ನೋಡಿ ನನಗೆ ಬಹಳ ಬೇಸರವಾಗಿದೆ. ನೀವು ಸ್ವಜನ ಪಕ್ಷಪಾತಿಗಳು ಎಂದು ಹೇಳುತ್ತಾರೆ, ಅಂತಹ ದೂರುಗಳು ತಮ್ಮ ಮೇಲೆ ಎಂದಿಗೂ ಬರಬಾರದು, ನಿಮಗೆ ಬೇಕಾದವರನ್ನು ತೆಗೆದುಕೊಂಡು ಹೋಗಿ ವರ್ಕಿಂಗ್ ಸಬ್ ಕಮಿಟಿಗೆ ಹಾಕುತ್ತೀರಿ ಎಂದು ಕೇಳಿ ಬರುತ್ತಿದೆ. ಅದಕ್ಕೆಲ್ಲಾ ತಾವುಗಳು ಆಸ್ಪದ ಕೊಡಬಾರದು. ತಾವುಗಳು ಈ ರೀತಿಯಾಗಿ ಆಪಾದನೆಗಳಿಗೆ ಗುರಿಯಾಗಬಾರದು, ಏಕೆಂದರೆ ತಾವುಗಳು ನನ್ನ ಗುರುಗಳು. ತಾವುಗಳು ಈಗ ಸ್ವಜನ ಪಕ್ಷಪಾತಕ್ಕೆ ಗುರಿಯಾಗಿದ್ದೀರಿ. ವರ್ಕಿಂಗ್ ಸಬ್‌ಡಿವಿಜನ್‌ಗೆ ನಿಮ್ಮವರೇ ಏಕೆ ಬೇಕು? ನಮ್ಮವರು ಇರಬಾರದೇ ಎಂದು ಜನರು ಕೇಳುತ್ತಿದ್ದಾರೆ, ನಾನೂ ಕೇಳುತ್ತೇನೆ. ಆದುದರಿಂದ ಈ ತರಹದ ಗುರುತರವಾದ ಆಪಾದನೆಗಳಿಗೆ ತಾವುಗಳು ಗುರಿಯಾಗ ಬಾರದು ಎಂದೂ, ಹಾಗೆ ಆಪಾದನೆಗಳಿಗೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಭಿನ್ನವಿಸಿ ಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ದಾವಣಗೆರೆಯ ಡಿವಿಜನ್‌ನ ಸುತ್ತಮುತ್ತ ಅವರವರೇ ಇದ್ದಾರೆಂದು ಹೇಳಿದರು. ಆದರೆ ನಮ್ಮ ಡಿವಿಜನ್‌ನಲ್ಲಿ ಒಕ್ಕಲಿಗರನ್ನು ಹಾಕಿ ಎಂದರೂ ಹಾಕುತ್ತಿಲ್ಲ. ಬೇರೆಯವರು ಇದ್ದಾರೆ. ಮಾನ್ಯ ಮಂತ್ರಿಗಳು ಸ್ವಜನ ಪಕ್ಷಪಾತಕ್ಕೆ ಗುರಿಯಾಗಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಅದು ಸರಿಯಲ್ಲ, ಸ್ವಜನ ಪಕ್ಷಪಾತದ ಆರೋಪ ಇದೆ ಎಂದು ಹೇಳಿದರೆ ಅದು ಬೇರೆ ಹೀಗೆ ನೇರವಾದ ಆರೋಪಣೆಯನ್ನು ಮಾಡಬಾರದು. ನೀವೆ ತೀರ್ಮಾನ ಮಾಡಿದ ಹಾಗೆ ಅಲ್ಲ. ನೀವು ನಿರ್ಣಯವನ್ನು ಮಾಡತಕ್ಕಂಥವರು ಅಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ.—ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಅದಕ್ಕೆ ಮಾನ್ಯ ದೇವೇಗೌಡರು ಉತ್ತರದಲ್ಲಿ ಹೇಳಬಹುದಾಗಿತ್ತು, ನೀವು ಏಕೆ...

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ ಒಂದು ನಿಮಿಷ......

ಉಪಾಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಮಂತ್ರಿಗಳು ನಿಮಗಿಂತ ಮೊದಲಿನಿಂದಲೂ ನನಗೆ ಚೆನ್ನಾಗಿ ಗೊತ್ತು. ನಿಮ್ಮ ಸಹಾಯವೇನೂ ಮಾನ್ಯ ಮಂತ್ರಿಗಳಿಗೆ ಬೇಕಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಉತ್ತರ ಕೊಡಬಲ್ಲರು......

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಸ್ವಾಮಿ ಮಾನ್ಯ ಸದಸ್ಯರು......

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ......

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ನಾನು ನಮ್ಮ ಪಕ್ಷದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನನಗೆ ಆ ರೀತಿಯ ಕ್ರಿಟಿಸಿಜಂ ಬೇಕೆಂದು ಕಾಯುತ್ತಿದೆ. ನಾನು ಅವರ ಕ್ರಿಟಿಸಿಜಂನ್ನು ಸ್ವಾಗತ ಮಾಡುತ್ತೇನೆ. ಆ ರೀತಿಯ ಕ್ರಿಟಿಸಿಜಂ ಬಂದರೆ ಈ ದೇಶದ ಜನತೆಯು ಮುಂದೆ ಬೆಳಕು ಚೆಲ್ಲುವುದಕ್ಕೆ ಒಂದು ಅವಕಾಶ ನಮಗೆ ಸಿಗುತ್ತದೆ. ದಯಮಾಡಿ ಅಂತಹ ಕ್ರಿಟಿಸಿಜಂ ಏನಾದರೂ ಇದ್ದರೆ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ ಒಂದೇ ಒಂದು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳೇ ಕ್ರಿಟಿಸಿಜಂ ಬೇಕೆಂದು ಸ್ವಾಗತ ಮಾಡಿರುವಾಗ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಸ್ವಾಮಿ ನನ್ನ ತಾಲ್ಲೂಕಾದ ಚಿಕ್ಕೂರಿನಲ್ಲಿ ಒಕ್ಕಲಿಗರು ಯಾರೂ ಇಲ್ಲ. ಅಧಿಕಾರಿಗಳನ್ನು ನಮ್ಮವರು ನಿಮ್ಮವರು ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಈ ಚರ್ಚೆ ಎಲ್ಲಿಂದ ಎಲ್ಲಿಗೋ ಹೋಯಿತು.

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಮಂತ್ರಿಗಳು ಮೊದಲಿನಿಂದಲೂ ನನಗೆ ಸ್ನೇಹಿತರು.

ಉಪಾಧ್ಯಕ್ಷರು.—ಆಯಿತು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಮಾನ್ಯ ಸದಸ್ಯರಾದ ಆರ್. ವೆಂಕಟರಾಮಯ್ಯನವರು ಈಗ ಮಾತನಾಡಬಹುದು.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅವರ ಬೇಡಿಕೆಗಳನ್ನು ನಾವು ನೋಡಿ ಪರಿಶೀಲನೆ ಮಾಡಿದಾಗ ಮುಖ್ಯವಾಗಿ ಪುಟ ಎರಡರಲ್ಲಿ ಕೊಟ್ಟಿರುವಂತೆ ನೋಡುವುದಾದರೆ ೧೯೮೦-೮೧ನೇ ಸಾಲಿನಲ್ಲಿ ಬಿಲ್ಡಿಂಗ್‌ಗಳಿಗೆ ಖರ್ಚು ಮಾಡಿರುವಂಥಾದ್ದು ೧೪೩೮.೮೫ ಕೋಟಿ ರೂಪಾಯಿಗಳು ಆದರೆ ಅದೇ ೧೯೮೩-೮೪ನೇ ಸಾಲನ್ನು ತೆಗೆದುಕೊಂಡು ನೋಡಿದರೆ ೧೦೫೯.೯೯ ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. I refer to page 9 of performance

(ಶ್ರೀ ಬಿ.ಜಿ. ಬಣಕಾರ್‌ರವರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

Budget of Public Works Department, (Communications and buildings), wherein they have given Traffic intensity per day of 24 hours and the annual percentage increase in respect of different categories of roads:—In respect of National Highways it is 17,587 and the annual percentage increase comes to 16.15%.

Now I refer to Annexure-I on page 19: In the case of National Highways, the achievement is that in the year 1983-84 it is 1968 Kms and for the year 1984-85 also it is 1968 Kms. In respect of State Highways, for the year 1983-84 with regard to the Surfaced roads, it is 7912 Kms and for the year 1985-86 it is 7920 Kms, there is only an increase of 8 Kms. With regard to the Major District roads there is a progress of only 52 Kms. In respect of other District roads, the achievement during 1984-85 is 6886 Kms whereas for 1985-86 it is 6920 Kms. There is a progress of only 34 Kms. Similarly with regard to the Village roads, there is a progress of 123 Kms only. ಅದೇರೀತಿಯಲ್ಲಿ ನಾವು ಪ್ಯಾರಾ ೧೧ನ್ನು ತೆಗೆದುಕೊಂಡರೆ ಆಗ ಸ್ವಲ್ಪ ಹೆಚ್ಚು ಅಂಕಿಅಂಶಗಳು ಸಿಗಬಹುದು. ಮತ್ತೆ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮ್ಮ ಗ್ರಾಮೀಣ ಪ್ರದೇಶಗಳಿಗೆ ಆಗಿರುವ ಅನ್ಯಾಯವು ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಹಳ್ಳಿ ಹೆದ್ದಾರಿಗಳನ್ನು ತೆಗೆದುಕೊಂಡಾಗ HALLIHEDDARI: "The objection of this scheme is to provide approach roads to roadless villages in the State having a population of less than 1000 which cannot be taken up under Minimum Needs programme, Under this programme, 408 Villages are proposed to be covered."

Para two is important on page No. 11 of the performance Budget 1985-86.

> "The State Government have accepted the objective of providing an all weather road to every inhabited village in the State. At present, the number of villages connected by the all-weather roads is 8477. Out of the total of 27028 (as per 1981 Census), inhabited villages in the State, they account for about 31% of the total inhabited Villages."

That means nearly 70% of the entire villages have no communication. ಸ್ವಾಮಿ, ನಮ್ಮ ರಾಜ್ಯದಲ್ಲಿ ಸುಮಾರು ೨೭,೦೨೮ ಹಳ್ಳಿಗಳು ಇವೆ. ತಮ್ಮ ಪ್ರಕಾರ ೪೦೮ ಹಳ್ಳಿಗಳನ್ನು ಕವರ್ ಮಾಡುವಾಗ ಈ ೨೭,೦೨೮ ಹಳ್ಳಿಗಳನ್ನು ಇನ್ನು ೧೦೦ ವರ್ಷಗಳಾದರೂ ಕವರ್ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಹಳ್ಳಿ ಹೆದ್ದಾರಿಗಳಿಗೆ ಸರ್ಕಾರದವರು ಜಾಸ್ತಿ ಹಣವನ್ನು ಒದಗಿಸಿಕೊಡಬೇಕು. ನಿಮ್ಮ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡಿದರೆ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟಂತೆ ಕಾಣಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಸುಮಾರು ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವಂತಹ ಕಡೆಗಳಲ್ಲಿ ಒಂದು ಪರ್ಸೆಂಟ್ ಸಹ ಖರ್ಚು ಮಾಡುವಂತೆ ತಮ್ಮ ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಕಂಡು ಬರಲಿಲ್ಲ. ಇದರ ಬಗ್ಗೆ ತಾವು ನಿಜವಾಗಿಯೂ ಯೋಚನೆ ಮಾಡಬೇಕು. ಮತ್ತೆ Irrigation potential Tamil Nadu has utilised 68% of the existing Irrigation potential whereas Karnataka has utilised only 33%. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಾಸ್ತವಿಕವಾಗಿ ಯೋಚನೆ ಮಾಡಬೇಕು. ಇದರಲ್ಲಿ ಯಾವುದೇ ರೀತಿಯ ಪ್ರೋಗ್ರೆಸ್ ಇಲ್ಲ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಜಾಸ್ತಿ ಹೇಳಬೇಕಾಗುತ್ತದೆ. ಅದಕ್ಕಿಂತ ಮುಂಚಿತವಾಗಿ ನಮ್ಮ ಬಯಲುಸೀಮೆ ಪ್ರದೇಶದ ಬಗ್ಗೆ ಸ್ವಲ್ಪ ಜಾಸ್ತಿ ಹೇಳಿದರೆ ಒಳ್ಳೆಯದು. ನನ್ನ ಸದಸ್ಯ ಮಿತ್ರರು ಕೂಡ ಇದರ ಬಗ್ಗೆ ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಯಾವುದೇ ರೀತಿಯ ದೊಡ್ಡ ನೀರಾವರಿಗಳು ಇಲ್ಲ. ಕೋಲಾರ ಜಿಲ್ಲೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಅಂಕಿಅಂಶಗಳನ್ನು ನಾನು ಕೊಡುತ್ತೇನೆ. ಕೋಲಾರ ಜಿಲ್ಲೆಯ ಕಥೆಯನ್ನು ಸ್ವಲ್ಪ ಮಾನ್ಯ ಮಂತ್ರಿಗಳು ಕೇಳಬೇಕು. ಕರ್ನಾಟಕ ಅಟ್ ಎ ಗ್ಲಾನ್ಸ್ ೧೯೮೩–೮೪ರಲ್ಲಿ ಸ್ವಲ್ಪ ಕೆಲಸ ಶುರು ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಕೋಲಾರ ಜಿಲ್ಲೆ ೧೭ನೇ ಸ್ಥಾನದಲ್ಲಿ ಇದೆ. ತುಮಕೂರು ಬೆಂಗಳೂರು ಜಿಲ್ಲೆ ಕೂಡ ನಮ್ಮ ಜಿಲ್ಲೆಯ ಪಕ್ಕದಲ್ಲಿಯೇ ಇದೆ. ಸಾಮಾನ್ಯವಾಗಿ ಬೆಂಗಳೂರು ಕೋಲಾರ, ತುಮಕೂರು ಒಂದೇ ಸ್ಥಾನದಲ್ಲಿ ಬರುತ್ತವೆ. ಅಲ್ಲಿ ೧,೭೮,೪೭೯ ಎಕರೆ ಅನ್ ಕಲ್ಟಿವೇಟೆಡ್ ಲ್ಯಾಂಡ್ ಇದೆ. ಅದು ಸರ್ಕಾರದ ಅಂಕಿಅಂಶಗಳ ಪ್ರಕಾರ ಇದನ್ನು ತೆಗೆದುಕೊಂಡು ನೋಡಿದರೆ ಒಟ್ಟಾರೆ ಇರತಕ್ಕಂಥ ಸ್ವಾಲೋ ಲ್ಯಾಂಡ್ಸ್ ೭೭,೩೨೭ ಎಕರೆಗಳು ಇವೆ. ಆದರೆ ಇದರಲ್ಲಿ ಏರಿಯಾ ಇರಿಗೇಟೆಡ್ ಬೈ ಚಾನಲ್ಸ್ ಒಂದು ಎಕರೆ ಕೂಡ ಇಲ್ಲ.

೪–೩೦ ಪಿ.ಎಂ.

ಜೊತೆಗೆ ನಾವು ಈ ಟ್ರಾನ್ಸ್‌ಪೋರ್ಟ್ ಅಂಡ್ ಕಮ್ಯುನಿಕೇಷನ್ಸ್ ನೋಡಿದರೆ ಅದರಲ್ಲೂ ಕೂಡಾ ಪೂರ್ತಿ ಹಿಂದೆ ಬಿದ್ದಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಬೇರೆಯವರ ಬಗ್ಗೆ ಹಾಗೂ ಇಡೀ ಕರ್ನಾಟಕ ಅಭಿವೃದ್ಧಿ

ಆಗಬೇಕೆನ್ನುವುದರ ಬಗ್ಗೆ ನಿಜವಾಗಿಯೂ ಎರಡನೆಯ ಅಭಿಪ್ರಾಯ ಇಲ್ಲ. ನಿಮ್ಮ ವರದಿಯಲ್ಲಿ ೩೬ನೇ ಪೇಜ್ ತೆಗೆದುಕೊಂಡರೆ, ಪ್ರಗತಿಯಲ್ಲಿರುವ ಬೃಹತ್, ಮತ್ತು ಮಧ್ಯಮ ನೀರಾವರಿ ಯೋಜನೆಯ ಪ್ರಗತಿಯನ್ನು ತೋರಿಸುವ ಪಟ್ಟಿ ಇದೆ, ಅದು ೪೦ನೇ ಪೇಜ್‌ನಲ್ಲೂ ಕಂಟಿನ್ಯೂ ಆಗಿದೆ. ಇದರಲ್ಲಿ ಎಲ್ಲಾದರೂ ಸರಿ, ಯಾವುದರಲ್ಲಾದರೂ ಸರಿ, ಕೋಲಾರದಲ್ಲಿ ಇರುವ ಒಂದು ಪ್ರಾಜೆಕ್ಟ್ ತೋರಿಸಿ ಬಿಟ್ಟರೆ, ನಾನು ತಮಗೆ ನಮಸ್ಕಾರ ಮಾಡಿಬಿಡುತ್ತೇನೆ. ೭ ನೂರು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದೆ. ೭೪೯.೫೧ ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಟ್ಟಿದ್ದೇವೆಂದು ತಾವು ಹೇಳಿದ್ದೀರಿ. ಪ್ರಾಜೆಕ್ಟ್ ಎಸ್ಟಿಮೇಟ್ಸ್ ಇದೆ. ಹಣ ಖರ್ಚು ಮಾಡುತ್ತೀರಿ, ಇದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಇದರಲ್ಲಿ ನೀವು ಜಿಲ್ಲಾವಾರು ಪಟ್ಟಿಯನ್ನು ಕೊಟ್ಟಿದ್ದಾರೆ ಚೆನ್ನಾಗಿತ್ತು. ಬೆಂಗಳೂರು ತುಮಕೂರು ಕೋಲಾರ ಈ ಬಯಲುಸೀಮೆ ಪ್ರದೇಶಗಳು ಏನಿವೆ ಇಲ್ಲಿಗೆ ಯಾವ ಪ್ರಾಜೆಕ್ಟೂ ಕೊಟ್ಟಿಲ್ಲ. ನಿಜವಾಗಲೂ ಕೂಡಾ ನಾವು ನಮ್ಮ ಕಥೆ ಏನೆಂದು ಯೋಚನೆ ಮಾಡಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಈಗಿರುವ ಪರಿಸ್ಥಿತಿ ತಮಗೆ ಗೊತ್ತು. ವರ್ಷೇ ವರ್ಷೇ ಬರಗಾಲ, ಐದು ವರ್ಷದಿಂದ ಅಲ್ಲ, ಹತ್ತು ವರ್ಷದಿಂದ ಅಲ್ಲ. ಯಾವಾಗಲೂ ವರ್ಷೇ ವರ್ಷೇ ಬರಗಾಲ ಇರುತ್ತದೆ. ಬೆಂಗಳೂರು, ಕೋಲಾರ, ತುಮಕೂರು ಈ ಪ್ರದೇಶಗಳ ಕಡೆ ಬರಗಾಲ ಇದ್ದೇ ಇರುತ್ತದೆ. ಜನಗಳು ಸರಕಾರ ಮಾಡಿದ್ದು ಏನು ಎಂದು ಕೇಳುತ್ತಾರೆ. ಅದಕ್ಕೋಸ್ಕರ ನಾನು ಮಾನ್ಯ ದೇವೇಗೌಡರಲ್ಲಿ ಸ್ಪಷ್ಟವಾಗಿ ರಿಕ್ವೆಸ್ಟ್ ಮಾಡಿಕೊಳ್ಳುವುದು ಎಂದರೆ, ಕೋಲಾರ ಮೂರುನೂರು ಅಡಿ ಕೆಳಗಿದೆ, ತುಮಕೂರು ಕೆಳಗಿದೆ, ಕಾವೇರಿ ವಾಟರ್ ಸಪ್ಲೈ ಬಗ್ಗೆ ದೊಡ್ಡ ಪ್ರಾಜೆಕ್ಟ್ ಹಾಕಿ, ಅದನ್ನು ಕೋಲಾರಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಎಲ್ಲಾ ಅನುಕೂಲ ಉಂಟು. ಏನೋ ಸ್ವಲ್ಪ ಮೇಲುಗಡೆ ಇದ್ದಿದ್ದರೆ ಕಾವೇರಿ ನೀರನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಹೇಮಾವತಿ ನೀರನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ, ಎಂದು ಹೇಳಬಹುದಾಗಿತ್ತು. ತುಮಕೂರಿನವರು ಯಾರೂ ಇರಿಗೇಷನ್ ಮಿನಿಸ್ಟರ್ ಇಲ್ಲ, ಯಾವಾಗಲೂ ಹಾಸನದವರು ಮೈಸೂರಿನವರು ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಆಗಿಹೋಗಿದ್ದಾರೆ. ನಮ್ಮ ಕೋಲಾರದವರು ಯಾರೂ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಇಲ್ಲ. ಆದುದರಿಂದ ಇದರ ಬಗ್ಗೆ ಯಾರೂ ವಿಚಾರ ಮಾಡಿಲ್ಲ. ಮಾನ್ಯ ದೇವೇಗೌಡರು ಬಹಳ ಅನುಭವಶಾಲಿಗಳು. ಅವರು ಆಗಾಗ ಕೋಲಾರಕ್ಕೆ ಬರುತ್ತಿರುತ್ತಾರೆ. ಕೋಲಾರಕ್ಕೆ ಏನೂ ಮಾಡಲಿಲ್ಲ. ನಮಗೆ ಪ್ರಶ್ನೆ ಹಾಕುವುದಕ್ಕೂ ಆಗಲ್ಲ. ನಮಗಿರುವುದು ನಾಲ್ಕೇ ನದಿಗಳು ಪಾಲಾರ್, ಪೆನ್ನಾರ್, ಚಿತ್ರಾವತಿ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಲಕ್ಷ್ಮೀಪತಿಯವರು ಮೈನರ್ ಇರಿಗೇಷನ್ ಮಿನಿಸ್ಟರ್ ಆಗಿದ್ದರು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಷ್ಮೀಪತಿಯವರು ಮೈನರ್ ಇರಿಗೇಷನ್ ಮಿನಿಸ್ಟರ್ ಏನೋ ಆಗಿದ್ದರು. ಲಕ್ಷ್ಮೀಪತಿ ಗೋವಿಂದಾ ಗೋವಿಂದಾ ಎಂದು ಕುಳಿತುಕೊಂಡರು. ಅವರು ಇರುವಾಗ ಏನೂ ಮಾಡಲಿಲ್ಲ. ನಮ್ಮ ಊರಿಗೆ ಅವರು ಏನೂ ಮಾಡಲಿಲ್ಲ. ಈಗ ಅವರು ಮಧ್ಯಪಾನ ಸಂಯಮ ಮಂಡಲಿಯಲ್ಲಿದ್ದಾರೆ, ಸಂತೋಷವಾಗಿ ಇರಲಿ, ಅವರು ನಮ್ಮ ಊರಿಗೆ ಏನೂ ಮಾಡಲಿಲ್ಲ. ಅವರ ಊರಿಗೂ ಏನೂ ಮಾಡಿಕೊಳ್ಳಲಿಲ್ಲ. ಮೈನರ್ ಇರಿಗೇಷನ್ ವರ್ಕ್ಸ್ ಯಾವುದೂ ಸ್ಯಾಂಕ್ಷನ್ ಮಾಡಲಿಲ್ಲ. ಅವರು ಕೋಲಾರದ ಬಗ್ಗೆ ಮಲತಾಯಿ ಧೋರಣೆ ಮಾಡಿರುತ್ತಾರೆ. ನಮ್ಮವರು ಬರುತ್ತಾರೆ, ನೋಡುತ್ತಾರೆ, ಸಂತೋಷವಾಗಿ ಮಾತನಾಡುತ್ತಾರೆ, ಆದರೆ ದುಡ್ಡು ಮಾತ್ರ ಕೊಡುವುದಿಲ್ಲ. ಆದ್ದರಿಂದ ಸ್ಪಷ್ಟವಾಗಿ ನಾನು ಕೇಳುತ್ತೇನೆ ಬೇರೆ ಕಡೆ ಎಂಟು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೀರಿ. ಇದನ್ನು ಹತ್ತೊಂಭತ್ತು ಜಿಲ್ಲೆಗಳಿಗೆ ಹಂಚಿದರೂ ಪ್ರತಿ ಜಿಲ್ಲೆಗೆ ೫೦ ಲಕ್ಷ ರೂಪಾಯಿಗಳು ಬರಬಹುದು. ಇಂತಹ ಒಂದು ಪರಿಸ್ಥಿತಿ ಇದೆ. ಅದಕ್ಕೋಸ್ಕರ ನಾನು ಸ್ಪಷ್ಟವಾಗಿ ಕೇಳತಕ್ಕದು ಈಗಿನಿಂದಲಾದರೂ ಸಹ ನಿರ್ದಿಷ್ಟವಾದ ಒಂದು ಕಾರ್ಯಕ್ರಮ ಹಾಕಿಕೊಂಡು, ಕೋಲಾರ ವಾಟರ್ ಫೆಸಿಲಿಟಿ ಬಗ್ಗೆ ಹೆಚ್ಚು ಗಮನ ಕೊಡಬೇಕು. ನಮ್ಮಲ್ಲಿ ಇರತಕ್ಕವುಗಳನ್ನು ಕೆರೆಗಳು ಎಂದು ಹೇಳುವುದಕ್ಕೆ ಆಗುವುದಿಲ್ಲ. ಅವು ಸಣ್ಣ ಕುಂಟೆಗಳು. ಎಲ್ಲಾವರಲ್ಲೂ ಸಿಲ್ಟ್ ಅಪ್ ಆಗಿ ಹೋಗಿದೆ. ಸಿಲ್ಟ್ ರಿಮೂವಲ್ ಮಾಡುವುದಕ್ಕೆ ಏನಾದರೂ ಪ್ರೋಗ್ರಾಂ ಹಾಕಿಕೊಳ್ಳುತ್ತಿದ್ದಾರೆಯೇ ಎಂದರೆ ಅದೂ ಇಲ್ಲ. ಆದಕಾರಣ ಆಧುನಿಕ ಯಂತ್ರಗಳನ್ನು ತರಿಸಿ, ಸಿಲ್ಟ್ ರಿಮೂವ್ ಮಾಡಿ. ಇರುವ ಸ್ಟೋರೇಜ್ ಕೆಪ್ಯಾಸಿಟಿ ಹೆಚ್ಚು ಮಾಡುವುದಕ್ಕೆ ಅವಕಾಶ ಕೊಡಬೇಕು. ನಮ್ಮ ಜಿಲ್ಲೆಗಿರುವ ಒಂದೇ ಒಂದು ನೀರಿನ ಸೋರ್ಸ್ ಎಂದರೆ, ಅಂಡರ್ ಗ್ರೌಂಡ್ ವಾಟರ್. ಅದರ ಬಗ್ಗೆ ನಾನು ಮಾನ್ಯ ಸರಕಾರವನ್ನು ಕೇಳುತ್ತಿದ್ದೇನೆ, ಈಗಾಗಲೇ ಮುಳುಬಾಗಿಲು ತಾಲ್ಲೂಕು ಮತ್ತು ಗೌರಿಬಿದನೂರು ತಾಲ್ಲೂಕುಗಳನ್ನು ಡ್ರಾಟ್ ಏರಿಯಾ ಎಂದು

ಡಿಕ್ಲೇರ್ ಮಾಡಿರುತ್ತಾರೆಂದು ತಿಳಿದು ಬಂದಿದೆ. ಆದರೆ ಅಲ್ಲಿ ಬೇಕಾದಷ್ಟು ನೀರು ಬೀಳುತ್ತದೆ. ಯಾರೋ ಒಬ್ಬರು ಮಹಾನುಭಾವರು ಹೋದರು, ನಾಲ್ಕು ಕಡೆ ಟೆಸ್ಟ್ ಮಾಡಿದರು, ಡ್ರಾಟ್ ಏರಿಯಾ ಎಂದು ಡಿಕ್ಲೇರ್ ಮಾಡಿಬಿಟ್ಟರೆ, ನಮ್ಮನ್ನು ಯಾರೂ ಕರೆಯುವುದಿಲ್ಲ. ಬೆಂಗಳೂರಿನಲ್ಲೋ ಎಲ್ಲೋ ಸುಖವಾಗಿದ್ದು ಬಿಡಬಹುದು, ಮಜಾ ಮಾಡಬಹುದು ಎಂದು ಹೇಳಿ, ಆದನ್ನು ಡ್ರಾಟ್ ಏರಿಯಾ ಎಂದು ಡಿಕ್ಲೇರ್ ಮಾಡಿದರು. ಪ್ರೈವೇಟ್ ಬೋರ್‌ವೆಲ್‌ಗಳಲ್ಲಿ ಅಲ್ಲಿ ೫ ಸಾವಿರದಿಂದ ೮ ಸಾವಿರ ಗ್ಯಾಲನ್‌ವರೆಗೆ ನೀರು ಸಿಗುತ್ತದೆ. ಆದರೆ ಸರಕಾರದವರು ಹೋದರೆ ಅದು ಡ್ರಾಟ್ ಏರಿಯಾ ಎಂದು ಕಾಣಿಸುತ್ತದೆ. ಆದಕಾರಣ ಸರಕಾರದವರು ಇದರ ಬಗ್ಗೆ ಸ್ಪಷ್ಟವಾಗಿ ಒಂದು ಪ್ಲಾನ್ ಹಾಕಬೇಕು. ಅಲ್ಲಿರುವ ಅಂಡರ್‌ಗ್ರೌಂಡ್ ವಾಟರ್ ರಿಸೋರ್ಸಸ್‌ನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಗೌರಿಬಿದನೂರಿನಲ್ಲಿ ೬ ಕೋಟಿ ರೂಪಾಯಿಗಳ ಕಾರ್ಖಾನೆ ಇದ್ದರೂ ಸಹ, ಅಲ್ಲಿ ಒಂದು ೫ ನೂರು ಬೋರ್‌ವೆಲ್ ಹಾಕಿದ್ದರೆ ಅದೂ ಉಳಿಯುತ್ತಿತ್ತು. ಅದನ್ನು ಹಾಕದೇ ಗೌರಿಬಿದನೂರು ಸಕ್ಕರೆ ಕಾರ್ಖಾನೆ ಹೋಯಿತು, ಇದರಿಂದ ೮ ಸಾವಿರ ಜನ ರೈತರಿಗೆ ಅನ್ಯಾಯ ಆಯಿತು. ಜಿಲ್ಲೆಯಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಕೂಡಾ ಕೆರೆಗಳು ಇವೆ. ಎಲ್ಲೆಲ್ಲಿ ಮುಖ್ಯವಾದ ಕೆರೆಗಳು ಇವೆ, ಆ ಕೆರೆಗಳಲ್ಲಿ ಬೋರ್‌ವೆಲ್ ಹಾಕಿದರೆ ಸಾಕಷ್ಟು ನೀರು ಸಿಗುತ್ತದೆ. ಆ ಕೆರೆಗಳಲ್ಲಿ ಬಾವಿಗಳನ್ನು ತೆಗೆದರೂ ಕೂಡಾ ಸಾಕಷ್ಟು ನೀರು ಸಿಗುತ್ತದೆ. ಆದಕಾರಣ ಇದರ ಬಗ್ಗೆ ತಾವು ಒಂದು ಮಾಸ್ಟರ್ ಪ್ಲಾನ್ ಹಾಕಬೇಕು. ಹಾಕದೇ ಇದ್ದರೆ, ಇನ್ನು ನೂರು ವರ್ಷ ಹೋದರೆ ಕೋಲಾರದಲ್ಲಿ ಕುಡಿಯುವ ನೀರೂ ಸಿಗುವುದಿಲ್ಲ. ಕೋಲಾರದ ಜನ ಬೆಂಗಳೂರಿಗೆ ವಲಸೆ ಬರುವ ಪರಿಸ್ಥಿತಿ ಬರುತ್ತದೆ. ಮಳೆಯೇ ಆಗಿಲ್ಲ. ಮಾನ್ಯ ಬೊಮ್ಮಾಯಿಯವರು ಹೇಳಿದರು, ಕೋಲಾರ ಜಿಲ್ಲೆಯಲ್ಲಿ ಪರ್ಸಂಟೇಜ್ ಆಫ್ ಸೋಯಿಂಗ್ ೦.೨ ಪರ್ಸೆಂಟ್ ಎಂದು, ಇದರಿಂದ ಎಷ್ಟು ಸೀರಿಯಸ್‌ನೆಸ್ ಇದೆ ಎಂದು ಯೋಚನೆ ಮಾಡಬಹುದು. ಕೋಲಾರದ ಬಗ್ಗೆ ಎಲ್ಲರೂ ಮಲತಾಯಿ ಧೋರಣೆ ತೋರಿಸುತ್ತಿದ್ದಾರೆ. ಇದು ತಪ್ಪಬೇಕು. ಕೋಲಾರ ಜಿಲ್ಲೆಯಲ್ಲಿ ವಾಟರ್ ಪೊಟೆನ್‌ಷಿಯಲ್ ಎಷ್ಟಿದೆ, ಅಂಡರ್‌ಗ್ರೌಂಡ್ ವಾಟರ್ ರಿಸೋರ್ಸಸ್ ಏನಿದೆ, ಅದನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕು. ಬೇರೆ ಜಿಲ್ಲೆಗಳಿಗೆ ಕೊಡುವ ಹಾಗೆ, ಕೋಲಾರ ಜಿಲ್ಲೆಗೆ ವಿಶೇಷವಾಗಿ ನ್ಯಾಯವಾಗಿ ಹಣ ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ನನ್ನ ಪ್ರಾರ್ಥನೆ. ನಮ್ಮ ಜಿಲ್ಲೆಯಲ್ಲಿ ಅನೇಕ ಇರಿಗೇಷನ್ ಸ್ಕೀಮ್ಸ್ ಇವೆ. ಪಾಲಾರ್ ಡೆವೆಲಪ್ ಮಾಡಿ ಎಂದು ಕೇಳಿದರೆ, ಒಂದೇ ಒಂದು ಮಾತಿನಲ್ಲಿ ತಪ್ಪಿಸಿಕೊಂಡು ಬಿಟ್ಟರು. ಉಪಾಯವಾಗಿ ತಪ್ಪಿಸಿಕೊಳ್ಳುತ್ತಾರೆ. ಮಾನ್ಯ ದೇವೇಗೌಡರು, ಬಹಳ ಎಕ್ಸ್‌ಪೀರಿಯನ್ಸ್ ಉಳ್ಳವರು. ಪಾಲಾರ್, ಪೆನ್ನಾರ್ ಇಂಟರ್‌ಸ್ಟೇಟ್ ರಿವರ್‌ಗಳು, ಅಗ್ರಿಮೆಂಟ್ ಇದೆ, ಎಂದು ಹೇಳುತ್ತಾರೆ. ಇದು ನಿಜವಾಗಿಯೂ ಕೂಡ್ ಬಹಳ ಉಪಾಯವಾಗಿ ತಪ್ಪಿಸಿಕೊಳ್ಳುವ, ಜವಾಬ್ದಾರಿಯಿಂದ ನುಸುಳಿಕೊಳ್ಳುವ ಪ್ರಯತ್ನ ಎಂದು ಹೇಳದೆ ವಿಧಿ ಇಲ್ಲ. ಹೇಮಾವತಿ ಪ್ರಾಜೆಕ್ಟ್ ಮಾಡಿದಾಗ ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಇತ್ತು. ಆದಕ್ಕೆ ೭ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಖರ್ಚು ಮಾಡಿದ ಮೇಲೆ ಅದನ್ನು ಯಾರೂ ಕೇಳುವುದಕ್ಕೆ ಬರುವುದಿಲ್ಲ. ಕೋಲಾರ ಜಿಲ್ಲೆಯಲ್ಲೂ ಪಾಲಾರ್ ಅಭಿವೃದ್ಧಿಗೆ ೫೦ ಲಕ್ಷ ಅಥವಾ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಏನೂ ಆಗುವುದಿಲ್ಲ. ತಮಿಳುನಾಡಿನವರು ಗಲಾಟೆ ಮಾಡುತ್ತಾರೆ, ಆಂಧ್ರದವರು ಗಲಾಟೆ ಮಾಡುತ್ತಾರೆ ಎಂದರೆ, ಇಂಟರ್ ಸ್ಟೇಟ್ ರಿವರ್ ಅಗ್ರಿಮೆಂಟ್ ಆಗದೇ ಇರುವ ರಿವರ್ ಯಾವುದೂ ಎಲ್ಲೂ ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಬೆಂಗಾಡಾಗಿರುವ ಕೋಲಾರಕ್ಕೆ ಮಾತ್ರ ಇಂಟರ್ ಸ್ಟೇಟ್ ರಿವರ್ ಅಗ್ರಿಮೆಂಟ್ ಇದೆ ಎಂದು ಹೇಳುವುದು ಬೇಡ. ಅಲ್ಲಿರುವ ನೀರನ್ನು ಪೂರ್ತಿಯಾಗಿ ಯುಟಿಲೈಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಿ, ಇದರ ಬಗ್ಗೆ ಸೀರಿಯಸ್ ಆಗಿ ತಾವು ಯೋಚನೆ ಮಾಡಬೇಕೆಂದು ನನ್ನ ಪ್ರಾರ್ಥನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಕೆಲವು ಸಣ್ಣ ಸಣ್ಣ ಪ್ರಾಜೆಕ್ಟ್ಸ್ ಇವೆ. ಮಾನ್ಯ ದೇವೇಗೌಡರಿಗೆ ಇದರ ಬಗ್ಗೆ ನಾನು ಹೇಳಿದ್ದೇನೆ, ನಾಲ್ಕೈದು ಅರ್ಜಿ ಕೊಟ್ಟಿದ್ದೇವೆ. ಎಲ್ಲಾ ಚಿಕ್ಕ ಚಿಕ್ಕ ಪ್ರಾಜೆಕ್ಟ್ಸ್: ಉದಾಹರಣೆಗೆ ಗೌಡನಗೆರೆ ಪ್ರಾಜೆಕ್ಟ್ ಇದೆ, ಅದಕ್ಕೆ ೧೦ ಲಕ್ಷ, ೨೦ ಲಕ್ಷ ಖರ್ಚು ಮಾಡಿದರೆ, ಆ ಕೆರೆಯಿಂದ ನೀರು ತೆಗೆದುಕೊಂಡು ಹೋದರೆ ಸುಮಾರು ೫೦ ಹಳ್ಳಿಗಳಿಗೆ ಅನುಕೂಲ ಆಗುತ್ತದೆ, ದುರಾದೃಷ್ಟವಶಾತ್ ೫ ವರ್ಷದಿಂದ ಅದನ್ನು ಮೇಲೆ ಕಳುಹಿಸುವುದು, ಪುನಃ ಅಲ್ಲಿಂದ ಅದನ್ನು ಕೆಳಗೆ ಕಳುಹಿಸುವುದು ಇಷ್ಟರಲ್ಲೇ ಇದೆ. ಏನು ದುರಾದೃಷ್ಟವೋ ಏನೋ ಅರ್ಥವಾಗುತ್ತಿಲ್ಲ. ಮಾನ್ಯ ದೇವೇಗೌಡರು ಹೇಳಿದರು, ನಾನು ಕನ್‌ಸ್ಟ್ರಕ್ಟೀವ್ ಕ್ರಿಟಿಸಿಸಮ್ ವೆಲ್‌ಕಮ್ ಮಾಡುತ್ತೇನೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಇದು ಕನ್‌ಸ್ಟ್ರಕ್ಟೀವ್ ಕ್ರಿಟಿಸಿಸಮ್ ಈ ಇಲಾಖೆ ಕಂಟ್ರ್ಯಾಕ್ಟರ್ ಓರಿಯಂಟೆಡ್ ಡಿಪಾರ್ಟ್‌ಮೆಂಟ್ ಆಗಿದೆ. ಕಂಟ್ರ್ಯಾಕ್ಟರ್‌ಗೆ ಕೆಲಸ

ಬೇಕೆಂದರೆ. ೨೦ ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಆಗಲಿ ಎಕ್ಸಿಕ್ಯುಟೀವ್ ಎಂಜಿನಿಯರ್ ರೆಕಮೆಂಡ್ ಮಾಡಿ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗೆ ಕಳುಹಿಸುತ್ತಾರೆ. ಅವರ ತಲೆಯ ಮೇಲೆ ಕುಳಿತು ಕೊಂಡು ಎಲ್ಲೆಲ್ಲಿ ಏನೇನು ಕೊಡಬೇಕೋ, ಗಂಟು ಬಿಚ್ಚಿ, ಮಂಜೂರು ಮಾಡಿಸಿಕೊಂಡು ಬರುತ್ತಾರೆ ಬೇರೆಯದಕ್ಕೆ ೧೦ ವರ್ಷ ಆಗಲೀ ಟೆಕ್ನಿಕಲ್ ಅಬ್ಜೆಕ್ಷನ್. ಒಬ್ಬರು ಎಂ.ಎಲ್.ಎ. ಬರುತ್ತಾರೆ, ಪ್ರಯತ್ನ ಮಾಡುತ್ತಾರೆ, ಹತ್ತು ವರ್ಷ ಕಳೆಯುತ್ತದೆ. ಆಮೇಲೆ ಇನ್ನೊಬ್ಬರು ಎಂ.ಎಲ್.ಎ. ಬರುತ್ತಾರೆ ಪ್ರಯತ್ನ ಮಾಡುತ್ತಾರೆ. ತೆಲುಗಿನಲ್ಲಿ ಒಂದು ಮಾತು ಹೇಳುತ್ತಾರೆ. ರೆಡ್ಡೊಚ್ಚೆ ಮೊದಲೆತ್‌ಕೋ ಎಂದು, ಊರಿನ ಗೌಡ ಬಂದರೆ, ಪುನಃ ದುರ್ಯೋಧನ ಬರಬೇಕು, ಧರ್ಮರಾಜ ಬರಬೇಕು. ಹೀಗೆ ಶುರುವಾಗುತ್ತದೆ. ಬೈರೆಗೌಡರು ಬಂದರು ಒಂದು ವರ್ಷ ಪ್ರಯತ್ನ ಮಾಡಿದರು ಈಗ ನಾನು ಶುರು ಮಾಡಿರುತ್ತೇನೆ. ಪಿ.ಡಬ್ಲ್ಯು.ಡಿ. ಸೆಕ್ರೆಟರಿ ನೋಡುವುದು, ಚೀಫ್ ಎಂಜಿನಿಯರ್ ನೋಡುವುದು, ಮಾನ್ಯ ದೇವೇಗೌಡರಿಗೆ ಮೆಮೊರಾಂಡಂ ಕೊಟ್ಟಿದ್ದೂ ಕೊಟ್ಟಿದ್ದೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ ಸುಮ್ಮನೆ ಕುಳಿತುಕೊಳ್ಳಿ, ಅವರು ಮಾತನಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಇರುವ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ನಿಮಗೆ ಬೇಜಾರಾಗಬಹುದು. ೪ ಸಾರಿ ಇವರನ್ನು ನೋಡುತ್ತಿದ್ದೇನೆ. ಆದರೆ ಪಾಸಿಟೀವ್ ರೆಸ್ಪಾನ್ಸ್ ಇಲ್ಲ. ಅರ್ಜಿ ಕೊಡುತ್ತೇವೆ, ಅರ್ಜಿ ವಾಪಸ್ ಬರುತ್ತದೆ, ಅದಕ್ಕೆ ಎಂಡಾರ್ಸ್‌ಮೆಂಟ್ ಕೊಡುತ್ತಾರೆ. ಎಂಡಾರ್ಸ್‌ಮೆಂಟ್ ಏನು ಕೊಡುತ್ತಾರೆ ಎಂದರೆ, ಸಂತೋಷ, ನಿಮ್ಮ ಅರ್ಜಿ ಸ್ವೀಕೃತವಾಯಿತು. ಕೆಳಗಡೆ ಕಳುಹಿಸಿಕೊಟ್ಟಿದ್ದೇವೆ ಎಂದು ಬರುತ್ತದೆ. ಕೆಳಗಡೆ ಕಳುಹಿಸಲಾಯಿತು, ಆಮೇಲೆ ಏನಾಯಿತು ಎಂದು ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಒಂದು ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್ ಇಡಬೇಕು. ಪೆನ್ನಾರ್, ಪಾಲಾರ್ ನೀರಿದ್ದ ಹಾಗೆ ನಮ್ಮ ಕಥೆ ಆಗಿದೆ. ನಮ್ಮ ಜಿಲ್ಲೆಯಲ್ಲಿ ಕ್ಷಾಮ ದಿಂದ ದಿನವೂ ಜನ ಸಾಯುತ್ತಿದ್ದಾರೆ. ಇಂತಹ ಜಿಲ್ಲೆಯಲ್ಲೂ ಯಾವುದು ಒಂದೂ ಪ್ರಾಜೆಕ್ಟ್ ತಯಾರು ಮಾಡುವುದು ಕಷ್ಟ. ಹಾಗೂ ಪ್ರಾಜೆಕ್ಟ್ ತಯಾರು ಮಾಡಿಕೊಟ್ಟರೆ ಅದಕ್ಕೆ ಆದ್ಯತೆ ಕೊಡೋಣ, ಕೆಲಸ ತೆಗೆದುಕೊಳ್ಳೋಣ ಎನ್ನುವ ಪರಿಸ್ಥಿತಿ ಇಲ್ಲವೇ ಇಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ನಾನು ಕೇಳಿಕೊಳ್ಳುತ್ತೇನೆ. ನಮ್ಮ ಕೋಲಾರ ಜಿಲ್ಲೆಗೆ ಮಲತಾಯಿ ಧೋರಣೆ ಬೇಡ. ಅವರು ಬಂಗಾರ ಕೊಡುತ್ತಾರೆ, ಹಾಲು ಕೊಡುತ್ತಾರೆ, ತರಕಾರಿ ಕೊಡುತ್ತಾರೆ. ಎಲ್ಲಾ ಕೊಟ್ಟಿದ್ದರೂ ಕೂಡ ನಿಮ್ಮ ಡಿಪಾರ್ಟ್‌ಮೆಂಟಿನವರು ಈ ಜಿಲ್ಲೆಯ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಯಾವುದರಲ್ಲೇ ತೆಗೆದುಕೊಳ್ಳಿ, ೧೦ರಲ್ಲಿ ಒಂದು ಪಾಲು ಕೊಟ್ಟಿದ್ದಾರೆ.

ಅಧ್ಯಕ್ಷರು.—ತಾವು ಸಾಕು ಮುಗಿಸಿ, ಇನ್ನೊಬ್ಬರು ಮಾತನಾಡಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಹತ್ತರಲ್ಲಿ ಒಂದು ಭಾಗ ಮಾತ್ರ ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಗೆ ಎಷ್ಟು ರೋಡ್ಸ್ ಕೊಟ್ಟಿದ್ದಾರೆ, ಎಷ್ಟು ಸೇತುವೆ ಕೊಟ್ಟಿದ್ದಾರೆ ? ನಿಜವಾಗಿಯೂ ಇದು ತಪ್ಪಬೇಕು. ಕೋಲಾರ ಜಿಲ್ಲೆ ಜನತಾ ಸರ್ಕಾರಕ್ಕೆ ಅಧಿಕಾರ ಕೊಟ್ಟಿದೆ. ಕೋಲಾರ ಜಿಲ್ಲೆಯಲ್ಲಿ ೧೨ ಜನರಲ್ಲಿ ೧೧ ಜನರನ್ನು ಆರಿಸಿಕೊಟ್ಟಿದ್ದಾರೆ. ಮಾನ್ಯ ದೇವೇಗೌಡರೂ ಕೂಡ ಜನತಾ ಸರ್ಕಾರ ದಲ್ಲಿದ್ದಾರೆ. ಕೋಲಾರ ಜಿಲ್ಲೆಯನ್ನು ಉದ್ಧಾರ ಮಾಡುತ್ತಾರೆಂದು ಅಲ್ಲಿಯ ಜನತೆ ತಮ್ಮನ್ನು ಆರಿಸಿದ್ದಾರೆ. ಸದುದ್ದೇಶವನ್ನು ತೋರಿಸಿದರೆ ನಾವು ಸಂತೋಷಪಡುತ್ತೇವೆ. ನಾವು ಏನಾದರೂ ಮಂತ್ರಿಗಳಿಗೆ ಮನವಿ ಸಲ್ಲಿಸಿದರೆ ನಮಗೆ ಅವರಿಂದ ಎಂಡಾರ್ಸ್‌ಮೆಂಟ್ ಬರುತ್ತದೆ. ಎಂಡಾರ್ಸ್‌ಮೆಂಟ್ ಬಂತು ಎಂದರೆ ಒಂದು ಸಾರಿ ಸಂತೋಷಪಡುತ್ತೇವೆ. ಎರಡನೇ ಸಾರಿ ಎಂಡಾರ್ಸ್‌ಮೆಂಟ್ ನೋಡಿ ಹೊಟ್ಟೆ ತುಂಬುವುದಿಲ್ಲ. ಕೊಟ್ಟ ಮನವಿಗಳು ಕಾರ್ಯರೂಪದಲ್ಲಿ ಬರಬೇಕು. ಇದು ಸ್ವಲ್ಪ ಗಂಭೀರ ವಾದ ಸಮಸ್ಯೆ. ಶ್ರೀಮಾನ್ ರಾಜಗೋಪಾಲಚಾರಿಯವರು ಕೂಡ ಹೇಳುತ್ತಿದ್ದರು. ಪಿ.ಡಬ್ಲ್ಯು.ಡಿ. ಇಲಾಖೆ ದೇಶಕ್ಕೆ ನಂ. ೧ ಶತ್ರು ಎಂದು. ಎಲ್ಲರೂ ಲಂಚ ತೆಗೆದುಕೊಳ್ಳುತ್ತಾರೆಂದು ನಾನು ಹೇಳುವು ದಿಲ್ಲ. ಈಗಲೂ ಕೂಡ ಅದೇ ಪರಿಸ್ಥಿತಿ ಇದೆ. ಈ ಲಂಚದ ಬಗ್ಗೆ ಪರ್‌ಸೆಂಟೇಜ್ ಒಬ್ಬ ಜೂನಿಯರ್ ಇಂಜಿನಿಯರ್‌ಗೆ ಎಷ್ಟು, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಎಷ್ಟು, ಎಕ್ಸಿಕ್ಯುಟಿವ್ ಇಂಜಿನಿ ಯರ್‌ಗೆ ಎಷ್ಟು, ಘಟ್ಟ ಘಟ್ಟಗಳಲ್ಲಿ ಎಷ್ಟು ಎಂಬುದನ್ನು ರೀಸರ್ಚ್ ಮಾಡಬೇಕು. ನಮ್ಮ ರಾಜ್ಯ ದಲ್ಲಿ ೪೦ ಪರ್ಸೆಂಟ್ ಎಂದು ತೀರ್ಮಾನವಾಯಿತು. ನನ್ನ ರೀಸರ್ಚ್ ಪ್ರಕಾರ ಎಷ್ಟು ನೋಡಿದರೂ ಸರಿಯಾಗಿ ಸಿಗಲಿಲ್ಲ. ಎಕ್ಸಿಕ್ಯುಟೀವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರನ್ನೇ ಕೇಳಿದೆ. ಏನೂ ಮಾಡಿದರೂ ೧೦ ಪರ್ಸೆಂಟಿಗಿಂತ ಜಾಸ್ತಿ ಹೋಗುವುದಿಲ್ಲ ಈ ಮಾಮೂಲು ಎಂದು, ಅದು ಅಲ್ಲಿಗೆ ಮುಕ್ತಾಯವಾಯಿತು. ತಮಿಳುನಾಡಿನಲ್ಲಿ ನಮ್ಮ ಸ್ನೇಹಿತರು ಇದ್ದಾರೆ. ಅಲ್ಲಿ

ಸ್ವಲ್ಪ ನೋಡೋಣ ಎಂದು ಹೋಗಿದ್ದೆ. ಅಲ್ಲಿ ೧೫ ಪರ್ಸೆಂಟ್ ಇದೆ. ಆಂಧ್ರದಲ್ಲಿ ಸ್ವಲ್ಪ ಜಾಸ್ತಿ ೪೦ ಪರ್ಸೆಂಟ್. ಈ ರೀತಿಯಲ್ಲಿ ಮಾಮೂಲು ಹೋದರೆ, ಕಂಟ್ರಾಕ್ಟರಿಗೆ ೨೦ ಪರ್ಸೆಂಟ್ ಇಡಲೇ ಬೇಕಾಗುತ್ತದೆ. ಒಂದು ಕೆಲಸಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೆ, ಅಲ್ಲಿ ಖರ್ಚಾಗುವುದು ೪೦೦ ಕೋಟಿ ರೂಪಾಯಿಗಳು ಮಾತ್ರ. ನಿಜವಾಗಿಯೂ ಒಂದು ದೃಷ್ಟಿಯಿಂದ ಮಾನ್ಯ ದೇವೇಗೌಡರನ್ನು ಮೆಚ್ಚಬೇಕು. ೭–೮ ಜನರನ್ನು ಸಸ್ಪೆಂಡ್ ಮಾಡಿದರು. ಸ್ವಲ್ಪ ಭಯ ವಾದರೂ ಅವರಿಗೆ ಬಂತು. ಅದು ಏನೋ ಆರಂಭ ಶೂರತ್ವವೋ ಏನೋ ! ದೇವೇಗೌಡರ ಟೆಂಪೋವನ್ನು ನೋಡಬೇಕು. ೪೦ ಪರ್ಸೆಂಟ್ ಮಾಮೂಲು ಎಂದರೆ ದೇಶದ ಗತಿ ಏನು ? ಇದರಲ್ಲಿ ಕೆಲವರು ನಿಷ್ಪಾಪಂತರೂ ಇದ್ದಾರೆ. ಒಟ್ಟಿನಲ್ಲಿ ಈ ಮಾಮೂಲು ಇಷ್ಟು ಜಾಸ್ತಿ ಆಗಬಾರದು.

ಅಧ್ಯಕ್ಷರು.—ತಾವು ೨೫ ನಿಮಿಷ ತೆಗೆದುಕೊಂಡಿದ್ದೀರಿ, ಇಲ್ಲಿ ಕೇಳಿ, ಎಲ್ಲರಿಗೂ ಅವಕಾಶ ಕೊಡ ಬೇಕಾಗುತ್ತದೆ ಬೇಗ ಮುಗಿಸಿ. ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಮಾನ್ಯ ದೇವೇಗೌಡರನ್ನು ಈ ಪರಿಸ್ಥಿತಿಯನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ ಮಾಮೂಲನ್ನು ಕಂಟ್ರೋಲ್ ಮಾಡಬೇಕು ಇಲ್ಲದೇ ಹೋದರೆ ಇದು ಮೇಲಕ್ಕೆ ಹೋಗುತ್ತದೆ. ಈ ವರ್ಷ ಒಂದು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಮುಂದಿನ ವರ್ಷ ೧೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಂದು ಕೆಲಸ ಶುರು ಮಾಡಿದರೆ ೨–೩ ವರ್ಷಗಳನ್ನು ತೆಗೆದುಕೊಂಡಿರುತ್ತಾರೆ. ಆ ವಿಷ್ಯ ಆಡಳಿತಕ್ಕೆ ನಮ್ಮ ಕರ್ನಾಟಕ ಹೆಸರುವಾಸಿಯಾಗಿದೆ. ಆಂಧ್ರದಲ್ಲಿ ಕೊಟ್ಟ ಕೆಲಸವನ್ನು ತಕ್ಷಣ ಪೂರೈಸುವ ಕ್ರಮ ಇದೆ. ಇಲ್ಲಿಯೂ ಕೂಡ ಅಂತಹ ಕಾರ್ಯಕ್ರಮ ಬರಬೇಕು. ಇಲ್ಲದೇ ಹೋದರೆ ಜನ ಬೈಯುತ್ತಾರೆ, ಗೇಲಿ ಮಾಡುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಮುಳಬಾಗಿಲು, ಮದನಪಲ್ಲಿ ಅಥವಾ ಬೇರೆ ಯಾವು ದಾದರೂ ರೋಡನ್ನು ತೆಗೆದುಕೊಳ್ಳಿ. ಒಂದು ಕೂಡ ಸರಿಯಾಗಿ ಇರುವುದಿಲ್ಲ. ನಮ್ಮ ರೋಡು ಗಳಲ್ಲಿ ಗರ್ಭಿಣಿ ಸ್ತ್ರೀಯರು ಓಡಾಡಿದರೆ ಬಹಳ ಸುಲಭವಾಗಿ ಪ್ರಸವವಾಗುತ್ತದೆ. ಈ ರೋಡುಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಆಂಧ್ರದಲ್ಲಿ, ತಮಿಳುನಾಡಿನಲ್ಲಿ ರೋಡುಗಳು ಚೆನ್ನಾಗಿವೆ. ನಮ್ಮ ಕರ್ನಾಟಕದಲ್ಲಿ ಈ ರೋಡುಗಳನ್ನು ನೋಡಿದರೆ, ಅಲ್ಲಿ ಇಲ್ಲಿ ಗುಣಿಗಳು ಬಿದ್ದಿರುತ್ತವೆ. ಇಂತಹ ಪರಿಸ್ಥಿತಿ ಆಗಬಾರದು.

ಅಧ್ಯಕ್ಷರು.—ತಾವು ಸಾಕು ಮುಗಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ನಮ್ಮ ಕೆರೆಗಳ ಬಗ್ಗೆ ಒಂದೇ ಒಂದು ಮಾತು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರ್ಕಾರದವರು ನೀರು ಕಂದಾಯ ಹಾಕುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಒಂದು ಪರಿಸ್ಥಿತಿ ಇದೆ. ಅಲ್ಲಿ ಕುಂಟೆಗಳು ಇವೆ. ಒಂದು ಅಥವಾ ಎರಡು ತಿಂಗಳು ನೀರು ಇದ್ದರೆ, ಬಾವಿಗಳನ್ನು ನೀರು ಇರುತ್ತದೆ. ಅಲ್ಲಿ ನೀರು ಕಂದಾಯ ಹಾಕುತ್ತಾರೆ. ಸರ್ಕಾರ ಮಾಡಿದ ಕಾನೂನನ್ನು ಸರ್ಕಾರವೇ ವಿರೋಧಿಸುತ್ತದೆ. ಸಂಬಂಧಪಟ್ಟ ಫಾರಂನಲ್ಲಿ ತರೀ ಎಂದು ಬರೆದರೆ ನೀರು ಕಂದಾಯ ಹಾಕುತ್ತಾರೆ. ಇದು ತಪ್ಪಬೇಕು. ನೀರು ಸಪ್ಲೈ ಮಾಡಿದರೆ ಅವರು ಕಂದಾಯ ಹಾಕಬೇಕಿತ್ತು. ನಮ್ಮಲ್ಲಿ ವಿಪರೀತ ಬಾವಿಗಳು ಉಂಟು. ಬಾವಿಗಳಲ್ಲಿ ನೀರು ಸ್ಟೋರೇಜ್ ಆಗಿರುತ್ತದೆ. ಆದುದರಿಂದ ಈ ನೀರಿನ ಕಂದಾಯದ ಬಗ್ಗೆಯೂ ಹೆಚ್ಚಿನ ಗಮನ ಹರಿಸ ಬೇಕೆಂದು ಹೇಳಿ, ನಮ್ಮ ಜಿಲ್ಲೆಯ ಬಗ್ಗೆ ಇಷ್ಟು ದಿವಸ ಇರತಕ್ಕ ಮಲತಾಯಿ ಧೋರಣೆ ಬಿಟ್ಟು, ನ್ಯಾಯವಾದ ಧೋರಣೆಯನ್ನು ವಹಿಸಬೇಕೆಂದು ಹಾಗೂ ನಮ್ಮ ಜಿಲ್ಲೆಗೆ ಜಾಸ್ತಿ ಗ್ರಾಂಟ್ಸ್ ಕೊಡ ಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಸ್ವಲ್ಪ ಪೂರ್ವ ಭಾವಿ ಸಿದ್ಧತೆಯೊಂದಿಗೆ ಸೋಮವಾರ ಮಾತನಾಡಬೇಕೆಂದಿದ್ದೆ. ಆದರೆ ಸದನದಲ್ಲಿ ಹೊಮ್ಮೊಮ್ಮೆ ಹೊಸ ಸದಸ್ಯರಿಗೂ ಅವಕಾಶ ಸಿಕ್ಕಿರುವುದರಿಂದ ಹಾಗೂ ಸೋಮವಾರ ಅವಕಾಶ ದುರ್ಲಭವಾಗುವ ಕಾರಣದಿಂದ ನಾನು ಇವೊತ್ತು ಇಟ್ಟಿರುವ ಪಿ.ಡಬ್ಲ್ಯು.ಡಿ. ಮತ್ತು ನೀರಾವರಿ ಇಲಾಖೆಗಳ ಡಿಮ್ಯಾಂಡ್‌ನ ವಿಚಾರವನ್ನು ವಿರೋಧಿಸುತ್ತಾ, ಮಾತನಾಡುವುದಕ್ಕೆ ಬಯಸುತ್ತೇನೆ. ಕಾರಣ ಏನು ಎಂದರೆ ಇದಕ್ಕೆ ಇಟ್ಟಿರುವ ಹಣ ಏನೇನೂ ಸಾಲದು. ಆಗಿರುವ ಕಾಮಗಾರಿಗಳೂ ಅಸಮರ್ಪಕವಾಗಿದೆ, ಇದಕ್ಕೆ ನಾನು ವಿರೋಧವನ್ನು ವ್ಯಕ್ತ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ನಮಗೆ ಪರ್‌ಫಾರ್ಮೆನ್ಸ್ ಬಜೆಟ್‌ನಿಂದ, ಸ್ಟೇಟ್ ಹಣದಿಂದ, ನ್ಯಾಷನಲ್ ಹೈವೇ, ರಸ್ತೆಗಳ ಕೆಲಸ

ಕ್ಕಾಗಿ ಹಣ ಕೊಡುತ್ತೀರಿ. ಈಗ ಗ್ರಾಮೀಣ ರಸ್ತೆ ಬಗ್ಗೆ ಹೇಳುವುದಾದರೆ ಒಟ್ಟು ೩೩,೬೦೯ ಕಿಲೋಮೀಟರ್ ಅಷ್ಟು ರಸ್ತೆ ಇದೆ. ಅವರಲ್ಲಿ ಅಭಿವೃದ್ಧಿ ಆಗದೇ ಇರತಕ್ಕಂಥ ರಸ್ತೆಗಳು ಸಾಕಷ್ಟು ಇವೆ. ಪಾಟರ್‌ಬೋರ್ಡ್‌ನವರು ಎಲ್ಲೆಲ್ಲಿ ಕೆಲಸ ಮಾಡುತ್ತಾರೋ ಅಲ್ಲೆಲ್ಲಾ ಈಗಾಗಲೇ ನನ್ನ ಮಿತ್ರರು ಹೇಳಿದ ಹಾಗೆ ಆ ಡಾಂಬರ್ ರಸ್ತೆಗಳಲ್ಲಿ ಜಲ್ಲಿಗಳು ಎದ್ದು ಹೋಗಿ ಮಾಡಿದ ಕೆಲಸವೂ ಕೂಡ ವ್ಯರ್ಥವಾಗುತ್ತದೆ ಅಲ್ಲದೆ ಇದಕ್ಕೆ ಹಾಕಿರುವ ಹಣವೂ ಸಹ ನಿಷ್ಫಲ ಆಗುವ ಪರಿಸ್ಥಿತಿ ಬರುತ್ತದೆ. ಅನುಭವಿಗಳಾದ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಇದು ಏತಕ್ಕೆ ಹೀಗಾಗುತ್ತದೆ ಎನ್ನುವುದನ್ನು ಪರಿಶೀಲಿಸಬೇಕು. ಕೆಲವು ರಸ್ತೆಗಳ ಕೆಲಸ ಅರ್ಧಂಬರ್ಧವಾಗಿರುತ್ತವೆ. ಮಾಡಿದಂಥ ಕೆಲಸಗಳನ್ನು, ತೆಗೆದುಕೊಂಡಂಥ ಕೆಲಸಗಳನ್ನು ಸಂಪೂರ್ಣವಾಗಿ ಮಾಡಬೇಕೇ ವಿನಹ ಅರ್ಧಂಬರ್ಧ ಮಾಡಿದರೆ ವ್ಯರ್ಥವಾಗುತ್ತದೆ. ಈ ಬಗ್ಗೆ ತಾವು ಗಮನಹರಿಸಬೇಕು. ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ. ಹಿಂದೆ ಐ.ಸಿ.ಆರ್.ಟಿ. ಪ್ರೋಗ್ರಾಂ ಪ್ರಕಾರ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಲಾಯಿತು, ಮಿನಿಮಮ್ ನೀಡ್ಸ್ ಪ್ರೋಗ್ರಾಂ ಪ್ರಕಾರ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಲಾಯಿತು. ಈ ಐ.ಸಿ.ಆರ್.ಟಿ. ರಸ್ತೆಗಳು ಏನು ಇವೆ ಇವುಗಳನ್ನು ಫಾರ್ಮೇಷನ್ ಮಾಡುವಾಗ ಸರಿಯಾಗಿ ಫಾರ್ಮೇಷನ್ ಮಾಡದೇ ಮಾಡುತ್ತಾರೆ. ನನ್ನ ಜಿಲ್ಲೆಯ, ನನ್ನ ಕ್ಷೇತ್ರದ ವಿಚಾರ ಮಾತ್ರ ನಾನು ಹೇಳುತ್ತೇನೆ. ಮಧ್ಯೆ ಇರತಕ್ಕಂಥ ರಸ್ತೆಗಳನ್ನು ತೆಗೆದುಕೊಂಡು ಡಾಂಬರ್ ಮಾಡುವಾಗ ಬ್ಯಾಡ್ ಪೋರ್ಷನ್ ರಸ್ತೆ ಮೊದಲು ಮತ್ತು ಕೊನೆಯಲ್ಲಿ ಇರುವ ರಸ್ತೆಗಳನ್ನು ಏನೂ ರಿಪೇರಿ ಮಾಡದೆಯೇ ಹಾಗೆಯೇ ಬಿಟ್ಟುಬಿಟ್ಟರು. ಹಾಗೆಯೇ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲೂ ಕೂಡ ಮಾಡಿದ್ದಾರೆ. ಈ ರೀತಿಯಾಗಿ ಡಾಂಬರ್ ರಸ್ತೆಗಳನ್ನು ಮಧ್ಯೆ ಮಧ್ಯೆ ಎಲ್ಲಿ ಡ್ಯಾಮೇಜ್ ಆಗಿದೆಯೋ ಅಲ್ಲಲ್ಲಿ ಸ್ವಲ್ಪಸ್ವಲ್ಪ ರಿಪೇರಿ ಮಾಡಿ ಆರಂಭದಲ್ಲಿರುವುದನ್ನೂ, ಕೊನೆಯ ಪೋಷನ್‌ನಲ್ಲಿರುವ ಬ್ಯಾಡ್ ರಸ್ತೆಗಳನ್ನು ಬಿಟ್ಟುಬಿಡುತ್ತಾರೆ. ಈ ರಸ್ತೆಯ ಒಂದು ವ್ಯವಸ್ಥೆ ಹೀಗೆ ಇದೆ. ಈ ರೀತಿ ಏತಕ್ಕೆ ಆಯಿತು ಎಂದು ಅಧಿಕಾರಿಗಳಲ್ಲಿ ವಿಚಾರ ಮಾಡಿದಾಗ ಅದನ್ನು ಪುನಃ ಪರಿಶೀಲಿಸಿ ಸಮರ್ಪಕವಾದ ರೀತಿಯಲ್ಲಿ ಮಾಡುತ್ತೇವೆಂದು ಅವರು ಹೇಳಿದರು. ನಾನು ಹೇಳುವುದು ಏನೆಂದರೆ ರಸ್ತೆಗಳನ್ನು ಡಾಂಬರ್ ಮಾಡುವಾಗ ಮೊದಲೇ ಸಮರ್ಪಕವಾದ ರೀತಿಯಲ್ಲಿ ಮಾಡಿಬಿಟ್ಟರೆ ಪುನಃ ಅದಕ್ಕೆ ಹಣ ಹಾಕಬೇಕಾದ ಅಗತ್ಯ ಇರುವುದಿಲ್ಲ. ಇದರಿಂದ ಸರ್ಕಾರಕ್ಕೆ ಹಣವು ಉಳಿಯುತ್ತದೆ. ಮೊದಲೇ ಇಂತಿಷ್ಟು ಎಂದು ಹಣ ಕೊಟ್ಟು ರಸ್ತೆಗಳನ್ನು ಸಮರ್ಪಕವಾದ ರೀತಿಯಲ್ಲಿ ಮಾಡಬೇಕೆಂದು ನಾನು ಹೇಳುತ್ತೇನೆ. ಮಿನಿಮಂ ನೀಡ್ಸ್ ಪ್ರೋಗ್ರಾಂನಲ್ಲೂ ಸಹ ಮಾಡಬೇಕು. ಒಂದು ಗ್ರಾಮಕ್ಕೆ ಸಂಪರ್ಕ ರಸ್ತೆ ಎಂದು ಮಾಡುತ್ತೀರಿ. ಮಾಡುವಾಗ ಏನಾಗುತ್ತದೆ ಎಂದರೆ ಆ ಗ್ರಾಮದ ಕೊನೆಯಲ್ಲಿ ಅರ್ಧ ಕಿಲೋಮೀಟರ್ ರಸ್ತೆ ಬೇರೆ ಪಂಚಾಯಿತಿಗೆ ಅಥವಾ ಎಲ್ಲಿಗೋ ಸೇರಿರುತ್ತದೆ. ಆದುದರಿಂದ ಆ ರಸ್ತೆಯನ್ನು ಇವರು ತೆಗೆದುಕೊಳ್ಳುವುದಿಲ್ಲ. ಆ ರಸ್ತೆ ಮಾಡಲು ಹಣ ಮಂಜೂರಾತಿ ಆಗಬೇಕು ಎಂದು ಹೇಳುತ್ತಾರೆ. ಈ ರೀತಿಯಾಗಿ ತಜ್ಞರು ಕೊಡುವಂಥ ಒಂದು ಅಭಿಪ್ರಾಯದಲ್ಲಿ ಯಾವ ರೀತಿಯ ಅರ್ಥ ಬರುತ್ತದೆ ? ಅದಕ್ಕೆ ತಕ್ಕಂತೆ ಏನಾದರೂ ಒಂದು ಹೇಳುತ್ತಾರೆ. ಗ್ರಾಮಾಂತರ ಹಳ್ಳಿಗಳಿಗೆ ಹೋಗುವಂಥ ರಸ್ತೆಯನ್ನು ಮಾಡಬೇಕಾದ ಸಂದರ್ಭದಲ್ಲಿಯೂ ಹೀಗೆಯೇ ಆಯಿತು. ಹೀಗೆಯೇ ಅನೇಕ ಲಿಂಕ್ಸ್ ರಸ್ತೆಗಳೂ ಕೊನೆಗೆ ಎಂಡ್ ಆಗಬೇಕಾದ ರಸ್ತೆಗಳು ಮಾಡದೇ ನಿಂತುಹೋಗಿವೆ. ಇನ್ನು ಟೇಕನ್ ಓವರ್ ರೋಡ್ಸ್‌ನಲ್ಲೂ ಬೇಕಾದಷ್ಟು ಹೇಳಬೇಕಾದ್ದು ಇದೆ. ನನ್ನ ಕ್ಷೇತ್ರವಾದ ಸಿದ್ದಾಪುರ ತಾಲ್ಲೂಕಿನ ಎಡತಲಹಳ್ಳಿ ಗ್ರಾಮಕ್ಕೆ ಸೇರಿದ ಹಾಗೆ ೪೫ ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಮೊದಲು ಮಾಡಿದರು. ಮಾಜಿ ವಿಧಾನಸಭಾ ಸದಸ್ಯರೊಬ್ಬರ ಪ್ರಯತ್ನದಿಂದ ಅದು ಆಯಿತು. ಆದರೆ ಆ ಊರಿಗೆ ಬಸ್ ಪ್ರಯಾಣ ಮಾಡುವ ಸಲುವಾಗಿ ಆರಂಭದ ೬ ಮೈಲು ಕೊನೆಯ ೬ ಮೈಲು ಅನ್ನು ಡಾಂಬರ್ ರಸ್ತೆಯನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದೆವು. ಕಳೆದ ವರ್ಷ ಆರಂಭದಲ್ಲಿ ಏನು ಕೆಲಸ ಮಾಡಿದರು ಎಂದರೆ ಮಧ್ಯದ ಒಂದು ಪೋಷನ್‌ಗೆ ಮಾತ್ರ ೩–೪ ಕಿಲೋಮೀಟರ್ ಅಷ್ಟು ರಸ್ತೆ ಮಾಡಿದರು. ಆ ರಸ್ತೆಯ ಕೆಲಸವನ್ನು ಅವರು ಚೆನ್ನಾಗಿ ಮಾಡದೆ ಅಲ್ಲಿ ಈಗ ಮಣ್ಣು ಎದ್ದು ಕಾಣುತ್ತಾ ಇದೆ. ರಸ್ತೆ ಕಾಮಗಾರಿ ಕೆಲಸಗಳನ್ನು ಈ ರೀತಿಯಾಗಿ ಮಾಡುತ್ತಾರೆ. ಈ ವರ್ಷವೂ ಕೂಡ ಆ ಕೆಲಸ ಅಪೂರ್ಣವಾಗಿ ಹಾಗೆಯೇ ನಿಂತಿದೆ. ಇತ್ತೀಚೆಗೆ ಒಬ್ಬ ಕಾಸರಗೋಡಿನ ಕಂಟ್ರಾಕ್ಟ್ ಅರ್ಧಂಬರ್ಧ ಕೆಲಸ ಮಾಡಿ ಹೋಗಿದ್ದಾರೆ. ಆ ರಸ್ತೆ ಸರಿಯಾಗಿ ಮಾಡದೇ ಇರುವುದರಿಂದ ಬಸ್ ಹೋಗುವುದಕ್ಕಾಗುವುದಿಲ್ಲ. ಈಗ ಆ ಭಾಗದ ಜನರಿಗೆ ಅನಾನುಕೂಲವಾಗಿದೆ. ಆರಂಭದಲ್ಲೂ ರಸ್ತೆ ಕೆಲಸ ಸರಿಯಾಗಿ ಮಾಡಿಲ್ಲ, ಕೊನೆಯ ಭಾಗದಲ್ಲೂ ರಸ್ತೆ ಸರಿಯಾಗಿಲ್ಲ, ಮಧ್ಯದ ಪೋರ್ಷನ್ಸ್ ಮಾತ್ರ ಸ್ವಲ್ಪ ಮಾಡಿಬಿಟ್ಟು ಹೋಗಿದ್ದಾರೆ. ಈ ರೀತಿಯಾದರೆ ಜನರ ಪ್ರಮಾಣದ ಸ್ಥಿತಿ ಏನು ? ಆ ಊರಿಗೆ ಬಸ್ಸು ಹೋಗುವುದಕ್ಕೆ ಕಷ್ಟವಾಗಿದೆ, ಪ್ರಯಾಣಿಕರಿಗೆ ತುಂಬಾ ಕಷ್ಟವಾಗಿದೆ. ಅಲ್ಲ ಅರ್ಧಂಬರ್ಧ ರಸ್ತೆ

ಕಾಮಗಾರಿ ಕೆಲಸಗಳನ್ನು ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಆ ಊರಿನ ರಸ್ತೆಗಳನ್ನು ಸಮರ್ಪಕವಾಗಿ ಮಾಡಿಕೊಟ್ಟು ಪ್ರಯಾಣಿಕರಿಗೆ ಅನುಕೂಲವಾಗುವ ಹಾಗೆ ಬಸ್ ಓಡಿಸುವ ಹಾಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೇತುಬಂಧನ ವಿಚಾರದಲ್ಲಿ ಹೇಳುವುದಾದರೆ ಈ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿರುವುದರಿಂದ ಇದನ್ನು ಪುನರಾಲೋಚನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಬೈಂದೂರಿನ ಸಮಗ್ರ ರಸ್ತೆ ಕಾಮಗಾರಿಗಳ ಬಗ್ಗೆ ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದಿದ್ದಾಗ ಅಲ್ಲಿಯ ದೇವಸ್ಥಾನದವರು ಒಂದು ಮನವಿ ಕೊಟ್ಟಿದ್ದಾರೆ. ಅಲ್ಲಿ ಒಂದು ಸೇತುವೆ ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಕೊಲ್ಲೂರಿನ ಬಡಾಕೆರೆ ಹೊಳೆಗೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಹೋದವರ್ಷದ ಬಡ್ಜೆಟ್‌ನಲ್ಲಿ ತೋರಿಸಿದ್ದೀರಿ. ಆದರೆ ಆ ವರ್ಷ ಆ ಕೆಲಸ ಆಗಲಿಲ್ಲ, ಕಾರಣಾಂತರದಿಂದ ಅದನ್ನು ತಡೆ ಹಿಡಿದಿದ್ದೀರಿ. ಮುಂದಿನ ವರ್ಷವೂ ಅದರ ಬಗ್ಗೆ ಹಣ ಮಂಜೂರಾಗಲಿಲ್ಲ. ಇದರ ಬಗ್ಗೆ ತೀವ್ರವಾಗಿ ಒತ್ತಾಯ ಇದೆ. ನಾನು ಇದಕ್ಕೆ ಒಂದು ಪತ್ರವನ್ನೂ ಸಹ ಬರೆದಿದ್ದೇನೆ. ಸಂಬಂಧಪಟ್ಟ ಇಲಾಖೆಗೂ ಕಳುಹಿಸಿದ್ದೇನೆ. ನಮಗೆ ಉತ್ತರ ಅವರು ಬರೆದಿದ್ದಾರೆ. ಇದೇ ರೀತಿಯಾಗಿ ಕಳೆದ ವರ್ಷ ಅನೇಕ ಕೆಲಸಗಳನ್ನು ಬಡ್ಜೆಟ್‌ನಲ್ಲಿ ತೆಗೆದುಕೊಳ್ಳಲಾಯಿತು. ೧೦೦೦೦ ರೂಪಾಯಿಗಳನ್ನು ಟೋಕನ್ ಆಗಿ ಕಾಣಿಸಲಾಗಿತ್ತು. ಈ ಬಡ್ಜೆಟ್‌ನಲ್ಲೂ ಸಹ ಅದು ಮಂಜೂರಾಗಿದೆ. ಈ ವರ್ಷವೂ ಬಿಟ್ಟು ಹೋಗಿದೆ ಎಂದು ಅನೇಕ ಸ್ನೇಹಿತರು ಹೇಳಿದ್ದಾರೆ. ಅದಕ್ಕೋಸ್ಕರ ಈ ಒತ್ತಾಯ ಬಂದಿದೆ. ನಾನು ಈಗ ಹೊಸ ಸದಸ್ಯನಾಗಿರುವುದರಿಂದ ನನ್ನ ಸಂಶಯವನ್ನು ಮಾನ್ಯ ಸಚಿವರಿಗೆ ವ್ಯಕ್ತಪಡಿಸುತ್ತೇನೆ. ಯಾವುದೇ ಒಂದು ಕಾಮಗಾರಿ ಕೆಲಸ ಆ ವರ್ಷದ ಸದನದಲ್ಲಿ ಅಂಗೀಕರಿಸಿ ಮಂಜೂರಾದಾಗ ಅದು ಒಂದು ಸಾವಿರ ರೂಪಾಯಿನ ಕೆಲಸವೇ ಇರಲಿ, ೫೦೦ ರೂಪಾಯಿನ ಇರಲಿ ಅದು ಆ ವರ್ಷ ಆಗದೇ ಇದ್ದಾಗ ಅದನ್ನು ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಡಿಲೀಟ್ ಮಾಡುವುದು ನ್ಯಾಯವೇ ? ಹಾಗೆ ಮಾಡಿದರೆ ಅದು ಸದನಕ್ಕೆ ಅಗೌರವ ಮಾಡಿದ ಹಾಗಾಗುವುದಿಲ್ಲವೇ ? ಎನ್ನತಕ್ಕಂಥ ಪ್ರಶ್ನೆಯನ್ನು ನಾನು ತಮ್ಮ ಮುಂದೆ ಇಡುತ್ತೇನೆ. ಕರ್ನಾಟಕದ ಜನತೆಗೆ ಮುಂದೆ ನಾವು ಇಂಥ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಕಾರಣಾಂತರದಿಂದ ತಡೆ ಹಿಡಿದು ಅದಕ್ಕೆ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದರೆ ಅದು ಲೋಪ ಅಲ್ಲವೇ? ಜನರ ಭ್ರಮೆಯನ್ನು ನಿರಾಸೆ ಮಾಡಿದರೆ ಮುಂದಿನ ವಿಧಾನಸಭಾ ಚುನಾವಣೆಗೆ ಯಾವ ಒಂದು ಆಮಿಷ ತೋರಿಸಿದರೂ ಕೂಡ ಅವರಿಗೆ ಸಮಾಧಾನ ಬರುವುದಿಲ್ಲ. ಖಂಡಿತ ಆ ರೀತಿ ಆಗಬಾರದು. ಅದು ಮಾತ್ರವಲ್ಲ, ಈ ಸದನದಲ್ಲಿ ಮಂಜೂರಾದಂಥ ಬಡ್ಜೆಟ್ಟನ್ನು ತೆಗೆದುಹಾಕತಕ್ಕಂಥದ್ದು, ನನ್ನ ದೃಷ್ಟಿಯಲ್ಲಿ ಈ ಸದನಕ್ಕೆ ಅಗೌರವ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ.

೫-೦೦ ಪಿ. ಎಂ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮೈನರ್ ಇರಿಗೇಷನ್ ದೃಷ್ಟಿಯಿಂದ ಬಹಳಷ್ಟು ಅಲಕ್ಷಿಸಲ್ಪಟ್ಟಿದೆ. ಹಿಂದೆ ಆದ ಡ್ಯಾಂಗಳಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಣೆ ಇಲ್ಲ. ಪೆಲ್ಟರ್ಸ್ ಎಲ್ಲೆಲ್ಲಿ ಇದೆ, ಆ ಪೆಲ್ಟರ್ಸ್‌ಗೆ ಬೇಕಾದರೆ ಕೋನಗಳನ್ನಾದರೂ ರಚಿಸಲಿಲ್ಲ. ಅವುಗಳನ್ನು ಯಾರೂ ನಿರ್ವಹಣೆ ಮಾಡದೆ ಸರಿಯಾದ ವ್ಯವಸ್ಥೆಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ಗಂಟೆ ಹೊಳೆ ಇದೆ, ಅದರ ಕಟ್ಟೆ ಹೊಡೆದು ಹೋಯಿತು ಇದರ ಬಗ್ಗೆ ಸರ್ಕಾರಕ್ಕೆ ಮನವಿಗಳನ್ನು ಕೊಟ್ಟರೂ ಏನೂ ಆಗಲಿಲ್ಲ. ಪ್ರಥಮ ಬೆಳೆಗೆ ಮಳೆ ನೀರನ್ನು ತಡೆಯಲಿಕ್ಕೆ ಬೇಕಾದಂಥ ದುಡ್ಡು. ಅದಕ್ಕೆ ಕಟ್ಟೆ ಕಟ್ಟುವ ಬದಲು ಎರಡನೆಯ ಬೆಳೆಗೆ ಬೇಕಾದಂಥ ಕಟ್ಟೆ ಕಟ್ಟಲಾಯಿತು. ಇದರ ಪರಿಣಾಮವಾಗಿ ಪೆಲ್ಟರ್ಸ್ ಹಾಕಲಿಕ್ಕೆ ಆಗಲಿಲ್ಲ ನೀರು ಸಿಕ್ಕುವುದಿಲ್ಲ. ಹೀಗಾಗಿ ಅದು ನಿಷ್ಫಲವಾಗಿದೆ. ಅಲ್ಲದೆ ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿದರೂ ಅದರಿಂದ ಯಾರಿಗೂ ಪ್ರಯೋಜನವಾಗಿಲ್ಲ. ಆದುದರಿಂದ ಈ ಕಾಮಗಾರಿಗಳನ್ನು ತಾವು ಪುನರ್‌ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಒಂದು ಮೇಜರ್ ಇರಿಗೇಷನ್ ಪ್ರಾರಂಭ ಮಾಡಲಿಕ್ಕೆ ಅನುಕೂಲವಾಗಿದೆ. ಮೇಜರ್ ಇರಿಗೇಷನ್ ಅಂದ ಕೂಡಲೇ ಕೃಷ್ಣ, ಹಾರಂಗಿ ಕುರಿತಂತೆ ಬರುತ್ತದೆ, ನಾನು ಅದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾರಾಹಿ ಕುರಿತು ಒಂದು ಮಾತನ್ನು ಹೇಳಲೇಬೇಕು. ಇದು ಒಂದು ಕಾಲದಲ್ಲಿ ಮಂಜೂರಾದ ಯೋಜನೆ. ವಾರಾಹಿ ಜಲವಿದ್ಯುತ್ ಯೋಜನೆ ಆದನಂತರ ಅದರ ಟೈಲ್‌ವೇ ವಾಟರ್ ವ್ಯರ್ಥವಾಗಿ ಸಮುದ್ರಕ್ಕೆ ಹರಿದುಹೋಗುವಂಥಾದ್ದು ಇದ್ದು ಅದಕ್ಕೆ ಒಂದು

ಕಟ್ಟಿ ಕಟ್ಟಿ ಉಡುಪಿ, ಕುಂದಾಪುರ ತಾಲ್ಲೂಕುಗಳ ೩೬ ಸಾವಿರ ಎಕರೆಗಳಿಗೆ ನೀರು ಕೊಡಬಹುದು ಎಂದು ಮಾಡಲಾಯಿತು. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦೦೦ ಎಕರೆಯಲ್ಲಿ ಕಬ್ಬು ಬೆಳೆಯುತ್ತಿದೆ. ಸಕ್ಕರೆ ಕಾರ್ಖಾನೆ ಮಾಡಿದರೆ ಲಾಭವಾಗುತ್ತದೆ ಎನ್ನುವ ದೃಷ್ಟಿಯಿಂದ ಬ್ರಹ್ಮಾವರದಲ್ಲಿ ೮ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಕ್ಕರೆ ಕಾರ್ಖಾನೆ ಕೂಡ ಪ್ರಾರಂಭವಾಯಿತು. ಮಾನ್ಯ ಅಧ್ಯಕ್ಷರೆ, ಈಗ ಏನಾಯಿತು ಎಂದರೆ ಕಳೆದ ವರ್ಷ ಮಾನ್ಯ ಸಚಿವರು ಬಂದಾಗ ಈ ಯೋಜನೆ ಮುಗಿಯಲಿಕ್ಕೆ ೨೦ ವರ್ಷಗಳು ಬೇಕು ಎನ್ನುವ ಮಾತನ್ನು ಹೇಳಿ ಹೋದರು. ಇದರಿಂದ ಲಕ್ಷಾಂತರ ಜನರಿಗೆ ನಿರಾಶೆಯಾಗಿದೆ. ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಕೇಂದ್ರದ ನೆರವು ಬರದೆ ಈ ಯೋಜನೆಯನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ೧೮೦೦ ಹೆಕ್ಟೇರ್ ಅರಣ್ಯಭೂಮಿ ನಾಶವಾಗುತ್ತದೆ. ಇಕಲಾಜಿಕಲ್ ಬ್ಯಾಲೆನ್ಸ್ ತಪ್ಪಿಹೋಗುತ್ತದೆ ಎನ್ನುವಂಥ ವಿಚಾರವನ್ನು ಸದನದ ಮುಂದೆ ಇಟ್ಟರು. ಇತ್ತೀಚೆಗೆ ಸಂಬಂಧಪಟ್ಟ ಅಧಿಕಾರಿಗಳು ನೋಡಲಿಕ್ಕೆ ಬಂದಿದ್ದರು. ಹಿಂದೆ ಮಾಡಿದಂಥ ಯೋಜನೆ ದೊಡ್ಡ ಜಲವಿದ್ಯುತ್ ಯೋಜನೆಯೂ ಬೇಡ, ೯೦ ಕೋಟಿಯೂ ಬೇಡ, ೧೮೦೦ ಹೆಕ್ಟೇರ್ ಮುಳುಗಿಸುವುದೂ ಬೇಡ, ಇಕಲಾಜಿಕಲ್ ಬ್ಯಾಲೆನ್ಸ್ ತಪ್ಪಿಸುವುದೂ ಬೇಡ, ಮೊದಲು ಮಾಡಿದ ೯ ಕೋಟಿ ಯೋಜನೆ ರಿವೈಸ್ಡ್ ಎಸ್ಟಿಮೇಟ್ ೧೦–೧೨ ಕೋಟಿ ಆಗಬಹುದು, ಕೇವಲ ಮುಳುಗಡೆಯಾಗುವುದು ೧೦೦ ಹೆಕ್ಟೇರ್ ಭೂಮಿ. ವ್ಯಾಲಿಯ ಕೆಳಗಿನ ಭಾಗದಲ್ಲಿ ಮರಗಳು ಹೆಚ್ಚಿಗೆ ಇರುವುದಿಲ್ಲ, ಬ್ಯಾಲೆನ್ಸಿಗೆ ತೊಂದರೆಯಾಗುವುದಿಲ್ಲ, ಪ್ರತಿ ವರ್ಷ ನೈಸರ್ಗಿಕ ಪ್ರಕೋಪಕ್ಕೆ ತುತ್ತಾಗುವಂಥ ಜಾಗ ಬರುತ್ತದೆ, ದೊಡ್ಡ ಯೋಜನೆ ೯೦ ಕೋಟಿ, ೬೦ ಸಾವಿರ ಹೆಕ್ಟೇರ್‌ಗೆ ಇರಿಗೇಟ್ ಆಗುವುದಿದ್ದರೆ ಹಿಂದಿನ ಯೋಜನೆ ಪ್ರಕಾರ ೩೬ ಸಾವಿರ ಎಕರೆ ಇರಿಗೇಟ್ ಆಗುತ್ತದೆ. ಇದು ಇರಿಗೇಟ್ ಆಗುವ ಪ್ರಮಾಣ. ಈ ಜಲವಿದ್ಯುತ್ ಯೋಜನೆಯಿಂದ ವಿದ್ಯುತ್ ಉತ್ಪಾದನೆ ಒಂದೇ ಅಲ್ಲ ಇಷ್ಟು ಹೆಕ್ಟೇರಿಗೆ ನೀರಾವರಿಯಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಖಂಡಿತವಾಗಿ ತೆಗೆದುಕೊಳ್ಳಬೇಕು ಈ ಸಲವೇ ತಾವು ಆಶ್ವಾಸನೆ ಕೊಡಬೇಕು. ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ಮನಸ್ಸು ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ದೊಡ್ಡ ವರ ಕೊಟ್ಟ ಹಾಗೆ ಆಗುತ್ತದೆ. ಸರ್ಕಾರ ಪ್ರಾರಂಭ ಮಾಡಿದಂಥ ೮ ಕೋಟಿಯ ಸಕ್ಕರೆ ಕಾರ್ಖಾನೆ ವ್ಯರ್ಥವಾಗದ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ೭ನೇ ಯೋಜನೆಯಲ್ಲಿ ಬಹಳಷ್ಟು ಹೊಸ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು ಎನ್ನುವ ಸೂಚನೆ ಬಂದಿದೆ. ಬಜೆಟ್‌ನಲ್ಲಿಯೂ ಹೇಳಿದ್ದೀರಿ. ಅದಕ್ಕೆ ಇದನ್ನೂ ಒಂದು ಸೇರಿಸಿಬಿಡಿ. ಈಗಲೇ ಆಶ್ವಾಸನೆ ಕೊಟ್ಟು ಸೇರಿಸಿಬಿಡಿ ಎಂದು ಕೇಳುತ್ತಾ ಇದ್ದೇನೆ. ಇದರ ಜೊತೆಗೆ ಚಕ್ರ ಡೈವರ್ಷನ್ ವಿಚಾರದ ಬಗ್ಗೆ ಸಣ್ಣ ಮಾತನ್ನು ಹೇಳಬೇಕಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ ಜಲವಿದ್ಯುತ್ ಯೋಜನೆಗೆ ಬೇಕಾದಷ್ಟು ನೀರು ಸಾಕಾಗುವುದಿಲ್ಲ, ಎಂದು ಚಕ್ರ ಮತ್ತು ಸಾವೆ ಹಕ್ಲು ಎನ್ನುವಂಥ ಎರಡು ಅಣೆಕಟ್ಟುಗಳನ್ನು ಕಟ್ಟಿ ಅದರಿಂದ ನೀರನ್ನು ಲಿಂಗನಮಕ್ಕಿ ಡ್ಯಾಮಿಗೆ ಕೊಂಡೊಯ್ಯುವಂಥ ವ್ಯವಸ್ಥೆಯಾಗಿದೆ. ಇದರ ಪರಿಣಾಮ ಏನಾಗಿದೆಯೆಂದರೆ ಚಕ್ರನದಿಯಲ್ಲಿ ನೀರು ಕೆಳಗೆ ಇಳಿದು ಬರುತ್ತಿದೆ. ಇದರಿಂದಾಗಿ ಕುಂದಾಪುರದ ೮–೧೦ ಗ್ರಾಮಗಳಲ್ಲಿ ಭತ್ತ, ಕಬ್ಬು, ತೆಂಗು ಮತ್ತು ಮತ್ತು ಅಡಿಕೆ ಬೆಳೆಯುವಂತ ಪ್ರದೇಶದ ಸಹಸ್ರಾರು ರೈತರಿಗೆ ತೊಂದರೆಯಾಗುತ್ತಿದೆ. ಈ ವಿಚಾರವನ್ನು ಕಳೆದ ಬಾರಿ ಮಾನ್ಯ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಮುಂದೆ ಇಟ್ಟಿದ್ದೆ. ಅವರನ್ನು ಹುಡುಕಿಕೊಂಡು ಹೋಗಿ ಒಂದು ದೇವಸ್ಥಾನದಲ್ಲಿ ಮನವಿ ಕೊಟ್ಟೆ. ಮಾನ್ಯ ಸಚಿವರು ಕುಂದಾಪುರದಲ್ಲಿ ತಂಗುತ್ತಾರೆ ಎಂದು ಟೂರ್ ಪ್ರೋಗ್ರಾಂನಲ್ಲಿತ್ತು. ಆ ದಿನ ಅವರ ದರ್ಶನ ಆಗಲಿಲ್ಲ. ಮಾರನೆಯ ದಿನ ಗಣಪತಿ ಸನ್ನಿಧಿಯಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ದರ್ಶನವಾಯಿತು ಮನವಿಕೊಟ್ಟು ಈ ವಿಚಾರ ಹೇಳಿದೆ. ಸ್ಟಡಿ ಟೀಮನ್ನು ಅಲ್ಲಿಗೆ ಕಳುಹಿಸುತ್ತೇನೆ ಎನ್ನುವ ಮಾತನ್ನು ಅವರು ಆಗ ಹೇಳಿದರು. ಅವರಿಗೆ ಹೇಳಿದ್ದಾರೋ ಅಥವಾ ಸ್ಟಡಿ ಟೀಮಿನವರು ಬರಲಿಲ್ಲವೋ ನಮ್ಮ ಜನರ ದುರ್ದೈವ, ಈಗ ಅಲ್ಲಿಗೆ ಬಂದರೆ ಗೊತ್ತಾಗುವುದಿಲ್ಲ, ನೀರು ತುಂಬಿದೆ. ಈ ಅಣೆಕಟ್ಟಿನಿಂದಾಗಿ ಪರಂಪರೆಯಿಂದ ನೀರು ಬರುತ್ತಿರುವ ಒಂದು ಸಾವಿರ ಎಕರೆಗೆ ತೊಂದರೆ ಆಗಬಾರದು, ರೈತರ ಆಕ್ರೋಶಕ್ಕೆ ಇವರು ಗುರಿಯಾಗುತ್ತಾರೆ. ಸಾವಿರಾರು ರೈತರಿಗೆ ಕಷ್ಟ ಪರಿಸ್ಥಿತಿ ಇದೆ. ಇದರ ಕುರಿತು ಪರಿಶೀಲನೆ ಮಾಡಬೇಕು, ನೋಡಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದೆ ಇದರಲ್ಲಿ ಬಂದರು ಒಳನಾಡು, ಜಲಸಾರಿಗೆ ವಿಚಾರ ಸಹ ಬರುವುದಿಲ್ಲ. ಎಂದು ಕಾಣುತ್ತದೆ. ಹಾಗಿದ್ದಲ್ಲಿ ಫ್ಲಡ್ ಕಂಟ್ರೋಲ್ ಸಮುದ್ರದ ಕೊರೆತ ಏನು ಬರುತ್ತದೆ. ಅದರ ವಿಚಾರವನ್ನು ಕೊನೆಯದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಯಾರೂ ಈ ವಿಚಾರವನ್ನೂ ಹೇಳಲಿಲ್ಲ ಎಂದು ಕಾಣುತ್ತದೆ. ಸಮುದ್ರದ ಕೊರೆತ ನಮ್ಮ ಜಿಲ್ಲೆಯಲ್ಲಿ ವಿಪರೀತವಾಗಿದೆ. ಕಳೆದ ಅಧಿವೇಶನದಲ್ಲಿ ಈ ಮಾತು ಬಂದಿತ್ತು. ಕೇರಳದ ತೀರದಲ್ಲಿ ಯಾವ ರೀತಿ ಕೇಂದ್ರದ ನೆರವು ಪಡೆದು ಸಮುದ್ರದ ಕೊರೆತವನ್ನು

ತಡೆಗಟ್ಟಲಿಕ್ಕೆ ಮಾಡಿದ್ದಾರೋ ಅದೇ ರೀತಿ ಇಲ್ಲಿಯೂ ಪ್ರಯತ್ನ ಆಗಬೇಕು ಎನ್ನುವಂಥ ಮಾತು ಬಂದಾಗ ಮಾನ್ಯ ಸಚಿವರು ಕೇಂದ್ರಕ್ಕೆ ಮನವಿ ಮಾಡಿ ಕೊಡಿದ್ದೇವೆ ಎಂದು ಹೇಳಿದರು. ಆದು ಅಧ್ಯಯನ ತಂಡ ಬಂದು ಹೋದನಂತರ ಅವರ ವರದಿಯನ್ನು ನೋಡಿದಾಗ ಮಂಗಳೂರು ಬಾಪುರೆ ಉಡುಪಿಯವರೆಗೆ ಮಾತ್ರ ಇರುತ್ತದೆ, ಮುಂದೆ ಕುಂದಾಪುರ ತಾಲ್ಲೂಕು ಇದೆ. ಮಾನ್ಯ ಪ್ರತಾಪ ಚಂದ್ರ ಶೆಟ್ಟರು ಹೇಳುತ್ತಾ ಇರುತ್ತಾರೆ. ಸಂಪರ್ಕ ರೋಡ್‌ಗಳು ಹಾಳಾಗುತ್ತವೆ. ನನ್ನ ಕ್ಷೇತ್ರದಲ್ಲಿ ಮರವಂತೆ ಎನ್ನುವಂಥ ಭಾಗದಲ್ಲಿ ನ್ಯಾಷನಲ್ ಹೈವೇ ಪ್ರೊಟೆಕ್ಟ್ ಮಾಡುವಂತಾದ್ದು ಒಂದನ್ನು ಬಿಟ್ಟರೆ ಉಳಿದ ಕಡೆ ಯಾವ ಕೆಲಸವೂ ಆಗಲಿಲ್ಲ. ಸಮುದ್ರದ ಕೊರೆತ ಒಂದು ಕಡೆ, ಇನ್ನೊಂದು ಕಡೆ ಉಪ್ಪಿನ ಕುದುರು ಎನ್ನುವಂಥ ಭಾಗ ಇದೆ. ಅನೇಕ ಭಾಗಗಳಲ್ಲಿ ಕುದುರಿನ ಭಾಗವೇ ಸಮುದ್ರಕ್ಕೆ ಸೇರುತ್ತಿದೆ. ತೆಂಗಿನ ಮರಗಳು ಹೋಗುತ್ತಿವೆ, ಮನೆಗಳು ಹೋಗುತ್ತಿವೆ ಕೆಲವು ಭಾಗಗಳಲ್ಲಿ ಪ್ರೊಟೆಕ್ಷನ್ ಮಾಡಲಿಕ್ಕೆ ಸಾಧ್ಯವಿದೆ. ಕೆಲವು ಕಡೆ ರೈತರೇ ಕಟ್ಟುಕೊಂಡಿದ್ದಾರೆ. ರೈತರಿಂದ ಮಾಡಿದಂಥ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಭೂಸುಧಾರಣಾ ಕಾಯಿದೆ ಬಂದಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿಕ್ಕ ರೈತರು ಜಾಸ್ತಿ ಇದ್ದಾರೆ, ಆದುದರಿಂದ ಈ ಕೆಲಸವನ್ನು ಸರ್ಕಾರ ಸಮಗ್ರವಾಗಿ ಮಾಡಿಕೊಡಬೇಕು ಎನ್ನುವಂಥ ಮಾತನ್ನು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷರು ಈಗಾಗಲೇ ಸಮಯವನ್ನು ನಿಗದಿ ಮಾಡಿದ್ದಾರೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ನನಗೆ ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇವೊತ್ತು ನಾನ್ ಅಫಿಷಿಯಲ್‌ಬಿಸಿನೆಸ್ಸ್ ಡೇ. ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಒಂದು ಪ್ರಕಟಣೆ ಇದೆ.

ANNOUNCEMENT

MR. SPEAKER.—I have received the following message from the Chairman, Legislative Council:

> As required by Rules 114 of the Rules of procedure and Conduct of Business in Legislative Council, I send herewith the following Bills which have been agreed to by the Legislative Council on 9-8-1985. without amendments.
>
> Name of the Bills:

1 The Karnataka Money Lenders (Amendment) Bill, 1985

2 The Karnataka pawn Brokers (Amendment) Bill, 1985.

3 The Karnataka Essential Articles (Control) Bill 1985.

ಇಂದಿನ ಸಭೆಯನ್ನು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ಐದು ಗಂಟೆ ಹತ್ತು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧೨ನೇ ಆಗಸ್ಟ್ ೧೯೮೫ರ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)